THE BOOK WAS DRENCHED

Noise Book

Damage Book

TEXT LITE WITHIN THE BOOK ONLY

UNIVERSAL
LIBRARY
OU_198928
UNIVERSAL
LIBRARY

71

# SATHYAVATHI CHARITHRE

**A translation of**

**Rao Bahadur, K. Viresalingam Pantulu's Work**

# ಸತ್ಯವತೀ ಚರಿತ್ರೆ

ನಂಜನಗೂಡು

ಅನಂತನಾರಾಯಣಶಾಸ್ತ್ರಿಗಳಿಂದ

ರಚಿಸಲ್ಪಟ್ಟುದು

ತೃತೀಯಮುದ್ರಣ

(REVISED EDITION)

**ಮೈಸೂರು :**

ಶ್ರೀನಿವಾಸಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು

1916

*(Copyright Regestered)*

**Price 6 Annas]** [ಕ್ರಯ ೬ ಆಣೆ.

# ಸತ್ಯವತೀಚರಿತ್ರೆ.

## ಒಂದನೆಯ ಪ್ರಕರಣ.

ಮಾರ್ಗಶೀರ್ಷಮಾಸ ಬಂತು. ಸತ್ಯವತಿಯು ಜನವರಿಯ ವಿಶ್ರಾಂತಿ ದಿನಗಳನ್ನು ಜ್ಞಾಪ್ತಿಗೆ ತಂದುಕೊಂಡು ಪತಿಯ ಆಗಮನವನ್ನೇ ಇದಿರುನೋಡು ತ್ತಿದ್ದಳು. ಆಗ ಆಕೆಗೆ ನಿಮಿಷವೇ ಒಂದು ಯುಗವಾಗಿದ್ದಿತು. ಎಲೌ ನಾರೀ ಮಣಿಗಳಿರಾ! ಈ ಮಾತು ನಿಮ್ಮ ಕಿವಿಗೆ ಸೋಕಿದೊಡನೆಯೇ ಸತ್ಯವತಿ ಯಾರೊ? ಆಕೆಯ ಪತಿಯಾರೊ? ತಿಳಿದುಕೊಳ್ಳಬೇಕೆಂಬ ಕುತೂಹಲವುಂಟಾಗಬಹುದು. ಅದನ್ನು ನಿಮಗೆ ತಿಳಿಸುತ್ತೇನೆ. ಆದರೆ ನಮ್ಮ ಪುರಾಣಗಳಲ್ಲಿರುವಂತೆ ಹತ್ತು ತಲೆ ಗಳುಳ್ಳವರೂ, ಸಾವಿರಕೈಯುಳ್ಳವರೂ, ಸಮುದ್ರವನ್ನು ಒಂದು ತೊಟ್ಟು ನೀರೂ ಇಲ್ಲದಂತೆ ಕುಡಿದವರೂ, ಭೂಮಿಯನ್ನೆಲ್ಲಾ ಚಾಪೆಯಂತೆ ಸುತ್ತಿದವರೂ, ಅವ ರಲ್ಲಿ ಒಬ್ಬರೂ ಇಲ್ಲ. ಅಂತಹ ಅದ್ಭುತಗಳು ಹುಟ್ಟುವ ಕಾಲವೂ, ಅವುಗಳ ನ್ನೆಲ್ಲಾ ನಂಬುವ ಕಾಲವೂ, ಬಹು ವರ್ಷಗಳ ಹಿಂದೆಯೇ ಕಳೆದುಹೋಯಿತು. ನಮ್ಮ ಶೃಂಗಾರಪ್ರಬಂಧಗಳಂತೆ ವನವಿಹಾರ, ಜಲಕ್ರೀಡೆ, ವಧೂವರರು ಒಬ್ಬ ರನ್ನೊಬ್ಬರು ವರಿಸುವುದು, ಮುಂತಾದ ವರ್ಣನೆಗಳೂ ಅವರಲ್ಲಿ ಎಲ್ಲಿಯೂ ಕಾಣ ಬರುವುದಿಲ್ಲ. ಸ್ತ್ರೀಯರು ಸ್ವತಂತ್ರರಾಗಿ ತಮ್ಮ ಒಡನಾಡಿಯರ ಸಂಗಡ ವನವಿಹಾರ ಮಾಡುವ ಮಾತು ಈಗ ಕನಸಿನ ಸುದ್ದಿಯಾಯಿತು. ಜಲಕ್ರೀಡೆಯು ಪುಸ್ತಕ ದಲ್ಲಿದೆ. ಯಾವಜ್ಜೀವವೂ ಸುಖದುಃಖಗಳಿಗೆ ಭಾಗಿಗಳಾಗಿರಬೇಕಾದ ಕನ್ಯಾ ವರರ ಇಷ್ಟಾನುಸಾರ ಮದುವೆಯಾಗುವ ಕಾಲ ಹೋಗಿ ಮಾತನಾಡುವುದಕ್ಕೂ ಚೆನ್ನಾಗಿ ತಿಳಿಯದ ಹಸುಳೆಗಳಿಗೆ ತಮ್ಮ ವಿನೋದಾರ್ಥವಾಗಿ ಮದುವೆಮಾಡಿ ಅವರನ್ನು ಪಾಲಕ್ಕಿಗಳಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡಿಸಿ ಆಮರಣಾಂತವಾಗಿ ದುಃ ಖವೆಂಬ ಸೆರೆಗೆ ಸಿಕ್ಕಿಸುವ ಕಾಲ ಬಂದಿತು. ಸುಲಭವಾದ ಹೊಸಗನ್ನಡದಿಂದ ಬರೆ ಯಲ್ಪಟ್ಟಿರುವ ಈ ಚರಿತ್ರೆಯಲ್ಲಿ ಪ್ರತಿದಿನವೂ ನೀವು ಎಲ್ಲಾ ಕುಟುಂಬಗಳೊಳಗೆ ಸರ್ವಸಾಧಾರಣವಾಗಿ ನೋಡುತ್ತಲೂ, ಅನುಭವಿಸುತ್ತಲೂ ಇರುವ ಸಾಮಾನ್ಯ

ವಿಷಯಗಳೇ ಕಾಣಬರುವುವೇ ಹೊರತು ಯಾವ ಇಂದ್ರಜಾಲವೂ ಕಾಣದು. ವಿರುದ್ಧಗಳಾದ ಕಲ್ಪಿತ ಕಥೆಗಳನ್ನು ಕೇಳಿ ನಲಿದಿರುವ ನಿಮ್ಮ ಕಿವಿಗಳಿಗೆ ಈ ಸತ್ಯಚರಿತ್ರೆಯು ಇಂಪಾಗಿ ತೋರಿದರೆ ಇದನ್ನು ಓದಿ ಆನಂದಪಡುವುದಕ್ಕೂ, ಇದರಲ್ಲಿ ಬಣ್ಣಿಸಿರುವ ಯೋಗ್ಯರ ನಡೆವಳಿಗಳನ್ನು ಅನುಸರಿಸುವುದಕ್ಕೂ ನಿಮಗೆ ಬೇಕಾದಷ್ಟು ಸ್ವಾತಂತ್ರ್ಯವುಂಟಾಗುವುದು. ಸತ್ಯವತಿಯು ನಾರಾಯಣಮೂರ್ತಿಯ ಹೆಂಡತಿ. ಮುಂಗೊಂಡಾಗ್ರಹಾರದಲ್ಲಿ ವಾಸಮಾಡುವ ಲಕ್ಷ್ಮೀನಾರಾಯಣ ಎಂಬುವನ ಎರಡನೆಯ ಸೊಸೆ. ಆ ಅಗ್ರಹಾರವು ಕೋನಸೀಮೆಯ ಅಮಲಾಪುರದ ಸಮೀಪದಲ್ಲಿದೆ. ಲಕ್ಷ್ಮೀನಾರಾಯಣನು ಪರಮಸಾಧು. ಆ ಗ್ರಾಮದಲ್ಲಿ ಆತನು ವಾಸಮಾಡುತ್ತಾನೆಂಬುದೇ ಒಬ್ಬರಿಗೂ ತಿಳಿಯದು. ಕಾಣದ ಗ್ರಾಮಗಳಲ್ಲಿಯೂ ಆತನ ಹೆಂಡತಿಯ ಹೆಸರನ್ನು ತಿಳಿಯದವರು ಒಬ್ಬರೂ ಇಲ್ಲ. ನೀರು ಮೊಗೆಯುವದಕ್ಕೆ ಬಂದಿದ್ದ ಶೂದ್ರಿತಿಯರೆಲ್ಲರೂ ತಮ್ಮ ಮೇಲೆ ನೀರುಹಾರಿದರೆ ಅವಳು ಜಗಳವಾಡಿಯಾಳೆಂದು ಕೈಗಳನ್ನು ಮೇಲೆತ್ತಿಕೊಂಡು ಹೋಗಿ ದೂರದಲ್ಲಿ ನಿಲ್ಲುವರು. ಈಜಾಡುತ್ತಿದ್ದ ಹುಡುಗರು ಅವಳು ಮಡಿನೀರಿಗಾಗಿ ಕೆರೆಗೆ ಬಂದರೆ ದೂರದಲ್ಲಿ ನೋಡಿದರೂ ಭಯಪಟ್ಟು ಓಡಿಹೋಗುವರು. ಆ ಗ್ರಾಮದಲ್ಲಿ ಎಳೆಮಕ್ಕಳು ಚಂಡಿ ಹಿಡಿದು ಅಳುತ್ತಿದ್ದರೆ "ಜೋಕೆ, ಅಳಬೇಡ ! ಯಶೋದಮ್ಮನವರು ಬರುತ್ತಾರೆ. ಅವರಿಗೆ ನಿನ್ನನ್ನು ಕೊಟ್ಟುಬಿಡುತ್ತೇನೆ. ಹಿಡಿದುಕೊಂಡು ಹೋಗುತ್ತಾರೆ" ಎಂದು ಅವರ ತಾಯ್ತಂದೆಗಳು ಹೆದರಿಸುವುದುಂಟು. ಆಕೆಯ ಪ್ರಸಿದ್ಧಿಯಿಂದ ಗ್ರಾಮವಾಸಿಗಳೆಲ್ಲರೂ ಆತನನ್ನು ಯಶೋದಮ್ಮನ ಗಂಡನೆಂದು ಕರೆಯುತ್ತಿದ್ದರೇ ಹೊರತು ಯಾರೂ ಹೆಸರು ಹಿಡಿದು ಕರೆಯುತ್ತಿರಲಿಲ್ಲ. ಆತನಿಗೆ ನಾಲ್ಕು ಮಂದಿ ಕುಮಾರರು. ದೊಡ್ಡವನ ಹೆಸರು ವೆಂಕಟೇಶ. ಎರಡನೆಯವನ ಹೆಸರು ನಾರಾಯಣಮೂರ್ತಿಯೆಂಬುದು ನಿಮಗೆ ತಿಳಿದೇ ಇದೆ. ಮೂರನೆಯವನು ರಾಮಸ್ವಾಮಿ. ನಾಲ್ಕನೆಯವನು ಸುಬ್ರಹ್ಮಣ್ಯ. ಇವರು ನಾಲ್ಕು ಮಂದಿಯಲ್ಲದೆ ಇಬ್ಬರು ಹೆಣ್ಣುಮಕ್ಕಳು. ಅವರಲ್ಲಿ ಹಿರಿಯವಳು ಸಾವಿತ್ರಿ, ಕಿರಿಯವಳು ಸೀತೆ. ಈಗ ವೆಂಕಟೇಶನಿಗೆ ಇಪ್ಪತ್ತೇಳು ವರ್ಷ. ಅವನು ದೇಶ ಪದ್ಧತಿಯಂತೆ ಬಾಲ್ಯದಲ್ಲಿಯೇ ಕಾಳಿದಾಸ ಮಹಾಕವಿಯಿಂದ ವಿರಚಿತವಾದ ಶಾಕುಂತಲ, ವಿಕ್ರಮೋರ್ವಶೀಯ, ಮಾಳವಿಕಾಗ್ನಿಮಿತ್ರ ಎಂಬ ಮೂರು ನಾಟಕಗಳನ್ನೂ ಓದಿದನು. ಆದರೆ ಕಾವ್ಯ ಪಾಠದಲ್ಲಿ ಅವನಿಗೆ ಆಸಕ್ತಿಯಿಲ್ಲದುದರಿಂದಲೂ ಗುರುಸೇವೆಗಾಗಿಯೇ ಬಹುಕಾಲ ಬೇಕಾಗಿದ್ದುದರಿಂದಲೂ ಅವನಿಗೆ ಸಂಸ್ಕೃತ ವಿದ್ಯೆ ಹತ್ತಲಿಲ್ಲ. ಸ್ವಲ್ಪಮಟ್ಟಿಗೆ ಲೆಕ್ಕಾಚಾರ

ವನ್ನೂ, ಚೆನ್ನಾಗಿ ಬರೆಯುವುದನ್ನೂ ಮಾತ್ರ ಕಲಿತುಕೊಂಡನು. ಈಗ ಒಬ್ಬ ಕರಣಿಕನ ಹತ್ತಿರ ಅವನು ಗುಮಾಸ್ತನಾಗಿ ತಿಂಗಳಿಗೆ ಹತ್ತು ರೂಪಾಯಿ ಸಂಬಳ ತರುತ್ತಾನೆ, ಅವನು ಮತದಲ್ಲಿಸ್ಮಾರ್ತನಾದರೂ ವೈಷ್ಣವರ ಸಹವಾಸದಿಂದ ವಿಷ್ಣು ಭಕ್ತನೆನಿಸಿ ಕೊರಲುತುಂಬಾ ತುಳಸೀಮಣಿಯ ಸರಗಳನ್ನೂ, ದೊಡ್ಡದೊಡ್ಡ ನಾಮಗಳನ್ನೂ, ಧರಿಸಿಕೊಂಡು ಹರಿಭಕ್ತನಾಗಿರುವನು. ಅವನ ಹೆಂಡತಿಯ ಹೆಸರು ಸುಂದರಮ್ಮ, ಆಕೆಗೆ ಚೆನ್ನಾಗಿ ಓದುವುದಕ್ಕೆ ಬರುವುದು. ಆದುದರಿಂದ ಕೆಲವು ವೇಳೆ ಜಗಳವಾಡುತ್ತಿದ್ದರೂ ಗಂಡಹೆಂಡತಿಯರಿಬ್ಬರೂ ಏಕಮನಸ್ಕರಾಗಿ ಏಕವಾಕ್ಯ ವುಳ್ಳವರಾಗಿರುವರು. ಅವರಿಗೆ ರಾಮಾನುಜಮ್ಮನೆಂಬ ಒಬ್ಬ ಮಗಳು. ಅವಳಿಗೆ ಎರಡು ತುಂಬಿ ಮೂರನೆಯ ವರ್ಷ. ನಾರಾಯಣಮೂರ್ತಿಗೆ ಈಗ ಇಪ್ಪತ್ತನೆಯ ವರ್ಷ. ಅವನು ಬಹು ಸೂಕ್ಷ್ಮ ಬುದ್ಧಿಯುಳ್ಳವನು, ಅವನಿಗೆ ಓದಿನಲ್ಲಿ ಆಸಕ್ತಿ ಬಹಳ. ಅವನು ಗುಣಸಂಪನ್ನನೆಂದು ಅವನ ಗುರುತು ಕಂಡವರೆಲ್ಲರೂ ಹೇಳುತ್ತಾರೆ. ಆ ಗ್ರಾಮದ ಕರಣಿಕನ ತಮ್ಮನು ರಾಜಮಹೇಂದ್ರದಲ್ಲಿ ಇಂಗ್ಲೀಷ್ ಓದಿ ದೊಡ್ಡ ಅಧಿಕಾರಕ್ಕೆ ಬಂದಿದ್ದನು. ಅದನ್ನು ನೋಡಿ ನಾರಾಯಣಮೂರ್ತಿ ತಾನೂ ಹಾಗೆ ಮಾಡಬೇಕೆಂದು ತಾಯಿತಂದೆಗಳಿಗೂ ಹೇಳದೆ ಅಮಲಾಪುರಕ್ಕೆ ಹೋಗಿ ಇಂಗ್ಲೀಷ್ ಸ್ಕೂಲಿಗೆ ಸೇರಿ ವಾರಗಳನ್ನು ಮಾಡಿಕೊಂಡು ಕಷ್ಟಪಟ್ಟು ಓದುತ್ತ ಬಟ್ಟೆ ಬರೆ ಪುಸ್ತಕ ಮುಂತಾದುವುಗಳನ್ನು ಕೊಂಡುಕೊಳ್ಳುವುದಕ್ಕಾಗಿ ರಾತ್ರಿಕಾಲದಲ್ಲಿ ಧನಿಕರ ಮಕ್ಕಳಿಗೆ ಪಾಠಹೇಳಿ ಹಣ ಸಂಪಾದಿಸಿಕೊಳ್ಳುತ್ತಿದ್ದನು. ಕೆಲವು ವರ್ಷಗಳಲ್ಲಿಯೇ ಪ್ರವೇಶಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ತೇರ್ಗಡೆಯಾಗಿ ಹತ್ತು ರೂಪಾಯಿ ವಿದ್ಯಾರ್ಥಿವೇತನವನ್ನು ಪಡೆದು ರಾಜಮಹೇಂದ್ರದಲ್ಲಿ ಪ್ರಥಮ ಶಾಸ್ತ್ರ ಪರೀಕ್ಷೆಗೆ ಓದಲಾರಂಭಿಸಿದನು. ಆ ತರಗತಿಯವರೆಲ್ಲರಲ್ಲಿ ಇವನೇ ಬುದ್ಧಿವಂತನಾದುದರಿಂದಲೂ ಸಹಪಾಠಿಯಾದ ಮಾಧವಯ್ಯನ ಪ್ರೋತ್ಸಾಹವು ಪ್ರಬಲವಾಗಿದ್ದುದರಿಂದಲೂ ಮಂಡಲನ್ಯಾಯ ಸಭೆಯ ಪ್ರಥಮ ವಿಲೇಖಕನಾದ ರಾಘುವಯ್ಯನು ಹನ್ನೆರಡು ವರ್ಷದ ತನ್ನ ಮಗಳನ್ನು ಇವನಿಗೆ ಕೊಟ್ಟು ಮದುವೆ ಮಾಡಿದನು. ಈ ರಾಘುವಯ್ಯನು ಮಾಧವಯ್ಯನ ತಂದೆಯೇ. ಮದುವೆಯಾದ ಎರಡು ಮೂರು ತಿಂಗಳಲ್ಲಿಯೇ ರಾಘುವಯ್ಯನು ಪೆದ್ದಾಪುರದ ಡಿಸ್ಟ್ರಿಕ್ಟ್ ಮುನಸೀಪನಾಗಿ ಹೊರಟುಹೋದನು. ಆಗ ರಾಮಸ್ವಾಮಿಯೂ ಇಲ್ಲಿಗೆ ಬಂದು ಪಾಠಶಾಲೆಗೆ ಸೇರಿದುದರಿಂದ ತಿಂಗಳಿಗೆ ಹತ್ತು ರೂಪಾಯಿ ಸಾಲದೆ ನಾರಾಯಣಮೂರ್ತಿ ಕೊಂಚ ಸಾಲ ಮಾಡುತ್ತಿದ್ದನು. ಆದರೂ ಅವನ ತಾಯಿತಂದೆಗಳು

ಒಂದು ಕಾಸನ್ನೂ ಕಳುಹಿಸುತ್ತಿರಲಿಲ್ಲ. ಅವರು ವೆಂಕಟೇಶನ ಮದುವೆಯಲ್ಲಿ ಸಮಾರಾಧನೆಗಳಿಗಾಗಿಯೂ ಉಡುಗೊರೆಗಳಿಗಾಗಿಯೂ ಮಾನ್ಯವನ್ನು ಆಧಾರಮಾಡಿ ಸಾಲತಂದಿದ್ದರು. ಆ ಸಾಲವಿನ್ನೂ ತೀರದೆ ಬಡ್ಡಿ ಬೆಳೆಯುತ್ತಿದ್ದಿತು. ಆದುದರಿಂದ ಅವರು ಜೀವಿಸುವುದೇ ದುರ್ಘಟವಾಗಿದ್ದಿತು. ಇದನ್ನೆಲ್ಲ ಮಾವನು ಕೇಳಿ ನಾರಾಯಣಮೂರ್ತಿಯು ಸಾಲವನ್ನು ತೀರಿಸಿ ಪ್ರತಿತಿಂಗಳೂ ನಾಲ್ಕು ರೂಪಾಯಿ ಕಳುಹಿಸತೊಡಗಿದನು. ಈಗ ನಾರಾಯಣಮೂರ್ತಿಗೆ ಪ್ರಥಮ ಶಾಸ್ತ್ರ ಪರೀಕ್ಷೆ ಆಯಿತು. ಬಿ. ಎ ತರಗತಿಯಲ್ಲಿ ಓದುತ್ತಾನೆ. ಎಫ್. ಎ ಪರೀಕ್ಷೆ ಕೊಟ್ಟ ದಿನದಿಂದ ಆತನಿಗೆ ವಿದ್ಯಾರ್ಥಿ ವೇತನವಲ್ಲದೆ ತಿಂಗಳಿಗೆ ಇಪ್ಪತ್ತು ರೂಪಾಯಿಗಳ ಮನಿಯಾರ್ಡರೂ ಬರುವುದು. ಒಂದು ವರ್ಷದ ಕೆಳಗೆ ಸತ್ಯವತಿಯು ಪುಷ್ಪವತಿಯಾಗಲು ರಾಘವಯ್ಯನು ಭಾರ್ಯಾಭರ್ತರನ್ನೊಡಗೂಡಿಸಿ ಸತ್ಯವತಿಯನ್ನು ಅತ್ತೆಯ ಮನೆಗೆ ಕಳುಹಿಸಿಕೊಟ್ಟನು. ಈಗ ಜನವರಿಯ ವಿಶ್ರಾಂತಿದಿನಗಳು ಸಮೀಪಿಸಿದುದರಿಂದ ತಾನು ಊರಿಗೆ ಬರುವೆನೆಂದು ನಾರಾಯಣಮೂರ್ತಿ ತಂದೆಗೆ ಕಾಗದಬರೆದನು. ಆದಕಾರಣವೇ ಪ್ರತಿನಿತ್ಯವೂ ಸತ್ಯವತಿ ಆತನ ಆಗಮನವನ್ನೇ ಇದಿರುನೋಡುತ್ತಿರುವುದು. ಎಲೌ ಸ್ತ್ರೀಯರೇ! ನೀವು ಈ ಚರಿತ್ರೆಯನ್ನು ಓದಿದರೆ ಆ ಸತ್ಯವತಿಯ ಗುಣಾತಿಶಯಗಳು ತಿಳಿದು ನಿಮಗೆ ಆಕೆಯಲ್ಲಿ ಅನುರಾಗ ಹೆಚ್ಚಿ ಸಂಸಾರದಲ್ಲಿ ಎಲ್ಲರೊಳಗೂ ಇರುವ ಸ್ವಭಾವ ಲಕ್ಷಣಾದಿಗಳು ವ್ಯಕ್ತವಾಗಿಯೂ ಅವನ್ನು ಹೇಗೆ ಕಾಣಬೇಕೋ ಅದನ್ನು ನೀವೇ ಆಲೋಚಿಸಿಕೊಳ್ಳಿರಿ.

## ಎರಡನೆಯ ಪ್ರಕರಣ

ಹಗಲು ಎರಡುಗಂಟೆಯ ಸಮಯದಲ್ಲಿ ಹೊರಟ ಹಡಗನ್ನು ಶಿರಸ್ತೆದಾರರು ಏರಿದುದರಿಂದ ಹಡಗು ರಾಜಮಹೇಂದ್ರದಿಂದ ಹೊರಟು ಬೊಬ್ಬರುಲಂಕೆಯೆಂಬ ಗ್ರಾಮಕ್ಕೆ ಎರಡು ಹರದಾರಿಯ ದೂರದಲ್ಲಿ ಒಂದು ಚಿಕ್ಕಗ್ರಾಮದ ಹತ್ತಿರ ದೀವಿಗೆ ಹಚ್ಚುವ ಹೊತ್ತಿಗೆ ಬಂದಿತು. ಅವರು ಅಲ್ಲಿ ಹಡಗನ್ನು ನಿಲ್ಲಿಸಿ ಊಟಕ್ಕಾಗಿ ಹೊರಟು ದಿವ್ಯವಾದ ಭಕ್ಷ್ಯಭೋಜ್ಯಗಳನ್ನು ಉಂಡು ತಾಂಬೂಲ ಹಾಕಿಕೊಂಡು ಸಂಗೀತವನ್ನು ಕೇಳಿ ಮೆಲ್ಲಗೆ ಹಡಗುಹತ್ತುವುದಕ್ಕೆ ಬರುವಾಗ್ಗೆ ರಾತ್ರಿ ಹತ್ತುಗಂಟೆಯಾಯಿತು. ಇಷ್ಟರೊಳಗೆ ಹಡಗಿನ

ಲ್ಲಿದ್ದವರೆಲ್ಲರೂ ತಮ್ಮ ಚಿಳ್ಳೆಪಿಳ್ಳೆಗಳ ಸಂಗಡ ಹಸಿವಿನಿಂದ ಸೀದು ಕರಿಯಾಗಿ
ಮರುದಿನ ಎರಡು ಜಾವಕ್ಕಾದರೂ ಅನ್ನದಗುಳು ಸಿಕ್ಕೀತೋ ಸಿಕ್ಕಲಾರದೋ
ಎಂದು ಸಂಕಟ ಪಡುತ್ತಾ ಹರಿನಾಮ ಸ್ಮರಣೆ ಮಾಡುತ್ತಿದ್ದರು. ಅವರುಯೋಚಿ
ಸಿಕೊಂಡಂತೆ ಹಡಗು ಮರುದಿವಸ ಅಮಲಾಪುರಕ್ಕೆ ಬಂದು ಸೇರುವಾಗ್ಯೆ
ಮಧ್ಯಾಹ್ನ ಎರಡು ಜಾವವಾಗಿತ್ತು. ನಾರಾಯಣಮೂರ್ತಿ ಹಡಗಿನಿಂದಿಳಿದು
ಹಿಂದು ಭೋಜನಶಾಲೆಯಲ್ಲಿ ಉಂಡು ಬಿಸಿಲಿಳಿದು ತಂಪಾದಮೇಲೆ ಹೊರಟು,
ಸಂಜೆಗೆ ತನ್ನ ಗ್ರಾಮಕ್ಕೆ ಸೇರಿದನು. ಮನೆಗೆ ಹೋಗುವಾಗ್ಯೆ ಗೃಹಕೃತ್ಯದ ವಿಷ
ಯವಾಗಿ ಮಾತಾಡುತ್ತಾ ಬಾಗಿಲಲ್ಲಿಯೇ ಕುಳಿತಿದ್ದ ಅವನ ತಾಯ್ತಂದೆಗಳು ಆತ
ನನ್ನು ನೋಡಿ ಸಂತೋಷ ಪಟ್ಟರು. ಅವನು ಅವರಿಗೆ ನಮಸ್ಕಾರಮಾಡಲು,
ಅವರು ಎತ್ತಿ ಮುದ್ದಾಡಿ ಮುಂಡಾಡಿ ಕುಶಲಪ್ರಶ್ನೆಮಾಡಿದರು. ಅಷ್ಟರಲ್ಲಿ ಒಳ
ಗಿದ್ದ ತಮ್ಮಂದಿರು ಬಂದು ಈತನನ್ನು ಅಪ್ಪಿಕೊಂಡರು. ಅಣ್ಣನು ಮಾತ್ರ ಬರಲಿಲ್ಲ.
ಆತನು ತಿಂಗಳಿಗೆ ಸರಿಯಾಗಿ ಒಪ್ಪಿಸಬೇಕಾದ ಲೆಕ್ಕದಲ್ಲಿ ತಪ್ಪುಗಳಿರುವುವೆಂದು ತಹ
ಶೀಲ್ದಾರರು ಅಪ್ಪಣೆ ಕೊಟ್ಟುದರಿಂದ ಅಮಲಾಪುರಕ್ಕೆ ಹೋಗಿ ಎರಡು ದಿನಗಳಿಂದ
ಅಲ್ಲಿಯೇ ಇದ್ದನು. ತಾಲ್ಲೂಕ್ ಗುಮಾಸ್ತರಕೈಯ್ಯಲ್ಲಿ ಬೆಳ್ಳಿಯ ನಾಣ್ಯರೂಪ
ವಾದ ದಿವ್ಯೌಷಧವು ಬಿದ್ದರೆ ಅದರ ಮಹಿಮೆಯಿಂದ ಲೆಕ್ಕದಲ್ಲಿರುವ ತಪ್ಪುಗಳೆಲ್ಲಾ
ನೇರ್ಪಡುವುವೆಂತಲೂ ಆ ದಿವ್ಯೌಷಧವು ಅವರ ಕೈಯ್ಗೆ ಸೋಕದಿದ್ದರೆ ಸರಿಯಾ
ಗಿದ್ದ ಲೆಕ್ಕಗಳೂ ತಪ್ಪುಗಳ ಕುಪ್ಪೆಗಳಾಗುವುವೆಂತಲೂ ಅನುಭವಶಾಲಿಗಳು ಹೇಳು
ತ್ತಾರಲ್ಲದೆ ಅದರ ಪರಮಾರ್ಥ ನನಗೆ ತಿಳಿಯದು. ನಾರಾಯಣಮೂರ್ತಿ ಸ್ವಲ್ಪ
ಹೊತ್ತಿನವರೆಗೆ ಸುಖಸಂಭಾಷಣೆಮಾಡಿ ಬೀದಿಗೆ ಹೊರಟು ಗ್ರಾಮದಲ್ಲಿಯ ತನ್ನ
ಸ್ನೇಹಿತರನ್ನೆಲ್ಲಾ ಕಂಡುಬಂದು ರಾತ್ರಿ ಭೋಜನಮಾಡಿ ಮಲಗುವ ಮನೆಗೆ ಹೋಗಿ
ತನ್ನ ಹೆಂಡತಿಯ ಆಗಮನವನ್ನೇ ಇದಿರು ನೋಡುತ್ತಿದ್ದನು. ಸತ್ಯವತಿ ತನ್ನ ಮನ
ಸ್ಸಂತೋಷವನ್ನು ಹೊರಗೆ ಪ್ರಕಾಶಪಡಿಸಲಿಲ್ಲ. ಆದರೂ ಅವಳ ಮುಖವಿಕಾಸದಿಂ
ದಲೂ ಉತ್ಸಾಹಸೂಚಕಗಳಾದ ಬೇರೆ ಕೆಲವು ಚೇಷ್ಟೆಗಳಿಂದಲೂ ಆಕೆಯ ಭಾವವ
ನ್ನು ಕಂಡುಹಿಡಿದು ಅತ್ತೆಯಾದ ಯಶೋದಮ್ಮನು ಸಿಡುಸಿಡುಗುಟ್ಟುತ್ತಾ ತಾನು
ಕುಳಿತಿದ್ದಾಗ ಸೊಸೆಯು ಮಲಗುವ ಮನೆಗೆ ಹೇಗೆ ಹೋಗುವಳೋ ನೋಡೋಣ
ವೆಂದು ಹತ್ತಿಯ ಪೃಟ್ಟಿಯನ್ನು ಮುಂದಿಟ್ಟುಕೊಂಡು ಬತ್ತಿ ಹೊಸೆಯುವುದಕ್ಕಾಗಿ
ದೀಪಿಗೆಯ ಮುಂದೆ ಕುಳಿತಳು. ಒಳಗೆ ನಾರಾಯಣಮೂರ್ತಿ ತನ್ನ ಹೆಂಡತಿಗಾಗಿ
ಆತುರಪಡುತ್ತಾ ಸ್ವಲ್ಪ ಹಜ್ಜೆಯ ಸದ್ದಾದಾಗಲೆಲ್ಲಾ ತಲೆಯೆತ್ತಿ ಸುತ್ತಲೂನೋಡಿ

ಯಾರೂ ಬಾರದುದರಿಂದ ನಿರಾಶನಾಗಿ ಪುನಃ ದಿಂಬಿನಮೇಲೆ ತಲೆಯಿಟ್ಟು ಪುಸ್ತಕವನ್ನು ತೆರೆದು ಓದುತ್ತಾ ಓದುವುದಕ್ಕೆ ತೋರದೆ ಮಂಚದಿಂದಿಳಿದು ತಾನೇ ಆಕೆಯನ್ನು ಕರೆತರುವೆನೆಂದು ಬಾಗಿಲವರೆಗೆ ಬಂದು ನಾಚಿಕೊಂಡು ಪುನಃ ಹಿಂದಕ್ಕೆ ಹೋಗುತ್ತಾ ಮನೋಭ್ರಾಂತಿಯಿಂದ ಹೊರಳಾಡುತ್ತಿದ್ದನು. ಮನಸ್ಸಿಗೆ ಒಗ್ಗಿದ ಹೆಂಡತಿಯು ಬಹುಕಾಲದವರೆಗೆ ಅಗಲಿದ್ದರೆ ನೂತನ ಸಮಾಗಮ ದಿನದಲ್ಲಿ ಪ್ರಿಯನ ಮನಸ್ಸು ಹೀಗಿರುವುದೇನಾಶ್ಚರ್ಯವಲ್ಲ.

ಇತ್ತಲಾ ಸತ್ಯವತಿ ಗಂಡನನ್ನು ನೋಡಿ ಒಂದುಸಾರಿ ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡು ಬರಬೇಕೆಂದು ಎಷ್ಟು ಅಪೇಕ್ಷೆಪಡುತ್ತಿದ್ದರೂ ಅತ್ತೆಯಾದ ಯಶೋದಮ್ಮನು ಶಯನಗೃಹದ ಇದಿರಾಗಿಯೇ ಕುಳಿತಿದ್ದುದರಿಂದ ಹೊರಡುವುದಕ್ಕಾಗದೆ ಆಕೆ ಯಾವಾಗ ಎದ್ದು ಹೋಗುವಳೋ ಎಂದು ಕಂಡಕಂಡ ದೇವರಿಗೆಲ್ಲಾ ಕೈಮುಗಿದು ಒಂದೊಂದು ಕೆಲಸವನ್ನು ತೀರಿಸಿಕೊಂಡು ಬಂದು ಆಕೆ ಹೊರಟುಹೋದಳೋ ಇಲ್ಲವೋ ಎಂದು ಇಣಿಕಿಣಿಕಿ ನೋಡುತ್ತಾ ಮನೆಯ ಕೆಲಸಗಳನ್ನೆಲ್ಲಾ ಮಾಡಿ ಓರಗಿತ್ತಿಯು ಕಿರುಮನೆಯಲ್ಲೆಷ್ಟು ಹೊತ್ತಿದ್ದರೂ ಅತ್ತೆಯು ಬೇರೆ ಮಲಗುವುದಕ್ಕೆ ಹೊರಡುವಂತೆ ತೋರಲಿಲ್ಲ. ತುತ್ತತುದಿಗೆ ತನ್ನ ಪ್ರಾಣಕಾಂತನನ್ನು ನೋಡಬೇಕೆಂಬಭಿಲಾಷೆಯು ನಾಚಿಕೆಯನ್ನು ಮನಸ್ಸಿನಿಂದೋಡಿಸಲಾಗಿ, ಸಾಹಸಮಾಡಿ ಸಿಹಿನೀರ ತಂಬಿಗೆಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಹಜ್ಜೆಯ ಸದ್ದಾಗದಂತೆ ಭಯಪಡುತ್ತಾ ಮೆಲ್ಲಗೆ ಗೋಡೆಯ ಮಗ್ಗುಲಲ್ಲಿಯೇ ನಡೆದುಕೊಂಡು ಮಲಗುವ ಮನೆಯನ್ನು ಹೊಕ್ಕಳು. ಯಶೋದಮ್ಮನು ಅದನ್ನು ಓರೆಗಣ್ಣಿನಿಂದ ನೋಡಿ ತಲೆದೂಗುತ್ತಾ ಥಟ್ಟನೆ ಎದ್ದುಹೋಗಿ ತನ್ನ ಕಿರುಮನೆಯ ಕದವನ್ನು ಮುಚ್ಚಿಕೊಂಡಳು. ಸತ್ಯವತಿಯು ಎಡದ ಕಯ್ಯಲ್ಲಿ ಒಂದು ಕಡ್ಡಿಯನ್ನು ತೆಗೆದುಕೊಂಡುಬಂದು ದೀಪದ ಬತ್ತಿಯನ್ನೆತ್ತಿ ಪ್ರೇಮವನ್ನು ಚೆಲ್ಲುತ್ತಿರುವ ದೃಷ್ಟಿಯಿಂದ ಒಗ್ಗಿನೋಡಿದಳು. ನಾರಾಯಣಮೂರ್ತಿಯೂ ಕೃಪಾಕಟಾಕ್ಷದಿಂದ ಅವಳ ಮುಖವನ್ನು ನೋಡಿ ನಸುನಕ್ಕನು. ಆಗ ಅವರಿಬ್ಬರಿಗೂ ಉಂಟಾದ ಪರಮಾನಂದವನ್ನು ಅವರ ಮನಸ್ಸಿನೊಳಗೆ ಹೊಕ್ಕರೆ ತಿಳಿದೀತೇ ಹೊರತು ಹೇಳಿ ತಿಳಿಸುವುದು ಕಷ್ಟ.

ನಾರಾಯಣಮೂರ್ತಿ—(ಆಕೆಯ ಕೈಯ್ಯನ್ನು ಹಿಡಿದುಕೊಂಡು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು) ಎಷ್ಟು ಹೊತ್ತು ಕಾದಿದ್ದರೂ ಒಳಗೆ ಬರಲಿಲ್ಲ. ನಾನು ಬಂದರೂ ನನ್ನನ್ನು ಮರೆತುಹೋದೆಯಾ?

ಸತ್ಯವತಿ—ಅತ್ತೆಮ್ಮನವರು ಬಾಗಿಲಹತ್ತಿರ ಇದ್ದರೆ ನಾನು ಹೇಗೆ ಬರಲಿ ?

ನಾರಾ—ಬಂದರೇನು ! ಆಕೆ ನಿನ್ನನ್ನು ಅಗಿದು ನುಂಗುವಳೋ ?

ಸತ್ಯವತಿ—ನೀವು ಬಲುಬಡವಾಗಿರುವಿರಿ, ಈ ಹೊತ್ತು ದಾರಿಯಲ್ಲಿ ಆಯಾಸಪಟ್ಟಿರಬಹುದು.

ನಾರಾಯಣಮೂರ್ತಿ—ರಾತ್ರಿಕಾಲಗಳಲ್ಲಿ ಬಲುಹೊತ್ತು ಓದುವುದರಿಂದ ಸ್ವಲ್ಪ ಬಡವಾಗಿದ್ದೇನೆ ಅಲ್ಲದೆ ಭೋಜನಶಾಲೆಗಳಲ್ಲಿ ನನಗೆ ಸರಿಯಾಗಿ ಊಟವಾಗುವುದಿಲ್ಲ. ನೀನೂ ಬಡವಾಗಿದ್ದೀಯೇಕೆ ?

ಸತ್ಯವತಿ—ನಾನು ಮೊದಲುಮಾತ್ರ ದಪ್ಪನಾಗಿದ್ದನೇ ? ಯಾವಾಗಲೂ ಒಂದೇವಿಧವಾಗಿಯೇ ಇದ್ದೇನೆ. ನಾನು ದೊಡ್ಡವಳಾಗಿ ಒಕ್ಕಲುತನಮಾಡುವುದಕ್ಕೆ ಬಂದಮೇಲೂ ನೀವು ಪರದೇಶದಲ್ಲಿ ಕಷ್ಟಪಡುತ್ತಿದ್ದರೆ ಯಾವ ಕೆಲಸಕ್ಕೂ ಬಾರದೆ, ನಾನು ಇದ್ದರೂ ಇಲ್ಲದವಳೇ ಆಗಿದ್ದೇನೆ.

ನಾರಾಯಣಮೂರ್ತಿ—ಇದೋ ಇಲ್ಲಿಗೆ ಬಂದಿರುವೆನಲ್ಲ ? ಈಗ ನೀನು ನನಗೆ ಎಷ್ಟು ಮೈಬರುವಹಾಗೆ ಮಾಡುತ್ತೀಯೋ ನೋಡೋಣ!

ಸತ್ಯವತಿ—ನೀವು ಬರುವಾಗ ನಮ್ಮ ಅಣ್ಣಯ್ಯನನ್ನು ನೋಡಿದ್ದಿರಾ ? ಮನೆಯಲ್ಲಿ ನಮ್ಮವರೆಲ್ಲರೂ ಕ್ಷೇಮವಾಗಿರುವರೇ ?

ನಾರಾ—ನಾನು ಈ ಊರಿಗೆ ಪ್ರಯಾಣಮಾಡುವುದಕ್ಕೆ ಮೊದಲನೆಯದಿನ ನಿಮ್ಮಣ್ಣನನ್ನು ಕಂಡಿದ್ದೆ. ಅವನು ಓದುವುದನ್ನು ಬಿಟ್ಟು ಕೆಲಸಕ್ಕೆ ಸೇರಿಕೊಂಡನು. ನಿಮ್ಮವರೆಲ್ಲರೂ ಚೆನ್ನಾಗಿರುವರೆಂದು ಮೊನ್ನೆ ಕಾಗದ ಬಂತಂತೆ.

ಸತ್ಯವತಿ—ನಮ್ಮ ತಂದೆಯವರು ಹದಿನೇಳು ದಿನಗಳ ಕೆಳಗೆ ನನಗೆ ಹತ್ತು ರೂಪಾಯಿಗಳನ್ನು ಕಳುಹಿಸಿದರು. ಅಂದಿನಿಂದ ಅವರ ವೃತ್ತಾಂತವೇ ತಿಳಿಯದು.

ನಾರಾ—ನಮ್ಮತ್ತಿಗೆಯೆಲ್ಲಿ ? ನೋಡಲೇ ಇಲ್ಲ. ನಾನು ಬಂದರೆ ಕಾಣಿಸಿಕೊಳ್ಳದೆ ಇರತಕ್ಕವಳಲ್ಲ. ಆಬೀದಿಗೆ ತವರುಮನೆಗೆ ಹೋಗಿದ್ದಾಳೋ ?

ಸತ್ಯ-ಇಲ್ಲ. ಮನೆಯಲ್ಲೇ ಇದ್ದಾಳೆ. ಬೆಳಗ್ಗೆ ಅತ್ತೆಯವರು ಏನೋ ಕೋಪಮಾಡಿ, ಸ್ವಲ್ಪ ಬೈದರು. ಅದರಿಂದ ಕೋಪ ಬಂದು, ಹೊತ್ತಾರೆಯಿಂದ ಅನ್ನ ತಿನ್ನದೆ, ಚಿಕ್ಕಮನೆಯಲ್ಲಿ ಮುಸುಕಿಟ್ಟು ನೆಲದ ಮೇಲೆ ಮಲಗಿದ್ದಾಳೆ. ನಾನೆಷ್ಟು ಬಗೆಯಾಗಿ ಬೇಡಿಕೊಂಡರೂ ಊಟಕ್ಕೇಳಲಿಲ್ಲ. ಇದುವರೆಗೆ ಆಚಿಕ್ಕಮನೆಯಲ್ಲಿಯೇ ಇದ್ದೆನು. ನೀವು ಬಂದು ಕರೆದರೆ ಒಂದುವೇಳೆ ಏಳುವಳೋ ಏನೋ; ಎದ್ದು ಬನ್ನಿ.

ನಾರಾ—ಈ ಹಾಳ ಕೆಟ್ಟ ಜಗಳ ಏಕೆ ಬಂದಿತು ? ನಮ್ಮ ಮಗು ರಾಮಾನುಜಮ್ಮನೂ ಮನೆಯಲ್ಲಿಲ್ಲವೋ ?

ಸತ್ಯ—ಅವಳು ಅತ್ತು ಅತ್ತು ನೀವು ಬರುವುದಕ್ಕೆ ಒಂದು ನಿಮಿಷ ಮುಂಚೆ ಮಲಗಿಕೊಂಡಳು. ಅವಳೇ ಇದಕ್ಕೆ ಮೂಲ. ಈ ಹೊತ್ತು ಯಾರೋ ನಮ್ಮ ಮನೆಗೆ ಹಾಲುಣ್ಣುವ ಗಂಡುಮಗುವನ್ನೆತ್ತಿಕೊಂಡು ಬಂದಿದ್ದರಂತೆ. ಯಾವುದೋ ಮಾತಿನಮೇಲೆ ಮಾತು ಬಂದು-ನಿಮ್ಮೆಲ್ಲರಿಗೂ ಹಲಸಿನ ಹಣ್ಣಿನಂತೆ ಗಂಡು ಮಕ್ಕಳು ಹುಟ್ಟುತ್ತವೆ ; ನಮ್ಮ ನಿರ್ಭಾಗ್ಯಶಿರೋಮಣಿ ಏತಕ್ಕೂ ಕೆಲಸಕ್ಕೆ ಬಾರದ ಹೆಣ್ಣು ಮುಂಡೆಯನ್ನು ಹೆತ್ತಳು. ಹೆಣ್ಣು ಕಸ ಏಕೆ ? ನನ್ನ ಮಗನಿಗೆ ಇಂತಹ ಹೆಂಡತಿ ದೊರಕಿದುದು ಪ್ರಾರಬ್ಧಕರ್ಮದಿಂದಲೇ-ಎಂದು ಅತ್ತೆಯವರೇನೋ ಆಡಿದರಂತೆ. ಅದರಿಂದ ನಮ್ಮಕ್ಕಯ್ಯನಿಗೆ ಉಳುಕಿ-ಹೆಣ್ಣು ಮಗು ಹುಟ್ಟಿದರೆ ನಾನೇನು ಮಾಡತಕ್ಕದು ? ಅದು ನಿಮ್ಮ ಮಗನ ತಪ್ಪಲ್ಲದೆ ನನ್ನ ತಪ್ಪೇನೂ ಅಲ್ಲ-ಎಂದು ಹೇಳಿದಳು. ಇಬ್ಬರಿಗೂ ಜಗಳಹತ್ತಿತು. ಹಿರಿಯರಾಡಿದರೆ ತಪ್ಪೇನು ? ಸುಮ್ಮನಿರು-ಎಂದರೆ ಅಕ್ಕನು ನನ್ನ ಮಾತನ್ನು ಕೇಳಲಿಲ್ಲ. ಅತ್ತೆಯವರು ನನ್ನನ್ನೆಷ್ಟು ಮಾತಾಡುವುದಿಲ್ಲ ? ಆಡಿದಮಾತಿಗೆಲ್ಲಾ ನಾನು ಇದಿರುಮಾತಾಡುತ್ತೇನೆಯೇ ?

ನಾರಾ—ಅವರಿಬ್ಬರೂ ಹಾಗೆಯೇ ; ಒಬ್ಬರಿಗಾದರೂ ಸಹನೆಯಿಲ್ಲ. ನಮ್ಮಲ್ಲಿ ಹೆಂಗಸರು ಶುದ್ಧಮೂರ್ಖರು ; ನಿಷ್ಕಾರಣವಾಗಿ ಜಗಳವಾಡಿ ಉಪವಾಸ ಮಾಡಿ ಸಾಯುತ್ತಾರೆ. ಗಂಡಲ್ಲದೆ ಹೆಣ್ಣು ಹುಟ್ಟಿದರೆ ಹುಳಿತು ಹೋಗುವುದೋ ? ಉಪಯೋಗಕ್ಕೆ ಗಂಡೆಷ್ಟೋ ಹೆಣ್ಣೂ ಅಷ್ಟೇ. ಇಬ್ಬರೂ ಕೂಡಿದ್ದರಲ್ಲದೆ ಎಂದಿಗೂ ಸುಖವಿಲ್ಲ. ಅಯ್ಯೋ ಪಾಪ ! ದಿನ ತುಂಬಿದ ಬಸುರಿ. ಒಹುಕಾಲದವರೆಗೆ ಉಪವಾಸವಿದ್ದರೆ ಕಾಯಿಲೆ ಬರುವುದು. ನಾವು ಹೋಗಿ ಆಕೆಯನ್ನು ಊಟಕ್ಕೆ ಎಬ್ಬಿಸೋಣ, ಬಾ. (ಎಂದಿಬ್ಬರೂ ಸುಂದರಮ್ಮನ ಕಿರುಮನೆಗೆಹೋದರು.)

ಸತ್ಯ—(ತನ್ನೋರಗಿತ್ತಿಯ ಮುಖದಮೇಲಿದ್ದ ಮುಸುಕನ್ನು ತೆಗೆದು)-ಅಕ್ಕಯ್ಯಾ ! ನಿಮಗೋಸ್ಕರ ಯಾರೋ ಬಂದಿದ್ದಾರೆ, ನೋಡಿ.

ಸುಂದರಮ್ಮ—(ಮೈದುನನ ಮುಖವನ್ನು ನೋಡಿ ಕಣ್ಣುಮುಚ್ಚಿಕೊಂಡು ತಿರುಗಿ ಮುಸುಕುಹಾಕಿಕೊಂಡಳು)

ನಾ—(ಪುನಃ ಮುಸುಕು ತೆಗೆದು) ಅತ್ತಿಗೆ ! ನನ್ನನ್ನು ಮರೆತುಹೋದೆಯಾ ? ಎಷ್ಟೋ ದಿನಕ್ಕೆ ಇಲ್ಲಿಗೆ ಬಂದ ಮೈದುನನನ್ನು ಹೀಗೆಯೋ ಆದರಿಸುವುದು. ನನ್ನ ಕ್ಷೇಮಸಮಾಚಾರವನ್ನು ಕೇಳಿ ತಿಳಿದುಕೊಳ್ಳುವುದಕ್ಕೆ ನಿನಗೆ ಮನಸ್ಸಿಲ್ಲವೋ ?

ಒಳಗೆ ಮಾತಾಡಬೇಕೆಂದಿದ್ದರೂ ಮಾತಾಡದೆ ಸುಂದರಮ್ಮನು ಕಣ್ದೆರೆದು ನೋಡುತ್ತಿದ್ದಳು. ಆಗ ಇಬ್ಬರೂ ಒದೊಂದು ಕೈಯನ್ನು ಹಿಡಿದುಕೊಂಡು ಊಟಕ್ಕೇಳೆಂದು ಎಬ್ಬಿಸಿ ಬಲಾತ್ಕಾರದಿಂದ ಕರೆತಂದು ಮಣೆಯಮೇಲೆ ಕುಳ್ಳಿರಿಸಿದರು. ಅವಳು ಮೇಲೆ ಸ್ವಲ್ಪ ಸಂಕೋಚತೋರಿಸಿದಾಗ್ಯೂ ಒಳಗೆ ಹಸಿವೆಂಬ ದೇವರು ಹೊತ್ತಾರೆಯಿಂದಲೂ ಎದ್ದು ಊಟಮಾಡೆಂದು ಬಾಧಿಸುತ್ತಿದ್ದುದರಿಂದ ಅಭಿಮಾನವನ್ನು ಮರೆತುಹೋಗಿ ಅಷ್ಟರಲ್ಲೇ ಯಾರಾದರೂ ಬಲಾತ್ಕರಿಸಿದರೆ ಏಳೋಣ—ಎಂದು ಯೋಚಿಸುತ್ತಿದ್ದುದರಿಂದ ಅವರು ನಿಮಿತ್ತಮಾತ್ರಕ್ಕೆ ಕೈಯನ್ನು ಹಿಡಿದುಕೊಂಡುದೇಹೊರತು ಹಸಿವೇ ಆಕೆಯನ್ನು ಎಬ್ಬಿಸಿ ಮಣೆಯಹತ್ತಿರಕ್ಕೆ ಕರೆತಂದಿತು. ಆಗ ಸತ್ಯವತಿ ಎಲೆಹಾಕಿ ಬಡಿಸಿದಳು. ಸುಂದರಮ್ಮನ ಬಲಗೈ ಮೆಲ್ಲಮೆಲ್ಲನೆ ಅನ್ನದಮೇಲೆ ಹೋಗಿ ಕೆಲಸಮಾಡಲಾರಂಭಿಸಿದೊಡನೆಯೇ ಪಲ್ಲೆಯವೂ, ತೊವ್ವೆಯೂ, ಅನ್ನವೂ ಒಂದಾದಮೇಲೊಂದು ಮಾಯವಾಗುತ್ತಾ ಬಂದುವು. ಸ್ವಲ್ಪಹೊತ್ತಿನಲ್ಲಿ ಎಲೆಯೆಲ್ಲಾ ಬಂದಾಯಿತು. "ಇಷ್ಟು ಹೊತ್ತೂ ಕೋಪಮಾಡಿಕೊಂಡಿದ್ದು ಒಂದು ನಿಮಿಷದೊಳಗಾಗಿ ಎಲೆಯಲ್ಲಿದ್ದ ಅನ್ನವನ್ನೆಲ್ಲಾ ಮಾಯಮಾಡಿ ಇಂದ್ರಜಾಲವನ್ನು ತೋರಿಸಿದೆಯಲ್ಲ?"—ಎಂದು ನಾರಾಯಣಮೂರ್ತಿ ನಕ್ಕು, ಅತ್ತಿಗೆಯಾದುದರಿಂದ ಸ್ವಲ್ಪ ಪರಿಹಾಸಮಾಡಿ ತನ್ನ ಶಯನಗೃಹಕ್ಕೆ ಹೋದನು. ಸತ್ಯವತಿ ಒರಗಿತ್ತಿಗೆ ನಿದ್ದೆಬಂದಮೇಲೆ ತನ್ನ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಪತಿಯನ್ನು ಸೇರಿ ಕಿರುಮನೆಯ ಕದವನ್ನು ಮುಚ್ಚಿದಳು.

## ಮೂರನೆಯ ಪ್ರಕರಣ.

ಮರುದಿನದಿಂದ ಅಮ್ಮಂದಿರು, ಅಕ್ಕಂದಿರು, ಎಲ್ಲೆಲ್ಲಿ ನೋಡಿದರೂ ಗುಂಪುಕಟ್ಟಿಕೊಂಡು, ಸತ್ಯವತಿಯಮೇಲೆ ದೋಷಾರೋಪಣೆಮಾಡುತ್ತಾ, ಮೂಗಿನಮೇಲೆ ಬೆರಲಿಟ್ಟುಕೊಂಡು, ಆಶ್ಚರ್ಯಪಡತೊಡಗಿದರು. ಅವರು ಆಕೆಯಲ್ಲಿ ಮೊಟ್ಟಮೊದಲು ಕಂಡುಹಿಡಿದ, ದೊಡ್ಡತಪ್ಪು ನಡುಹಗಲಲ್ಲಿ ಅವಳು ಗಂಡನೊಂದಿಗೆ ಮಾತಾಡಿದುದೇ. ಅಯ್ಯೋ! ಇದೇನು! ಕೇಡುಗಾಲ! ಯಶೋದಮ್ಮನ ಎರಡನೆಯ ಸೊಸೆ ನೆನ್ನೆ ಮಾವನ ಇದಿರಾಗಿಯೇ ಗಂಡನ ಸಂಗಡ ಮಾತನಾಡುವುದಕ್ಕೆ ಮೊದಲು ಮಾಡಿದಳಂತೆ! ಎಂದೊಬ್ಬಳೂ. ಯಾವಾಗಲೂ ಇಲ್ಲದ ಇಂತಹ ವಿರುದ್ಧ

ಕಾರ್ಯಗಳೇ ನಡೆಯುತ್ತವೆ. ಈಕಾಲ ಕೆಟ್ಟುಹೋಯಿತು. ಎಂದೊಬ್ಬಳೂ, ಈಕಾಲದಲ್ಲಿ ಬಂದವರು ಅತ್ತೆ ಮಾವಂದಿರನ್ನು ಕಂಡರೆ ಲಕ್ಷ್ಯಮಾಡುತ್ತಾರೆಯೇ ? ಎಂದೊಬ್ಬಳೂ, ನಮ್ಮ ಕಾಲದಲ್ಲಿ ಹೆಂಗಸರು ತಮ್ಮ ಗಂಡಂದಿರ ಇದಿರಾಗಿ ಹಗಲು ನಿಂತು ಬದುಕುವುದುಂಟೇ? ಎಂದೊಬ್ಬಳೂ, ನನ್ನಂಥವಳು ಅತ್ತೆಯಾಗಿದ್ದರೆ, ಇಂತಹ ಆಟಗಳನ್ನೆಲ್ಲಾ ಒಂದು ನಿಮಿಷದಲ್ಲಿ ನಿಲ್ಲಿಸಿಬಿಡುತ್ತಿದ್ದೆನು. ಎಂದೊಬ್ಬಳೂ, ಇದು ಪೂರ್ವಕಾಲವಾಗಿದ್ದರೆ ಇಂತಹ ಅಕಾರ್ಯವನ್ನು ಮಾಡುತ್ತಿದ್ದಾಗಲೇ ಬಾಳೆಯ ಗಿಡವನ್ನು ಕಡಿಯುವಂತೆ ಅವಳನ್ನು ಕಡಿದು ತುಂಡುತುಂಡುಮಾಡುತ್ತಿದ್ದರು. ಎಂದೊಬ್ಬಳೂ—ಬೀದಿಬೀದಿಯಲ್ಲಿಯೂ ಮನೆಮನೆಯಲ್ಲಿಯೂ, ಕೇರಿಕೇರಿಯಲ್ಲಿಯೂ, ಹಲವುಬಗೆಯಾಗಿ ಕೈಗಳನ್ನು ತಿರುಗಿಸುತ್ತಾ ತಲೆಯನ್ನು ಅಲ್ಲಾಡಿಸುತ್ತಾ ದೀರ್ಘವಾಗಿ ರಾಗ ತೆಗೆದು ದೂರುವುದಕ್ಕೆ ಮೊದಲು ಮಾಡಿದರು. ಅಷ್ಟು ದೊಡ್ಡತಪ್ಪು ಮಾಡಿದುದಕ್ಕಾಗಿ ಮನೆಯಲ್ಲಿ ಸತ್ಯವತಿಗೆ ಯಶೋದಮ್ಮನು ಮಾಡುವ ಚೀಮಾರಿಗೂ, ಬೈಗುಳಿಗೂ ಪರಿಮಿತಿಯೇ ಇಲ್ಲ, ಆಹಾ ! ಏನು ಈ ಕಾಲಮಹಿಮೆ. ಈಗ ಗಂಡನೊಂದಿಗೆ ಹೆಂಡತಿ ಮಾತಾಡಿದುದು ತಪ್ಪಾಯಿತಲ್ಲ ? ನಾವು ಕಂಡಹಾಗೆ ಎಷ್ಟೋಮಂದಿ ಕೆಟ್ಟ ಹೆಂಗಸರು ನಾಲ್ಕು ಜನರಲ್ಲಿ ನಿರ್ಭಯವಾಗಿ ತಲೆಯೆತ್ತಿಕೊಂಡು ತಿರುಗಾಡುವರು. ಸತ್ಯವತಿಯು ಹಗಲು ಗಂಡನಸಂಗಡ ಮಾತಾಡಿದುದರಿಂದ ತನ್ನ ಓರಗೆಯವರಲ್ಲಿ ತಲೆತಗ್ಗಿಸಿಕೊಳ್ಳದೆ ತಿರುಗಾಡುವುದು ಕಷ್ಟವಾಯಿತೇ ? ಆವೂರಿನವರು ಅವಳಮೇಲೆ ಹೊರಿಸಿದ ಎರಡನೆಯ ತಪ್ಪು ವಿದ್ಯೆ. ಆಕೆಯ ತಾಯ್ತಂದೆಗಳು ವಿದ್ವಾಂಸರು. ಆದಕಾರಣ ಅವಳನ್ನು ಬಾಲಿಕಾ ಪಾಠಶಾಲೆಗೆ ಕಳುಹಿಸುತ್ತಾ ಅವಕಾಶವಾದಾಗ ಮನೆಯಲ್ಲಿ ತಾವೂ ಪಾಠ ಹೇಳುತ್ತಾ ಓದು ಬರಹಗಳನ್ನು ಚೆನ್ನಾಗಿ ಕಲಿಸಿ ಸಮಯನೋಡಿ, ಕಥೆಗಳ ಮೂಲವನ್ನೂ, ಲೋಕವಾರ್ತೆಗಳ ಮೂಲವನ್ನೂ, ಒಳ್ಳೆಯ ನೀತಿಗಳನ್ನೂ, ಅವಳ ಮನಸ್ಸಿಗೆ ನಾಟುವಂತೆ ಬೋಧಿಸಿದ್ದರು. ಆದುದರಿಂದ ಆಕೆ ಸತ್ಯಸಹನಾದಿ ಸಕಲ ಸದ್ಗುಣಸಂಪನ್ನೆಯಾಗಿ ಸನ್ಮಾರ್ಗವನ್ನು ಬಿಟ್ಟು ನಡೆಯಳು. ಈಗ ಸ್ವಲ್ಪಮಟ್ಟಿಗೆ ಓದಿಕೊಂಡಿರುವವರೂ, ಓದದೆ ಇರುವವರೂ, ಸಾಧಾರಣವಾಗಿ ಮದುವೆಯಾದ ಕೂಡಲೆ ತಮ್ಮ ಹೆಂಡತಿಯರನ್ನು ಪಾಠಶಾಲೆಗೆ ಕಳುಹಿಸಕೂಡದೆಂದು ಮಾವಂದಿರ ಸಂಗಡ ಜಗಳವಾಡುವುದನ್ನು ನೀವೂ ನೋಡಿರಬಹುದು. ಆದರೆ ನಾರಾಯಣ ಮೂರ್ತಿ ಹಾಗೆ ಜಗಳವಾಡದೆ, ತನ್ನಹೆಂಡತಿಗೆ ಓದಿಸುವುದಕ್ಕಾಗಿ ಮಾವಂದಿರನ್ನೂ ಭಾವಮೈದಂದಿರನ್ನೂ, ಮತ್ತಷ್ಟು ಪ್ರೋತ್ಸಾಹಪಡಿಸುತ್ತಾ ಯಾರೂ

ಕಾಣದಂತೆ ತಾನೂ ಪುಸ್ತಕಗಳನ್ನು ತಂದುಕೊಟ್ಟು ಮದುವೆಯಾದಂದಿನಿಂದ ಅವಳಿಗೆ ಓದುಹೇಳುತ್ತಾ ಬಂದನು. ಅದರಿಂದ ಸತ್ಯವತಿ ವಿದ್ಯೆಯಲ್ಲಿಯೂ ಬುದ್ಧಿಯಲ್ಲಿಯೂ ತನ್ನ ಓರಗೆಯವರನ್ನೆಲ್ಲಾ ಮೀರಿಸಿದ್ದಳು. ಸ್ವಲ್ಪ ಓದುಕಲಿತಿರುವ ಕೆಲ ಹುಡುಗಿಯರಂತೆ ಅವಳು ತಾರಾಶಶಾಂಕವಿಜಯ ಮುಂತಾದ ದುಷ್ಕಾವ್ಯಗಳನ್ನು ಓದಳು. ಶೃಂಗಾರ ಕಾವ್ಯಗಳ ಹೆಸರನ್ನೂ ಕೇಳಲೊಲ್ಲಳು. ತನಗೆ ಅವಕಾಶವಾದಾಗ ಪತಿವ್ರತೆಯರ ಚರಿತ್ರೆಗಳನ್ನೂ, ನೀತಿಗಳನ್ನೂ, ಒಳ್ಳೆಯ ನಡೆವಳಿಯನ್ನು ಬೋಧಿಸುವ ಪುಸ್ತಕಗಳನ್ನೂ, ಓದುವಳು. ಅದರಿಂದ ತಮ್ಮಂತೆ ಹೆರರ ಮೇಲೆ ದೋಷಾರೋಪಣೆ ಮಾಡುವ ವ್ಯರ್ಥಪ್ರಸಂಗಕ್ಕೆ ಈಕೆ ಬರುವದಿಲ್ಲವೆಂದೂ ಕವಡೆ ಗಜ್ಜುಗದ ಕಾಯಿಗಳ ಆಟವನ್ನು ಬಿಟ್ಟು, ಕಸೂತಿ ಹಾಕುವಳಲ್ಲ ಎಂದೂ ನೆರೆಹೊರೆಯವರು ಎರಡು ವಿಷಯಗಳಲ್ಲಿ ಸಿಟ್ಟುಗೊಂಡಿದ್ದರು. ತನ್ನ ಸೊಸೆ ಓದುವುದನ್ನು ಹೇಗಾದರೂ ತಪ್ಪಿಸಬೇಕೆಂದು ಯಶೋದಮ್ಮನು:— "ಹೆಂಗಸು ಓದಿಕೆಟ್ಟಳು ; ಗಂಡಸು ಓದದೆ ಕೆಟ್ಟನು." ಎಂಬ ಗಾದೆಯನ್ನು ಉದಾಹರಿಸುತ್ತಲೂ, ಸ್ತ್ರೀಯರು ಓದಿದರೆ ಸಭೆಗಳಿಗೆ ಹೋಗಿ ಅಧಿಕಾರಗಳನ್ನು ಮಾಡಬಲ್ಲರೇ ? ಓದಬೇಡ-ಎಂದು ಬೋಧಿಸುತ್ತಲೂ ಯಾವಾಗಲೂ ಇಲ್ಲದ ಲಕ್ಷ್ಮೀನಾರಾಯಣಯ್ಯನವರ ಸೊಸೆ ಓದುತ್ತಾಳೆ ಎಂದು ನಂಟರೆಲ್ಲರೂ ಆಡಿಕೊಳ್ಳುವುದರಿಂದ ತಾನು ಅಪಮಾನಕ್ಕೆ ಗುರಿಯಾಗಿ ತಲೆಯೆತ್ತಿಕೊಂಡು ತಿರುಗದಂತೆ ಆಗಿದೆ—ಎಂದು ದೂಷಿಸುತ್ತಲೂ, ಓದುಕಲಿತ ಹೆಂಗಸಿನೊಡನೆಯೂ ಅಡಿಗೆ ಕಲಿತ ಗಂಡಸಿನೊಡನೆಯೂ ಯಾರೂ ಬೇಯಲಾರರು—ಎಂದುಬಯ್ಯುತ್ತಲೂ ಇದ್ದಳು. ಇದಲ್ಲದೆ ಸಿಕ್ಕಿದಾಗ ಪುಸ್ತಕಗಳನ್ನೆಲ್ಲಾ ಹರಿದುಹಾಕಿ ತನ್ನ ಕೈಲಾದ ಮಟ್ಟಿಗೂ ಅವಳ ವಿದ್ಯಾಭ್ಯಾಸಕ್ಕೆ ಅಡ್ಡಿಮಾಡುತ್ತಿದ್ದಳು.

ಆದರೆ ಸತ್ಯವತಿ ಅತ್ತೆಯಿಂದ ತನಗೆಷ್ಟು ತೊಂದರೆಯಾದರೂ ಬದಲು ಮಾತಾಡಳು. ಮಧ್ಯಾಹ್ನ ಯಶೋದಮ್ಮನಿಗೆ ನಿದ್ದೆ ಬಂದಮೇಲೂ ಅವಳು ತನ್ನ ಕಿರುಮನೆಯ ಕದವನ್ನು ಮುಚ್ಚಿಕೊಂಡು ಕುಳಿತಿರುವಾಗಲೂ ಬೆಳಗಿನಜಾವದಲ್ಲಿಯೂ, ರಹಸ್ಯವಾಗಿ ತನ್ನ ವಿದ್ಯೆಯನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಲೇ ಇದ್ದಳು. ಓದುವುದಕ್ಕೆ ಮನಸ್ಸಿದ್ದರೆ ಎಷ್ಟು ಕಷ್ಟಪಟ್ಟಾದರೂ ಕಲಿಯಬಹುದು. ಸತ್ಯವತಿಯ ಮೂರನೆಯ ತಪ್ಪು ಯಾವುದೆಂದರೆ—ಶುಚಿಯಾಗಿರುವಿಕೆ. ಆಕೆ ಚಿಕ್ಕಂದಿನಲ್ಲಿಯೇ ಸುಖಾಧಾರಪ್ರಕಾಶಕ, ಆರೋಗ್ಯಮಾರ್ಗದರ್ಶಿನಿ ಎಂಬ ಪುಸ್ತಕಗಳನ್ನು ಓದಿ, ಗಾಳಿ ಮುಂತಾದುವುಗಳ ಉಪಯೋಗವನ್ನು ತಿಳಿದಿದ್ದಳು.

ಆಕೆ ತನ್ನ ದೇಹಾರೋಗ್ಯಕ್ಕಾಗಿ ಶಯನಗೃಹವನ್ನು ಶುಚಿಯಾಗಿ ಇಟ್ಟುಕೊಳ್ಳುವಳು; ಗೋಡೆಗಳಿಗೆ ಚೆನ್ನಾಗಿ ಸುಣ್ಣ ತುಂಬಿಸುವಳು; ಗಾಳಿ ನಿರ್ಮಲವಾಗಿರಬೇಕೆಂಬ ಮನಸ್ಸಿನಿಂದ ಹಿತ್ತಿಲಲ್ಲಿ ಸೆಗಣಿಯ ಕುಪ್ಪೆ ಮುಂತಾದ ದುರ್ಗಂಧಪದಾರ್ಥಗಳನ್ನು ಆಗಾಗ್ಗೆ ತೆಗೆಯಿಸುವಳು; ಮಗ್ಗುಲ ಹಾಸಿಗೆಯನ್ನೂ ಉಡುವ ಸೀರೆಯನ್ನೂ ಮಾಸುವುದಕ್ಕಿಂತ ಮುಂಚೆ ಒಗೆಯಿಸುವಳು; ನಿರ್ಮಲವಾದ ನೀರನ್ನೇ ಕುಡಿಯುವಳು. ಆಕೆ ಸೀನೀರಿನ ತಂಬಿಗೆಗಳನ್ನೂ ಅಡಿಗೆ ಮಾಡುವ ಒಟ್ಟಲುಗಳನ್ನೂ ಬಳಸುವ ಪಾತ್ರೆಗಳನ್ನೂ ಪ್ರತಿದಿನವೂ ತೊಳೆದು ಬೆಳಗುವಳು, ಆದಕಾರಣ ಆಕೆಯ ಚಿಕ್ಕಮನೆಯಲ್ಲಿ ಸೊಳ್ಳೆಗಳೂ, ಇರುವೆಗಳೂ, ತಿಗಣೆಗಳೂ, ಕೈಯ್ಯೆಣ್ಣೆಯ ಕರೆಗಳೂ, ಇಲ್ಲಣವೂ ಯಾವುದೂ ಇಲ್ಲ. ಅದನ್ನು ನೋಡಿದರೆ ಪರಮಾನಂದವಾಗುವುದು. ಬೆಪ್ಪುತನದಿಂದ ಜೀವಿಸುವ ಹಲವು ಮಂದಿ ಪಾಮರ ಸ್ತ್ರೀಯರು ಅದನ್ನು ನೋಡಿ, ಸಹಿಸಲಾರದೆ ಸತ್ಯವತಿಯನ್ನು ದೊರೆಸಾನಿ ಎಂದೂ ಸೀಮೆಯ ರಾಣಿಯೆಂದೂ ಪರಿಹಾಸ ಮಾಡುತ್ತಿದ್ದರು. ಸತ್ಯವತಿಯ ಮೇಲೆ ಹೊರಿಸಿದ ನಾಲ್ಕನೆಯ ತಪ್ಪು ಯಾವುದೆಂದರೆ—ನಿಯಮಗಳನ್ನೂ ವ್ರತಗಳನ್ನೂ ಮಾಡದಿರುವಿಕೆ. ಆಕೆ ಮನಸ್ಸಿನಲ್ಲಿ ಪರಮೇಶ್ವರನನ್ನು ಧ್ಯಾನಮಾಡಿ ಪ್ರಾರ್ಥಿಸುವುದೇ ಹೊರತು ಒಂದುದಿನವಾದರೂ ವ್ರತಗಳ ಹೆಸರನ್ನು ಹೇಳಿ ಡಾಂಭಿಕರಂತೆ ಸುಮ್ಮನೆ ಕಾಲಹರಣ ಮಾಡಳು. ಏಕಾದಶಿಯೆಂದೂ ಶುಕ್ರವಾರವೆಂದೂ ಶಿವರಾತ್ರಿಯೆಂದೂ ಉಪವಾಸವನ್ನೂ ಒಪ್ಪೊತ್ತನ್ನೂ ಜಾಗರಣೆಯನ್ನೂ ಮಾಡಿ ದೇಹವನ್ನು ಕೆಡಿಸಿಕೊಳ್ಳಳು; ದೇಹಕ್ಕೆ ವಿರೋಧವಾದೀತೆಂಬ ಭಯದಿಂದ ಒದ್ದೆಯಬಟ್ಟೆಯನ್ನು ಒಂದುದಿನವಾದರೂ ಉಡಳು; ಅಗಸನ ಮನೆಯ ಮಡಿಯಲ್ಲಾದರೂ ಊಟಮಾಡುವಳು; ಬಿಸಿನೀರಿನಲ್ಲಿ ಸ್ನಾನಮಾಡುವಳೇ ಹೊರತು ಪುಣ್ಯ ಬರುವುದೆಂದು ನದಿಗಳಿಗೆ ಸ್ನಾನಕ್ಕೆ ಹೋಗಳು, ಯಶೋದಮ್ಮನು ಇದನ್ನೆಲ್ಲಾ ಕಂಡು ತನ್ನ ಸೊಸೆಯ ಹತ್ತಿರ ಆಚಾರವಿಲ್ಲವೆಂದೂ ಈ ಎರಡನೆಯ ಸೊಸೆಯಿಂದ ಅನಾಚಾರವು ಬಂದು ಸುತ್ತಿಕೊಂಡು ಮೈಲಿಗೆಯ ಕೂಳು ತಿನ್ನುವ ಹಾಗಾಯಿತೆಂದೂ ಹಾಸಿಗೆಯಿಂದೆದ್ದ ಮೊದಲು ರಾತ್ರಿ ಕಣ್ಣಿಗೆ ನಿದ್ದೆ ಬರುವವರೆಗೆ ದೂರುತ್ತಿದ್ದಳು. ಈ ಸೊಸೆಯಲ್ಲಿ ಯಶೋದಮ್ಮನು ಹೊರಿಸಿದ ಐದನೆಯ ತಪ್ಪು ಯಾವುದೆಂದರೆ—ಅವಳ ತಂದೆ ಭಾಗ್ಯವಂತನಾಗಿರುವುದೇ. ಆತನು ಪ್ರತಿ ತಿಂಗಳಲ್ಲಿಯೂ ತನ್ನ ಮಗಳಿಗೆ ಹತ್ತು ರೂಪಾಯಿಗಳನ್ನು ಕಳುಹಿಸುತ್ತಿದ್ದನು. ಆಕೆ ಆ ಹಣದಿಂದ ತನ್ನೊರಗಿತ್ತಿಯರಿಗೂ ಭಾವಂದಿರ ಮಕ್ಕಳಿಗೂ ಬಟ್ಟೆ ಬರೆ ಸೀರೆ ಕುಪ್ಪಸ

ಮುಂತಾದುವುಗಳನ್ನು ಕೊಂಡುಕೊಡುತ್ತಾ ಇದ್ದಳು. ಮತ್ತು ಗೃಹಕೃತ್ಯಕ್ಕೆ ತೊಂದರೆಯಾಗಿರವಾಗ ಏನಾದರೂ ಕೊಡುತ್ತಾ ಅಪೇಕ್ಷಿಸಿದಾಗ ಗಂಡನಿಗೆ ಪುಸ್ತಕ ಮೊದಲಾದುವುಗಳಿಗಾಗಿ ಕೆಲವು ಹಣವನ್ನು ಕಳುಹಿಸುತ್ತಿದ್ದಳು. ಇದಲ್ಲದೆ ಕುರುಡರು, ಕುಂಟರು, ರೋಗಿಗಳು ಮುಂತಾದ ಬಡವರಿಗೆ ಸಹಾಯ ಮಾಡುತ್ತಾ ಇದ್ದಳೇ ಹೊರತು ತನ್ನ ತಿರುತಿಂಡಿಯ ನಿಮಿತ್ತವಾಗಿಯಾಗಲಿ, ಒಡವೆಗಳಿಗಾಗಿಯಾಗಲಿ, ಸೀಮೆ ಮುತ್ತಿಗಾಗಿಯಾಗಲಿ ಒಂದು ಕಾಸನ್ನೂ ವ್ಯಯಮಾಡಳು. ಹೀಗಿದ್ದರೂ ಯಶೋದಮ್ಮನು ತನಗೆ ಕೋಪಬಂದಾಗಲೆಲ್ಲಾ ಸೊಸೆಯನ್ನು—ಮಹಾರಾಣಿಯವರೆಂದೂ ದೊಡ್ಡ ದೊರೆಸಾನಿಯವರೆಂದೂ ನವಾಬನ ಮಗಳೆಂದೂ ಹಣದ ಕೊಬ್ಬೆಂದೂ ಬೈದು, ಧನಿಕರಾಗಿದ್ದುದರಿಂದ ಅವಳ ತಂದೆಯನ್ನೂ, ತಾಯಿಯನ್ನೂ ಶಪಿಸುತ್ತಿದ್ದಳು. ಈ ತಪ್ಪುಗಳಲ್ಲದೆ ಸತ್ಯವತಿಯಲ್ಲಿ ಬೇರೆ ಯಾವ ತಪ್ಪೂ ಕಾಣುವುದಿಲ್ಲ. ಇಂತಹ ದೋಷಗಳೇ ಎಲ್ಲಾ ಸ್ತ್ರೀಯರಲ್ಲಿಯೂ ಇದ್ದರೆ ದೇಶವು ಶೀಘ್ರವಾಗಿಯೇ ಒಳ್ಳೆಯ ಸ್ಥಿತಿಗೆ ಬರುವುದರಲ್ಲಿ ಏನೇನೂ ಅಡ್ಡಿಯಿಲ್ಲ.

## ನಾಲ್ಕನೆಯ ಪ್ರಕರಣ.

ಕೆಲವು ದಿನಗಳು ಕಳೆದ ಬಳಿಕ ಒಂದು ದಿನದ ರಾತ್ರಿ ಎರಡು ಮೂರು ಗಳಿಗೆ ಹೊತ್ತಾದಮೇಲೆ ಸುಂದರಮ್ಮನಿಗೆ ನೋವೆತ್ತಿತು. ಆಗ ವೆಂಕಟೇಶ ನಾರಾಯಣ ಮೂರ್ತಿ ಇವರಿಬ್ಬರೇ ಹೊರತು ಬೇರೆ ಗಂಡಸರು ಯಾರೂ ಮನೆಯಲ್ಲಿ ಇರಲಿಲ್ಲ. ಕೆಲವರು ಹೊಲಗಳಿಗೂ ಕೆಲವರು ಚಾವಡಿಗೂ ಹೊರಟುಹೋಗಿದ್ದರು. ಊರ ಬಯಲಿನಲ್ಲಿ ಒಂದು ಗ್ರಾಮದೇವತೆಯ ಗುಡಿಯುಂಟು. ಅದರ ಹತ್ತಿರದಲ್ಲಿಯೇ ಒಂದು ಅರಳೀಮರದ ಬುಡದಲ್ಲಿ ಬೇವಿನ ಮರ ಹುಟ್ಟಿ ಎರಡೂ ಸೇರಿ ಮೇಲೆ ಬ್ರಹ್ಮಾಂಡವಾಗಿ ವ್ಯಾಪಿಸಿವೆ. ಚಿಕ್ಕಗಿಡವಾಗಿದ್ದಾಗ ಕರಣಿಕನ ತಂದೆ ಅವನ್ನು ತಂದು ನೆಟ್ಟು ಎರಡಕ್ಕೂ ಮದುವೆ ಮಾಡಿದನಂತೆ. ಆ ಮರಗಳ ಸುತ್ತಲೂ ಗುಂಡಾಗಿ ವಿಶಾಲವಾದ ಒಂದು ಮಣ್ಣಿನ ಜಗುಲಿ ಇದೆ. ಅದನ್ನೇ ಜನರು ಚಾವಡಿಯೆಂದು ಕರೆಯುತ್ತಾರೆ. ಪ್ರತಿದಿನವೂ ಸಾಯಂಕಾಲದಲ್ಲಿ ಆ ಗ್ರಾಮದ ಕರಣಿಕನೂ ಮುನಸೀಫನೂ ಆ ಜಗಲಿಯಮೇಲೆ ಸೇರಿ ಜನಗಳ ವ್ಯವ

ಹಾರಗಳನ್ನು ತೀರಿಸಿ ಹೊತ್ತು ಕಳೆಯುತ್ತಾರೆ. ಬೆಳಗ್ಗೆ ಶಾನುಭೋಗ ಮುಂತಾದವರು ಅಲ್ಲಿ ಕುಳಿತುಕೊಂಡು ಹಲ್ಲುಜ್ಜಿಕೊಳ್ಳುತ್ತಾ ವ್ಯವಹಾರ ಮೊದಲಾದುದನ್ನು ಕೇಳುತ್ತಾರೆ. ಅದಕ್ಕೆ ಸ್ವಲ್ಪದೂರದಲ್ಲಿ ದನಗಳನ್ನು ಕೂಡುವ ಒಂದು ದೊಡ್ಡಿ ಇದಿರಾಗಿ ಕಾಣುತ್ತದೆ. ಹೊಲಗಳಲ್ಲಿ ಕೆಲಸವಿಲ್ಲದವರು ಸಾಧಾರಣವಾಗಿ ಸಾಯಂಕಾಲದಲ್ಲಿ ಆ ಜಗುಲಿಯಮೇಲೆ ಕುಳಿತುಕೊಂಡು ಲೋಕವಾರ್ತೆಯನ್ನೂ ಕಾಲಸ್ಥಿತಿಯನ್ನೂ ಬೆಳೆಯ ವಿಷಯವನ್ನೂ ಮಾತನಾಡಿಕೊಳ್ಳುತ್ತಾ ಹೊತ್ತು ಮುಳುಗಿದ ಮೇಲೆ ಮನೆಗಳಿಗೆ ಹೋಗುತ್ತಾರೆ. ನಾರಾಯಣಮೂರ್ತಿ ತನ್ನ ಪ್ರಯಾಣದ ಸಂಗತಿಯನ್ನು ಅಣ್ಣನ ಸಂಗಡ ಹೇಳುತ್ತಿರುವಾಗ ಒಳಗಿದ್ದ ಯಶೋದಮ್ಮನು—ಮಂತ್ರಸಾನೀ! ಮಂತ್ರಸಾನೀ!—ಎಂದು ಕೂಗುತ್ತಾ ಒಂದು ಮಕ್ಕಳನ್ನು ನೋಡಿ—"ಅಪ್ಪಾ! ನೀವು ಓಡುತ್ತಾ ಹೋಗಿ ನಾಗಮ್ಮನನ್ನು ಕರೆದುಕೊಂಡು ಬನ್ನಿ"—ಎಂದು ಹೇಳಿ ಪುನಃ ಒಳಗೆ ಹೋದಳು. ಆ ಸುತ್ತುಮುತ್ತಿನ ನಾಲ್ಕೈದು ಗ್ರಾಮಗಳಿಗೂ ನಾಗಮ್ಮನೊಬ್ಬಳೇ ಮಂತ್ರಸಾನಿ. ಅವಳು ಶೂದ್ರಜಾತಿಯ ಹೆಂಗಸು. ಅವಳಿಗೆ ಈಗ ಪ್ರಾಯಶಃ ಎಂಭತ್ತು ವರ್ಷವಾಗಿರಬಹುದು. ಅವಳು ಪ್ರಾಯದಲ್ಲಿ, ಯಾವನೊಡನೆಯೋ ಹೊರಟು ಬಂದಳೆಂದು ಜನಗಳು ಹೇಳುತ್ತಾರೆ. ಅವಳಿಗೆ ಮಕ್ಕಳು ಮರಿಗಳೇನೂ ಇಲ್ಲ. ಮುಂಗೊಂಡಾಗ್ರಹಾರಕ್ಕೆ ಒಂದುವರೆ ಮೈಲಿ ದೂರದಲ್ಲಿ ಒಂದು ಚಿಕ್ಕ ಹಳ್ಳಿಯುಂಟು. ಅಲ್ಲಿ ಅವಳು ಗುಡಿಸಲು ಹಾಕಿಕೊಂಡು ಒಗೆತನಮಾಡುವಳು. ಅವಳಿಗೆ ಪ್ರಸವ ವೈದ್ಯವಾಗಲಿ, ಸುಖಪ್ರಸವಕ್ಕೆ ಮಾಡಬೇಕಾದ ಉಪಾಯಗಳಾಗಲಿ, ಯಾವುದೂ ತಿಳಿಯದಿದ್ದರೂ ಕೆಲವುವೇಳೆ ನೋವುಬಂದವರಿಗೆ ಮಂತ್ರತೀರ್ಥವನ್ನು ಕೊಟ್ಟು ಮಂತ್ರಸಾನಿಯ ಕೆಲಸದಲ್ಲಿ ಗಟ್ಟಿಗಳೆಂದು ಪ್ರಸಿದ್ಧಿಗೆ ಬಂದಿರುವಳು. ಆ ದಿನದ ರಾತ್ರಿ ಅಣ್ಣತಮ್ಮಂದಿರಿಬ್ಬರೂ ಅವಳ ಮನೆಗೆ ಹೋಗಿ, ಈ ಸಂಗತಿಯನ್ನು ತಿಳಿಸಿ ಶಟ್ಟನೆ ಬಾರೆಂದು ಕರೆದರು. ಅವರೆಷ್ಟು ಆತುರ ಪಡುತ್ತಿದ್ದರೂ ನಡುಮನೆಯಲ್ಲಿ ಕುಂಪಟಿಯ ಹತ್ತಿರ ಕುಳಿತಿದ್ದ ನಾಗಮ್ಮನು ಹೊಗೆ ಬತ್ತಿಯನ್ನು ಹೊತ್ತಿಸಿ ಸೇದಿ ಮುಗಿಸುವವರೆಗೂ ಏಳಲೇ ಇಲ್ಲ. ಆಮೇಲೆ ಮೆಲ್ಲನೆದ್ದು ಮಂಚವನ್ನು ಗೋಡೆಗೊರಗಿಸಿ, ಕುಂಪಟಿಯನ್ನು ಕಿರುಮನೆಯಲ್ಲಿಟ್ಟು, ಸೀರೆಯ ಸೆರಗಿನಲ್ಲಿ ಕೆಲವು ನಾರುಬೇರುಗಳನ್ನು ಕಟ್ಟಿಕೊಂಡು ಒಂದು ಮೇಲುಹೊದಿಕೆ ಹೊದ್ದುಕೊಂಡು ಒಳಗಣ ಕದವನ್ನು ಮುಚ್ಚಿ ಹೊರಗೆ ಬೀದಿಯ ಬಾಗಲಿಗೆ ಬೀಗಹಾಕುತ್ತಿರುವಾಗ ಒಂದು ಮುದಿಗೂಬೆ ಕೂಗಿತು. ನಾಗಮ್ಮನು ಅದನ್ನು ಕೇಳಿ ಅಪಶಕುನವಾ

ಯಿತೆಂದು ಪುನಃ ಕದವನ್ನು ತೆರೆದು ಒಳಗೆ ಹೋದಳು. ಆಗ ವೆಂಕಟೇಶನಿಗೆ ಆ ಮುದಿಗೂಬೆಯಮೇಲೆ ತಡೆಯಲಾರದಷ್ಟು ಕೋಪಬಂದಿತು. ಅದನ್ನು ಬಯ್ಯಲಾರಂಭಿಸಿದನು. ಆಗ ನಾರಾಯಣಮೂರ್ತಿ—ಜನರ ಮರುಳುತನವನ್ನೂ ಶಕುನಗಳಲ್ಲಿ ಅವರಿಗಿರುವ ನಂಬಿಕೆಯನ್ನೂ ನೋಡಿ ಅವರ ಸ್ಥಿತಿ ಯಾವಾಗ ಚೆನ್ನಾಗುವುದೋ ಎಂದು ಯೋಚಿಸುತ್ತಿದ್ದನು. ಅಣ್ಣತಮ್ಮಂದಿರ ಶರೀರವಲ್ಲೇ ಇದ್ದರೂ, ಮನಸ್ಸೆಲ್ಲಾ ಮನೆಯಮೇಲೆಯೇ ಇದ್ದುದರಿಂದ ಅವರು ಎಷ್ಟುಬಾರಿ ಕೂಗಿದ್ದಾಗ್ಯೂ ಆ ಸೂಲಗಿತ್ತಿ ಒಂದು ಗಳಿಗೆಯವರೆಗೆ ಒಳಗಿನಿಂದ ಹೊರಡಲೇ ಇಲ್ಲ. ಆಮೇಲೆ ನಾಗಮ್ಮನು ಹೊತ್ತಾಯಿತೆಂದು ಮುಲುಕುತ್ತಾ ಬೀದಿಯ ಕದಕ್ಕೆ ಬೀಗಹಾಕಿ ಹೊರಟಳು.

ವೆಂಕ—ಅಯ್ಯಾ! ನೀನು ನಾಳೆ ದಶಮಿಯದಿನ ಪ್ರಯಾಣವನ್ನು ನಿಲ್ಲಿಸಿ ಅಮಾವಾಸ್ಯೆಯಾದಮೇಲೆ ಪಂಚಮಿಯೋ ಸಪ್ತಮಿಯೋ ಹೊರಡಬಾರದೇ? ಆಗ್ಗೆ ಪುರುಡೂ ಕಳೆದುಹೋಗುವುದು.

ನಾರಾ—ಅಣ್ಣಯ್ಯಾ! ನಾನು ನಾಳೆಯೇ ಹೊರಡಬೇಕು. ಇಲ್ಲದಿದ್ದರೆ ಪಾಠ ತಪ್ಪಿಹೋಗುವುದು. ಅತ್ತಿಗೆಗೆ ನೋವೆತ್ತಿರುವುದರಿಂದ ಮಗು ಬಾಣಂತಿಯರು ಸುರಕ್ಷಿತರಾಗುವುದನ್ನು ನೋಡಬೇಕೆಂದು ನಾಳೆ ಹೊರಡದೆ—ದಶಮಿಯ ದಿನ ಹೊರಡುವೆನು—ಎಂದು ನಿನ್ನ ಸಂಗಡ ಹೇಳಿದನು.

ವೆಂಕ—ಚಿಂತೆಯಿಲ್ಲ, ಅವಳಿಗೆ ಪಥ್ಯಕ್ಕೆ ಹಾಕಿದಮೇಲೆಯಾದರೂ ಹೊರಡು.

ನಾರಾ—ಅಣ್ಣಾ! ಹೆತ್ತೊಡನೆ ಪಥ್ಯಕ್ಕೆ ಹಾಕದಿದ್ದರೆ ಕಾಯಿಲೆ ಬರುವುದು. ಅವರಿಗೆ ಪ್ರಸವವಾಗುವಾಗಲೇ ಎಷ್ಟೋ ಆಲಸ್ಯ, ಅದರಮೇಲೆ ಹೊಟ್ಟೆಗೂ ಆಧಾರವಿಲ್ಲದಿದ್ದರೆ ಮೇಲೆ ಏಳುವುದಕ್ಕೂ ಶಕ್ತಿಯಿರಲಾರದು. ಕೆಲವು ಸಮಯಗಳಲ್ಲಿ ಈ ಲಂಘನೆಗಳಿಂದ ರೋಗಗಳು ಬರುವುದೂ ಉಂಟು. ಇಂಗ್ಲಿಷ್ ಜನರಲ್ಲಿ ಬಾಣಂತಿಯರನ್ನು ನೋಡಿಲ್ಲವೇ? ನಮ್ಮಂತೆ ಲಂಘನಮಾಡಿಸದೆ ಇರುವುದರಿಂದ ಅವರು ಎಷ್ಟೋ ದೃಢರಾಗಿದ್ದು, ಕೆಲವು ದಿನಗಳಲ್ಲಿಯೇ ಎದ್ದು ಸಾಧಾರಣವಾಗಿ ತಿರುಗಾಡುತ್ತಾರೆ. ನೀನು ಹೆಂಗಸರನ್ನೆಲ್ಲಾ ಗದರಿಸಿ, ಅತ್ತಿಗೆಗೆ ನೀರುಮಿಂದ ದಿನದಿಂದಲೇ ಪಥ್ಯಕ್ಕೆ ಹಾಕುವಂತೆ ಮಾಡು.

ವೆಂಕ—ಮೂರುದಿನ ಕಳೆಯುವವರೆಗೆ ಬಾಣಂತಿಯರಿಗೆ ಅನ್ನದ ಮಾತನ್ನೇ ಎತ್ತಬಾರದು. ಇದು ಸರಿಯಷ್ಟೆ? ಕುಡಿಯುವುದಕ್ಕೆ ನೀರನ್ನೂ ಕೊಡಬಾರದು.

ಇಂಗ್ಲಿಷ್ ವೈದ್ಯವು ನಮ್ಮವರಿಗೆ ಎಂದಿಗೂ ಕೆಲಸಕ್ಕೆ ಬಾರದು. ಶಸ್ತ್ರವೈದ್ಯವೊಂದು ಹೊರತು ಬೇರೇನೂ ಅವರಿಗೆ ತಿಳಿಯದು.

ನಾರಾ—ನಾಲ್ಕು ದಿನಗಳವರೆಗೆ ಪಥ್ಯಕ್ಕೆ ಹಾಕದಿದ್ದರೂ ಚಿಂತೆಯಿಲ್ಲ. ಆಮೇಲೆಯೇ ನಾನು ಹೊರಡುತ್ತೇನೆ. ಅನ್ನದ ವಿಷಯವನ್ನು ಹೇಳಿದರೆ ಹೆಂಗಸರು ಕೇಳಲಾರರು. ಹೆರಿಗೆ ಮನೆಗೆ ಗಾಳಿಯಾದರೂ ಬರುವಂತೆ ಕದ ತೆರೆದಿರುವಂತೆ ಹೇಳು.

ವೆಂ—ಬಾಣಂತಿಯರಿಗೆ ಗಾಳಿ ಎಷ್ಟುಮಾತ್ರಕ್ಕೂ ಕೂಡದು. ಹೆರಿಗೆ ಮನೆಯಾವಾಗಲೂ ಕತ್ತಲೆಯಾಗಿರಬೇಕು. ಕದ ತೆರೆದರೆ ಪಿಶಾಚಿ ಬಂದು ಶಿಶುವಿನ ಕೊರಲನ್ನು ಮುರಿದು ಹಾಕುವುದು. ಹತ್ತು ದಿನ ಕಳೆಯುವ ತನಕ ಬಹು ಜಾಗರೂಕರಾಗಿ ನೋಡಿಕೊಳ್ಳಬೇಕು. ನಮ್ಮಮ್ಮನು ಎಷ್ಟೋ ಹೆತ್ತವಳು. ಅವಳಿಗಿಂತ ನಾವು ಬುದ್ಧಿವಂತರೇ ?

ಎಂದು ಮಾತಾಡುತ್ತಾ ಇಬ್ಬರೂ ಸ್ವಲ್ಪ ಹೊತ್ತಿನೊಳಗೆ ಮನೆ ಸೇರಿದರು. ಸೂಲಗಿತ್ತಿ ಕೈಕಾಲು ತೊಳೆದುಕೊಂಡು ತಾನು ಉಟ್ಟುಕೊಂಡು ಬಂದಿದ್ದ ಸೀರೆಯನ್ನು ಬಿಚ್ಚಿ, ಮನೆಯವರು ಕೊಟ್ಟ ಸೀರೆಯನ್ನು ಉಟ್ಟುಕೊಂಡು ಹೆರಿಗೆ ಮನೆಗೆ ಹೋಗಿ, ತಂದಿದ್ದ ನಾರುಬೇರುಗಳಲ್ಲಿ ಒಂದನ್ನು ಸುಂದರಮ್ಮನ ಎಡೆಗೆ ಕಟ್ಟಿಸಿ, ಚೆಂಬಿನಲ್ಲಿ ನೀರು ತರಿಸಿ ಮಂತ್ರಿಸಿ, ಕೊಟ್ಟು ಕಳುಹಿಸಿದಳು. ಅದನ್ನು ಕುಡಿಸುವುದಕ್ಕಿಂತ ಮುಂಚೆಯೇ ಶೀಘ್ರೋದಯವಾಯಿತು. ಆಮೇಲೆ ಒಂದು ನಿಮಿಷದೊಳಗಾಗಿಯೇ ಪುರುಷಶಿಶು ಜನಿಸಿತು. ಒಳಗಿದ್ದವರು ಆ ಸುದ್ದಿಯನ್ನು ಕೂಗಿ ಹೇಳಿದೊಡನೆಯೇ ವೆಂಕಟೇಶನು ಸಂತೋಷದಿಂದ ನೆರೆಮನೆಯ ಜೋಯಿಸನನ್ನು ನೋಡುವುದಕ್ಕೆ ಓಡಿಹೋಗಿ, ಈ ಸಂಗತಿಯನ್ನು ತಿಳಿಸಿದನು. ಆತನು ನಿದ್ದೆಗಣ್ಣುಗಳನ್ನು ಹೊಸಗಿ ಕೊಳ್ಳುತ್ತಾ ಎದ್ದು ಬಂದು, ನಕ್ಷತ್ರಗಳನ್ನು ನೋಡಿ ಕಾಲವನ್ನು ಕಂಡುಹಿಡಿದು, ನಾಳೆ ಜನ್ಮ ಪತ್ರಿಕೆಯನ್ನು ಬರೆದು ಕೊಡುವೆನು ಎಂದ ಹೇಳಿದನು. ಇತ್ತಲಾ ಸೂಲುಗಿತ್ತಿ—ಹೊಕ್ಕಳು ಕೊಯ್ದಾಗ ಒಂದುರೂಪಾಯಿಯನ್ನೂ ಮೊರದಲ್ಲಿ ಮಲಗಿಸಿದಾಗ ಎರಡು ಪಡಿ ಅಕ್ಕಿಯನ್ನೂ ವರಸೆ ನೀರಿಗೆ ಮೂರು ದುಡ್ಡುಗಳನ್ನೂ ತೆಗೆದುಕೊಂಡು ಪದ್ಧತಿಯ ಹೆಸರು ಹೇಳಿ ಏಳೆಂಟು ರೂಪಾಯಿಗಳ ತನಕ ಸೆಳೆದಳು. ಮೂರು ದಿವಸದ ತನಕ ಮಗು ಬಾಣಂತಿಯರು ಸುಖವಾಗಿಯೇ ಇರುವಂತೆ ಕಾಣುತ್ತಿದ್ದರು. ಹೆರಿಗೆಯ ಮನೆ ಸತ್ಯವತಿಯ ಶಯನ ಗೃಹಕ್ಕೆ ಸೇರಿದ ಮಹಡಿ. ಅದಕ್ಕೆ ಚಾವಡಿಗೆ ಹೋಗುವ ಬಾಗಿಲೊಂದು, ದೊಡ್ಡಿಗೆ ಹೋಗುವ ಬಾಗಿಲೊಂದು, ಆದರೆ ದೊಡ್ಡಿಗೆ ಹೋಗುವ

ಬಾಗಿಲು ಯಾವಾಗಲೂ ಮುಚ್ಚಿರುವುದು. ಆಗಾಗ ಯಶೋದಮ್ಮನು ಕಯ್ಮರೆಯದೆ ಕದಗಳನ್ನೆಲ್ಲಾ ಹೊಚ್ಚುತ್ತಿದ್ದಳು. ಅದರಿಂದ ಹೆರಿಗೆಮನೆ ಮಧ್ಯಾಹ್ನದಲ್ಲಿಯೂ ಕತ್ತಲೆಯಾಗಿದ್ದಿತು. ಇದಲ್ಲದೆ ಬೆಳ್ಳುಳ್ಳಿಯ ನಾತವೂ ಕುಂಪಟಿಯ ಹೊಗೆಯೂ ಸೇರಿ ಗಾಳಿಯನ್ನೆಲ್ಲಾ ಕೆಡಿಸಿದ್ದುವು. ಇದರಿಂದ ಒಳಗೆ ಹೋದ ಜನಗಳು ಕೊಂಚ ಹೊತ್ತಾದರೂ ನಿಲ್ಲುವುದಕ್ಕೆ ಆಗುತ್ತಿರಲಿಲ್ಲ. ಆ ಮನೆಯ ಬಾಗಿಲಲ್ಲಿ ಒಂದು ಹಳೆ ಯೆಕ್ಕದವೂ ಒಂದು ಲೋಳೆಸರದ ಗಿಡವೂ ಒಂದು ನಾಯಿತುಲಸಿ ಗಿಡವೂ ಬೇವಿನ ಸೊಪ್ಪೂ ನೇತಾಡುವಂತೆ ಕಟ್ಟಿದ್ದುವು. ಆ ಮನೆಯ ದುರ್ಗಂಧವು ದಾರಿ ಹಿಡಿದುಕೊಂಡು ಹೋಗುವ ಜನರಿಗೆ ಎಷ್ಟೋ ಅಸಹ್ಯವಾಗಿರುವಾಗ ಯಾವಾಗಲೂ ಮನೆಯಲ್ಲಿಯೇ ಇರುವವರಸೌಖ್ಯವು ಅಷ್ಟಿಷ್ಟೆಂದು ಹೇಳಲಾಗುವುದೇ ? ಬಾಣಂತಿಯು ದಾಹದಿಂದ ನಾಲಗೆ ಒಣಗಿಹೋಗುತ್ತದೆಂದು ಕೂಗಿಕೊಂಡರೂ ಹಸಿವಿನಿಂದ ಪ್ರಾಣಹೋಗುತ್ತದೆಂದು ಅತ್ತಾಗ್ಯೂ ನಾಲ್ಕನೆಯ ದಿನದವರೆಗೆ ಅದರ ಹೆಸರನ್ನೇ ಎತ್ತಕೂಡದೆಂದು ಯಶೋದಮ್ಮನು ಕೋಪಿಸಿಕೊಳ್ಳುತ್ತಿದ್ದಳು. ಮೂರನೆಯದಿನ ಸುಂದರಮ್ಮನಿಗೆ ಕಣ್ಣುಗುಡ್ಡೆ ಸಿಕ್ಕಿಕೊಂಡಿತು. ಹೊಟ್ಟೆಯಲ್ಲಿ ಒಂದುತರವಾದ ಸಂಕಟವಾಗತೊಡಗಿತು. ಮತ್ತೂ ಕೆಲವು ದುರ್ಲಕ್ಷಣಗಳು ಕಂಡುಬಂದುವು. ಆದರೂ ಅವಳು ಅದನ್ನು ಹೇಳಿದರೆ ಇನ್ನೂ ಹೆಚ್ಚಾಗಿ ಲಂಘನಮಾಡಿಸುವರೆಂಬ ಭಯದಿಂದ ಯಾರಿಗೂ ಹೇಳಲಿಲ್ಲ. ಸತ್ಯವತಿಗೆ ಮಾತ್ರ ರಹಸ್ಯವಾಗಿ ಹೇಳಿದಳು. ಸತ್ಯವತಿಯು ಅದರ ಕಾರಣವನ್ನು ತಿಳಿದು, ಯಶೋದಮ್ಮನು ಊಟಕ್ಕೆಹೋದಾಗ ಯಾರಿಗೂ ತಿಳಿಯದಂತೆ ತನ್ನ ಕಿರುಮನೆಯಿಂದ ಬಂದು, ದೊಡ್ಡಿಯ ಕದವನ್ನು ತೆರೆದು, ಕುಂಪಟಿಯನ್ನು ಹೊರಗಿಟ್ಟು, ಹೆರಿಗೆಮನೆಗೆ ಗಾಳಿ ಬರುವಂತೆ ಮಾಡಿ ಗುಟ್ಟಾಗಿ ಕುಡಿಯುವುದಕ್ಕೆ ತಣ್ಣೀರನ್ನು ತಂದುಕೊಟ್ಟಳು. ಅದರಿಂದ ಬಾಣಂತಿಯ ದೇಹವು ಸ್ವಲ್ಪಸ್ವಸ್ಥವಾಯಿತು. ಅನ್ನೋದಕಗಳನ್ನು ಕೊಡದಿದ್ದರೂ ಬೇಕಾದಷ್ಟುಹಿಂಗು, ಶುಂಠಿ, ಮೆಣಸು, ಲವಂಗ ಮುಂತಾದುವುಗಳನ್ನು ತಿನ್ನಿಸುತ್ತಿದ್ದರು. ನಾಲ್ಕನೆಯ ದಿನ ಪಥ್ಯಕ್ಕೆ ಹಾಕಿದ ಮೇಲೆ ನಾರಾಯಣಮೂರ್ತಿ ರಾಜಮಹೇಂದ್ರಕ್ಕೆ ಹೊರಟುಹೋದನು. ಅನ್ನ ಹಾಕಿದಮೇಲೆ ಬಾಣಂತಿ ತನ್ನ ದೇಹಸ್ಥಿತಿಯನ್ನು ಯಶೋದಮ್ಮನಿಗೆ ತಿಳಿಸಿದಳು. ಆಕೆ ಭಯಪಟ್ಟು ಆ ಗ್ರಾಮದಲ್ಲಿ ಚಿಕಿತ್ಸೆಮಾಡುವ ಪೂಜಾರಿ ಶರಭಯ್ಯನೆಂಬ ವೈದ್ಯನನ್ನು ಕರೆತಂದಳು. ಅವನು ಹೆರಿಗೆಮನೆಗೆ ಹೋಗಿ ಬಾಣಂತಿಯ ಕಯ್ಯನ್ನು ಮುಟ್ಟಿ ನೋಡುವುದಕ್ಕೆ ಸಮ್ಮತಿಸದೆ, ಸೂಲುಗಿತ್ತಿಯ ಮೂಲಕವಾಗಿಯೇ ಕಯ್ನೋಡಿಸಿ ತನಗೆ ಯಾವ

ಔಷಧಪ್ರಯೋಗವೂ ತಿಳಿಯದಿದ್ದರೂ ಸೂತಿಕಾಭರಣ, ವಾತಧ್ವಂಸಿ, ವಾತರಾಕ್ಷಸ ಮುಂತಾದ ಹೆಸರುಗಳನ್ನು ಹೇಳಿ ಏನೋ ಹೊಟ್ಟೆಗೆ ಕೊಟ್ಟನು. ಅವನು ಕೊಟ್ಟ ಔಷಧಕ್ಕಿಂತ ಸತ್ಯವತಿ ಮಾಡುತ್ತಾ ಬಂದ ಉಪಚಾರವೇ ದೇಹಕ್ಕೆ ಆರೋಗ್ಯವನ್ನುಂಟುಮಾಡಿತು. ಮಧ್ಯಾಹ್ನ ಯಶೋದಮ್ಮನು ಭೋಜನಕ್ಕೆ ಹೋಗಿ ಸಂಜೆಯಲ್ಲಿ ಹೆರಿಗೆಮನೆಗೆ ಬರುತ್ತಿದ್ದಳು. ಸತ್ಯವತಿ ಗುಟ್ಟಾಗಿ ದೊಡ್ಡಿಯ ಕದವನ್ನು ತೆರೆದಿದ್ದು, ಯಶೋದಮ್ಮನು ಬರುವಾಗ್ಗೆ ಏನೂ ತಿಳಿಯದವಳಂತೆ ಕದವನ್ನು ಹೊಚ್ಚಿಕೊಂಡು ಎಂದಿನಂತೆಯೇ ಇರುತ್ತಿದ್ದಳು. ಅರುವತ್ತು ಗಳಿಗೆಯೂ ಕದಹೊಚ್ಚಿದ್ದ ಮೂರುದಿನಗಳೊಳಗಾಗಿಯೇ ದುರ್ಗಂಧದಿಂದ ಆ ಹೆರಿಗೆಮನೆಯಲ್ಲಿ ತೊಪ್ಪೆಯ ಹುಳುಗಳಂತಿರುವ ರಕ್ಕೆಹುಳುಗಳು ಹುಟ್ಟಿದುವು. ಯಾರೋ ಕದ ತೆರೆದರು. ಆದರಿಂದ ಪಿಶಾಚಿಗಳೇ ಈ ರೂಪವಾಗಿ ಬಂದಿವೆ—ಎಂದು ನೋಡಿದವರು ಕೊಲ್ಲುತ್ತಾ ಬಂದರು. ಐದನೆಯದಿನ ಶಿಶು ಹಾಲು ಕುಡಿಯುವುದನ್ನು ಬಿಟ್ಟು ಬಿಟ್ಟಿತು. ಆದುದರಿಂದ ಯಶೋದಮ್ಮನು ಹೊಲೆಯರಮ್ಮನ ಗುಡಿಯ ಹತ್ತಿರ ಇದ್ದ ಹೊಲತಿಯ ಬಳಿಗೆ ಶಕುನವನ್ನು ಕೇಳಬೇಕೆಂದು ಹೋದಳು. ವೆಂಕಟಾಚಲಪತಿಯ ಕುಶಲದಿಂದ ಮಗುವಿಗೆ ಹೀಗಾಗಿದೆ ಎಂದು ಅವಳು ಹೇಳಿದಳು. ಆಮೇಲೆ ಮನೆಯವರು ವೆಂಕಟಾಚಲಪತಿಗೆ ಒಂದು ರೂಪಾಯಿ ಮೀಸಲು ಕಟ್ಟಿ ಮಗುವಿಗೆ ತಿರುಪತಿ ಬೆಟ್ಟದಮೇಲೆ ಚೌಲಮಾಡುತ್ತೇವೆಂದು ಕಯ್ಮುಗಿದು ಹರಸಿಕೊಂಡರು. ಆರನೆಯದಿನದ ರಾತ್ರಿ ಶಿಶು ತೀರಿಹೋಯಿತು. ಮಗುವಿಗೆ ಸಂದಾಯಿತು, ಅದರಿಂದ ಸತ್ತುಹೋಯಿತು—ಎಂದು ಎಲ್ಲರೂ ನಿಶ್ಚೈಸಿದರು. ಹತ್ತುದಿನಗಳಲ್ಲಿ ಕದತೆರೆದು ಇದ್ದುದರಿಂದ ಪಿಶಾಚಿ ಒಳಗೆ ನುಗ್ಗಿ ಮಗುವನ್ನು ಮುರಿದುಕೊಂಡು ಹೋಯಿತು—ಎಂದು ತಾಯಿಮಾತ್ರ ಮನಸ್ಸಿನಲ್ಲಿ ವ್ಯಸನಪಟ್ಟಳು. ಆದರೆ ಈ ಸಂಗತಿ ಯಶೋದಮ್ಮನಿಗೆ ತಿಳಿದರೆ ಸತ್ಯವತಿಯನ್ನು ಹೊಡೆದು ಬಯ್ದಾಳು ಎಂಬ ಭಯದಿಂದ ಸುಂದರಮ್ಮನು ಬಹು ಕಾಲದವರೆಗೆ ಯಾರೊಡನೆಯೂ ಹೇಳಲಿಲ್ಲ. ಬಾಣಂತಿ ಹನ್ನೊಂದನೆಯದಿನ ಶುದ್ಧಸ್ನಾನಮಾಡಿ ಸುಖವಾಗಿದ್ದಳು.

# ಐದನೆಯ ಪ್ರಕರಣ.

ಚೈತ್ರಶುದ್ಧ ಸಪ್ತಮಿಯದಿನ ಯಶೋದಮ್ಮನ ಸವತಿಯ ಅಣ್ಣನ ಮೊಮ್ಮಗನಿಗೆ ಚೌಲ. ಅವರ ಮನೆಯವರು ಅದರ ಹಿಂದಣದಿನದ ರಾತ್ರಿಯೇ ಬಂದು ಯಶೋದಮ್ಮನ ಮನೆಯಲ್ಲಿ ಎಲ್ಲರನ್ನೂ ಊಟಕ್ಕೆ ಕರೆದಿದ್ದರು. ಆ ಸವತಿಯ ಅಣ್ಣನು ತನ್ನ ಎರಡನೆಯ ಹೆಂಡತಿಗೆ ಒಂದು ಗಂಡುಮಗು ಹುಟ್ಟಿದಮೇಲೆ ಲೋಕಾಂತರಕ್ಕೆ ಸೇರಿದನು. ಆತನ ಮಗನ ಹೆಸರು ಶ್ರೀರಾಮ; ಆತನ ಕುಮಾರನಿಗೇ ಈದಿನ ಚೌಲವಾಗಬೇಕಾದುದು. ಬೆಳಕು ಹರಿದಮೇಲೆ ಸೊಸೆಯರನ್ನು ಸಂಗಡ ಕರೆದುಕೊಂಡು ಅಣ್ಣನಮನೆಗೆ ಹೋಗುವುದಕ್ಕಾಗಿ ಯಶೋದಮ್ಮನು ಹೊರಟು, ತಲೆಬಾಚಿಕೊಳ್ಳುತ್ತಿದ್ದ ಹಿರಿಯಸೊಸೆಯನ್ನು ನೋಡಿ-ಬೇಗ ಬಾ ಬೇಗ ಬಾ ; ಎಂದು ಆತುರಪಡಿಸಿ ಒಂದೇ ಉಸಿರಾಗಿ ನಾಲ್ಕುಸಾರಿ ಕೂಗಿ ಕರೆದಳು.

ಸುಂ—ನಾನೇನು ಒಳಗೆ ಆಡುತ್ತಿದ್ದೇನೆಯೇ ? ಏಕೆ ಹೀಗೆ ಅರಚಿಕೊಳ್ಳುವಿರಿ ? ಪಟ್ಟೆಯ ಸೀರೆಯನ್ನು ಪೆಟ್ಟಿಗೆಯೊಳಗಿಟ್ಟು ಬೀಗಹಾಕಿಕೊಂಡು ನೀವು ಬೀದಿಯಲ್ಲಿ ನಿಂತು ಕೂಗಿದರೆ ಈ ಹಳೆಯ ಸೀರೆಯನ್ನು ಉಟ್ಟುಕೊಂಡು ನಾನು ಹೇಗೆ ಬರಲಿ ?

ಯ—ಪುನಃ ಈಗ ನಾನು ಒಳಗೆ ಬರಲಾರೆ; ಪಟ್ಟೆಯಸೀರೆಯಿಲ್ಲದಿದ್ದರೆ ನಿನ್ನ ಅಂದವು ಕಡಮೆಯಾಗುವುದೋ ? ಆಹಳೆಯ ಸೀರೆಯನ್ನೇ ಉಟ್ಟುಕೊಂಡು ಬಾ.

ಸುಂ—ನಾನು ಒಳ್ಳೆಯ ಬಟ್ಟೆಯುಟ್ಟುಕೊಂಡರೆ ನಿಮಗೆ ಸಹನೆಯಿಲ್ಲ. ನಂಟರ ಮನೆಗೆ ಊಟಕ್ಕೆ ಹೋಗುವಾಗಲೂ ಒಳ್ಳೆಯ ಸೀರೆಯನ್ನುಟ್ಟುಕೊಂಡು ಹೋಗಬಾರದೇ ? ಈ ಮಣ್ಣಂಚಿನ ಸೀರೆಯಲ್ಲೇ ಹೋಗಬೇಕೇ ?

ಯ—ಎಲೇ ! ನಿನ್ನ ಬಾಯಲ್ಲಿ ಹುಣ್ಣುಹುಟ್ಟ ; ನೀನು ಬಟ್ಟೆಯುಟ್ಟುಕೊಂಡರೆ ನನಗೆ ಸಹನೆಯಿಲ್ಲವೆ ? ಈಗ ನಾವು ನಿನಗೆ ಸೀರೆಯನ್ನು ಕೊಂಡು ಕೊಡುವುದಿಲ್ಲವೇ ? ನೀನು ಉಟ್ಟುಕೊಂಡಿರುವ ಸೀರೆ ನಿಮ್ಮಪ್ಪನು ಕಳುಹಿಸಿದ್ದೇ ? "ನಾಯಿಯನ್ನು ತಂದು ಅಂದಳದಲ್ಲಿಟ್ಟರೆ ಕದಗಳನ್ನೆಲ್ಲಾ ಕತ್ತರಿಸಿ ಕಡಿಯಿತು" ಎಂದು ಗಾದೆಯುಂಟು. ಕುಲಹೀನೆಯರನ್ನು ಮನೆಗೆ ತಂದುಕೊಂಡರೆ ನಿಮ್ಮ ಬುದ್ಧಿಯನ್ನು ನೀವೆಂದಿಗೆ ಬಿಟ್ಟೀರಿ ?

ಸುಂ—ಬೇಕಾದರೆ ನನ್ನನ್ನು ಅನ್ಯಾಯವಾಗಿ ಬಯ್ದು ಗೋಳಾಡಿಸುವರ ಬಾಯಲ್ಲಿ ಹುಣ್ಣು ಹುಟ್ಟಲಿ. ನಾನು ಕುಲಹೀನೆಯೆಂಬುದೂ ನೀನು ಮಹಾ ಕುಲೀನೆಯೆಂಬುದೂ ನೀನಾಡುವ ಮಾತಿನಿಂದಲೇ ತಿಳಿಯುತ್ತದೆ.

ಸತ್ಯ—ಅಕ್ಕಾ! ಅತ್ತೆಯವರು ದೊಡ್ಡವರು. ಅವರು ಯಾವಾಗಲೂ ಕೆಟ್ಟವರಾಗರು. ನನ್ನ ಮಾತನ್ನು ಕೇಳಿ ನೀನು ಸುಮ್ಮನಿರು. ಅವರು ಏನಾದರೂ ಆಡಿದರೆ ನಾವು ಕೇಳಿಕೊಂಡಿರಬೇಕು. ನಿನಗೆಬೇಕಾದರೆ ನನ್ನ ಬನಾರಸ್ ಸೀರೆ ಯನ್ನೇ ಕೊಡುತ್ತೇನೆ ಬಾ.

ಸುಂ—ಬೇಕಾದರೆ ನೀನು ಕೇಳಿಕೊಂಡಿರು. ನಾನು ಎಂದಿಗೂ ಕೇಳು ವವಳಲ್ಲ.

ಸತ್ಯ—ಆ ಮಾತೆಲ್ಲಾ ನನ್ನ ಮೇಲಿರಲಿ. ಆವರು ನನ್ನನ್ನೇ ಆಡಿದರೆಂದು ತಿಳಿದುಕೊಂಡು ನೀನು ಎದ್ದು ಬಾ.

ಯ—ಎಲೇ! ನಿನಗೇನೋ ಹೋಗುವಕಾಲ ಬಂದಿದೆ. ಅದರಿಂದ ಹೀಗೆ ಬೊಕ್ಕಬೋಳರಾಗಿ ಬೀಳುತ್ತೀಯೆ. ಅಯ್ಯೋ! ನಿನ್ನ ನಾಲಗೆ ಹುಳಿತು ಹೋಗಲಿ. ನನ್ನನ್ನು ಕುಲಹೀನೆ ಎಂದು ಬಯ್ಯುತ್ತೀಯಾ? ನಿನ್ನ ಗಂಡ ಮನೆಗೆ ಬರಲಿ. ಈ ಹೊತ್ತು ನಿನಗೇನು ಮಾಡಿಸುತ್ತೇನೆಯೋ!

ಸುಂ—ಅವರು ಬಂದರೆ ನನ್ನನ್ನೇನುಮಾಡುತ್ತಾರೆ? ನಾನು ತಂದ ಕೆಟ್ಟ ಹೆಸರಿಗೆ ನನ್ನನ್ನು ಕೊಂದುಹಾಕುತ್ತಾರೋ?, ಆಗಲಿ, ಹಾಗೆ ಕೊಂದುಹಾಕಿದರೆ ನೋಡೋಣ. ಒಂದುವೇಳೆ ಕೊಂದರೆ ಈ ಕಷ್ಟವಾದರೂ ತೊಲಗುವುದು. ಸದ್ಯಃ ನಾನು ಈ ಮನೆಯ ಸೊಸೆತನವನ್ನು ನೀಗಿಕೊಂಡರೆ ಸಾಕು.

ಸತ್ಯ—ಅಕ್ಕಾ! ಕೈಮುಗಿದು ಬೇಡಿಕೊಳ್ಳುತ್ತೇನೆ. ನನ್ನ ಬಿನ್ನಹವನ್ನು ಕೇಳಿ ಒಳಗೆ ನಡೆ. (ಎಂದು ಸಂತೈಸಿ ಬಲಾತ್ಕಾರದಿಂದ ಎರಡು ಕೈಗಳಿಂದಲೂ ಸುಂದರಮ್ಮನನ್ನು ಹಿಡಿದುಕೊಂಡುಹೋಗಿ ಒಳಗೆ ಕುಳ್ಳಿರಿಸಿ ತನ್ನ ಓರಗಿತ್ತಿ ಏನೋ ಎನ್ನುವುದಕ್ಕೆ ಹೋಗುತ್ತಿರುವಾಗ್ಗೆ ಸೈರಿಸು, ಸೈರಿಸು, ಎಂದು ಕೇಳಿಕೊಳ್ಳುತ್ತಿ ದ್ದಳು.)

ಯ—ಈ ಚಿಕ್ಕವಳಿಗೂ ಅಷ್ಟಕ್ಕಷ್ಟಕ್ಕೆ ದೊಡ್ಡ ಕೇಡುಗಾಲ ಬರುತ್ತಿದೆ; ತನ್ನ ಓರಗಿತ್ತಿಯನ್ನು ನಾನೇನೋ ಕೆಟ್ಟಮಾತಾಡಿದಂತೆಯೂ ತಾನು ಒಳ್ಳೆಯ ಮಾತಾಡಿ ಸಮಾಧಾನಪಡಿಸುವಂತೆಯೂ ನಡುವೆ ಅಡ್ಡವಾಗಿಬಂದು, ಅವಳನ್ನು ಒಳಗೆ ಎಳೆದುಕೊಂಡು ಹೋದಳು. ಇವಳಿಗೆ ಭಯಭಕ್ತಿಗಳೊಂದೂ ಇಲ್ಲ.

ಮಿತಿಮೀರಿ ಹೋಗಿದ್ದಾಳೆ. ಹೊತ್ತು ಮುಳುಗುವವರೆಗೆ ತಾನು ಪ್ರತಿದಿನವೂ ಓದಿ ಕೆಡುವುದಲ್ಲದೆ ಚಿಕ್ಕವಳಾದ ಸೀತೆಗೂ ಓದುಹೇಳಿ ಹಾಳುಮಾಡುತ್ತಾಳೆ. ಅವಳೂ ಇವರಸಂಗಡ ಸೇರಿಕೊಂಡಳು. ಓದಬೇಡ, ಓದಬೇಡ, ಎಂದು ನಾನು ಎಷ್ಟುತರವಾಗಿ ಹೇಳಿದರೂ ನನ್ನ ಮಾತನ್ನು ಕೇಳುವುದಿಲ್ಲ. ನನ್ನ ಎರಡನೆಯ ಮಗನಿಗಾದರೂ ಒಳ್ಳೆಯ ಸಂಬಂಧ ದೊರದೀತೋ ಏನೋ ಎಂದು ಇದ್ದೆ. ಅವನ ಓದು ಬೂದಿಯಾಗ. ಅವನು ಈ ಹಾಳು ಇಂಗ್ಲಿಷ್ ವಿದ್ಯೆಯನ್ನು ಕಲಿತುದರಿಂದ ಇಂತಹ ದಿಕ್ಕುಕೆಟ್ಟ ಸಂಬಂಧ ದೊರೆಯಿತು. ಅವಳು ತನ್ನ ತಂದೆಯ ಭಾಗ್ಯವನ್ನು ನೋಡಿಕೊಂಡು, ತನಗೆ ಸರಿಯಾದವರು ಈ ಲೋಕದಲ್ಲಿಯೇ ಇಲ್ಲವೆಂದು ಮೇಲೂ ಕೆಳಗೂ ನಿಲ್ಲದೆ ಸಿಡಿದುಬೀಳುತ್ತಾಳೆ. ಅವಳು ಮಾಡುವ ಚೇಷ್ಟೆಗಳು ಯಾರಿಗೂ ಕಾಣುವುದಿಲ್ಲ. ಏನಾದರೂ ಎಂದರೆ ನಾಲ್ಕುಜನರಿಗೆ ನನ್ನ ಬಾಯಿ ಮಾತ್ರ ಕಾಣುತ್ತದೆ. ಅವರ ಬಾಯಿಯಲ್ಲಿ ಹುಳುಬೀಳ, ಅವಳು ಮೊದ್ದು ಎಂದೂ, ನಾನು ಸುಮ್ಮನೆ ಅವಳನ್ನು ಹುರಿದುಕೊಂಡು ತಿನ್ನುತ್ತೇನೆ ಎಂದೂ ಅಮ್ಮಂದಿರು ಅಕ್ಕಂದಿರು ಎಲ್ಲರೂ ನನ್ನನ್ನು ಅನ್ಯಾಯವಾಗಿ ಆಡುತ್ತಾರಲ್ಲ ? (ಎಂದು ಸೊಸೆಯರಿಬ್ಬರನ್ನೂ ಬೀದಿಯ ಬಾಗಿಲಲ್ಲಿ ಕುಳ್ಳಿರಿಸಿದ್ದು ತನ್ನ ಬಾಯಿ ನೋವೆತ್ತಿ ಬೇಸರವಾಗುವವರೆಗೂ ಬಯ್ದಳು; ಆಗ ಸಾವಿತ್ರಿಯು ನೀರಬಿಂದಿಗೆ ಹೊತ್ತುಕೊಂಡು ಬಂದಳು).

ಯ—ಅಮ್ಮಾ, ಸಾವಿತ್ರೀ ! ನೋಡಿದೆಯೋ ? ನಾನು ಕುಲಹೀನೆಯಂತೆ.

ಸಾ—ಅಮ್ಮಾ ! ಯಾರು ಹಾಗೆಂದವರು ?

ಯ—ಹೊರಗಣವರು ಯಾರೂ ಅಲ್ಲ. ನನ್ನ ಮನೆಹಾಳುಮಾಡುವುದಕ್ಕೆ ಬಂದಿರುವ ಈ ಗಯ್ಯಾಳಿಯರೇ ?

ಸಾವಿತ್ರಿಯು ಬಾಯಿಗೆ ಬಂದಹಾಗೆಲ್ಲಾ ಸುಂದರಮ್ಮನನ್ನೂ ಸತ್ಯವತಿಯನ್ನೂ ಅವರ ತಾಯಿತಂದೆಗಳನ್ನೂ ಬಾಯೊಣಗಿಹೋಗುವವರೆಗೂ ಬಯ್ದಳು.

ಸುಂದರಮ್ಮನು ಮಧ್ಯೇ ಮಧ್ಯೇ ಎಟಗಿಸಿಕೊಂಡು ಬಯ್ಯುವದಕ್ಕೆ ಹೋದಳು.

ಸತ್ಯವತಿಯು ಬೇಡಿಕೊಂಡು ಅದನ್ನು ತಪ್ಪಿಸಿದಳು.

ಇಂತಹ ಅತ್ತೆಯರೂ, ಹೆಣ್ಣುಮಕ್ಕಳೂ, ಈ ಲೋಕದೊಳಗೆ ಎಷ್ಟೋ ಸ್ಥಳಗಳಲ್ಲಿ ಇರಬಹುದು. ಆದ್ಯಂತವಾಗಿ ಈ ಪುಸ್ತಕವನ್ನು ಓದಿದವರು ಯಾರೂ ಜಗಳವಾಡದೆ, ಬಯ್ದರೆ ಬದಲಾಗಿ ಬಯ್ಯದೆ ಈ ಸತ್ಯವತಿಯ ಶಾಂತಿಗುಣವನ್ನೇ

ಅವಲಂಬಿಸಿ ಕಲಹವನ್ನು ನಿರ್ಮೂಲವಮಾಡುವುದಕ್ಕೆ ಪ್ರಯತ್ನಿಸಲೆಂದು ಬಯಸುತ್ತೇನೆ.

ಹೀಗೆ ಮಳೆಬಂದು ನಿಂತಂತೆ ನಿಶ್ಶಬ್ದವಾಗಿ ಅತ್ತೆಯೂ, ಸೊಸೆಯರೂ, ಮುಖ ತಿರುಗಿಸಿಕೊಂಡು ಒಂದು ಸ್ಥಳದಲ್ಲಿ ಕುಳಿತಿದ್ದರು. ಆಗ ‹ ಜೀರಿಗೆ ಮಾವಿನ ಹಣ್ಣು ಬೇಕು ಜೀರಿಗೆ ಮಾವಿನಹಣ್ಣು ’ ಎಂದು ಕೂಗುತ್ತಾ ಒಬ್ಬ ಹಸುರುವಾಣಿಯಂಗಡಿಯವನು ಬಂದನು. ರಾಮಾನುಜಮ್ಮನು ಅದನ್ನು ಕೇಳಿ ಹಣ್ಣು ಕೊಂಡುಕೊಡು—ಎಂದು ಅಜ್ಜಿಯ ಸೀರೆ ಹಿಡಿದುಕೊಂಟು ಎಳೆಯಲಾರಂಭಿಸಿದಳು.

ಯ—ಅಯ್ಯೋ! ಇವರ ಮನೆ ಹಾಳಾಗ, ಎಲ್ಲರೂ ನನ್ನನ್ನೇ ಕಿತ್ತುಕೊಂಡು ತಿನ್ನುತ್ತಾರೆ. ಏನಾದರೂ ಬೇಕಾದರೆ ನಿಮ್ಮ ಅಮ್ಮನನ್ನೂ ಅಪ್ಪನನ್ನೂ ಹಿಡಿದುಕೊಂಡು ಅಳಬಾರದೆ?—ಎಂದು ಗದರಿಸಿಕೊಂಡು ಮೊಮ್ಮಗಳನ್ನು ನೂಕಿಬಿಟ್ಟಳು. ಆಮೇಲೆ ರಾಮಾನುಜಮ್ಮನು—ಹಣ್ಣು ಕೊಂಡುಕೊಡು—ಎಂದು ಅಳುತ್ತಾ ತನ್ನ ತಾಯಿಯಹತ್ತಿರ ಹೋದಳು. ತಾಯಿ ಚೆನ್ನಾಗಿ ಬಯ್ದು ಬೆನ್ನಿನ ಮೇಲೆ ಎರಡುಸಾರಿ ಗುದ್ದಿದಳು. ಅನಂತರ ಆ ಮಗು ಮತ್ತಷ್ಟು ಅಳುತ್ತಾ ಆ ಅಳುವಿನಲ್ಲಿಯೂ—ಅಮ್ಮಾ ಹಣ್ಣು, ಅಮ್ಮಾ ಹಣ್ಣು—ಎಂದು ಕೂಗುತ್ತಲೇ ಇದ್ದಿತು.

ಸಾಧಾರಣವಾಗಿ ನಮ್ಮ ದೇಶದ ಸ್ತ್ರೀಯರು, ತಮಗೆ ಹೆರರಮೇಲೆ ಕೋಪ ಬಂದಾಗ ಮಾತನಾಡುವುದಕ್ಕೂ ತಿಳಿಯದ ಮಕ್ಕಳನ್ನು ನಿಷ್ಕಾರಣವಾಗಿ, ಹೊಡೆದು ಬಯ್ಯುವರು. ಇದನ್ನು ಓದಿದವರು ಅಂತಹ ಅವಿವೇಕ ಕಾರ್ಯವನ್ನು ಎಂದಿಗೂ ಮಾಡಲಾರರಲ್ಲವೆ? ಆಗ ಸತ್ಯವತಿಯು ತನ್ನ ಪೆಟ್ಟಿಗೆಯನ್ನು ತೆರೆದು ಎರಡು ದುಡ್ಡುಗಳನ್ನು ತೆಗೆದುಕೊಂಡು ಮಗುವನ್ನೆತ್ತಿಕೊಂಡು ಬಂದು, ಹಣ್ಣು ಕೊಂಡುಕೊಟ್ಟು ಸಮಾಧಾನ ಪಡಿಸಿದಳು. ಯಶೋದಮ್ಮನು ಅದನ್ನು ನೋಡಿ ಕಿಡಿಕಿಡಿಯಾಗಿ ಸೊಸೆಯಮೇಲೆ ಸಟಿಗೆ ಮುರಿದು ಭಾಗ್ಯವಂತರ ಮನೆಯ ಹೆಣ್ಣುಮಕ್ಕಳು; ಬೇಕಾದುದನ್ನೆಲ್ಲಾ ಕೊಂಡುಕೊಟ್ಟು ಮಕ್ಕಳಿಗೆ ಮಂಕುತನ ಕಲಿಸುತ್ತಾರೆ ಎಂದು ತನ್ನಲ್ಲಿ ತಾನು ಗೊಣಗುಟ್ಟುತ್ತಿದ್ದಳು. ಇಷ್ಟರಲ್ಲಿ ಶ್ರೀರಾಮನ ಮನೆಯ ದಾಸಿ ಬಂದು—ನಿಮ್ಮನ್ನೂ ನಿಮ್ಮ ಸೊಸೆಯರನ್ನೂ ಅಮ್ಮನವರು ಬರಹೇಳಿದರು—ಎಂದು ಕರೆದಳು. ಆಗ ನಾನು ಬಾರೆನೆಂದು ಸುಂದರಮ್ಮನೂ, ನೀನು ಬಾರದಿದ್ದರೆ ನಾನೂ ಹೋಗೆನೆಂದು ಯಶೋದಮ್ಮನೂ ಛಲವನ್ನು ಹಿಡಿದು ಕದಲದೆ ಕುಳಿದ್ದರು. ಸತ್ಯವತಿ ಅವರಿಬ್ಬರನ್ನೂ ಬೇಡಿಕೊಂಡು, ಅವರೆಷ್ಟು ಮಾರುದೂರ

ತನ್ನನ್ನು ನೂಕಿದರೂ, ಎಷ್ಟುಸಾರಿ ಗದರಿಸಿಕೊಂಡರೂ ಸಹಿಸಿಕೊಂಡು ಬಲಾತ್ಕಾರದಿಂದ ಎಬ್ಬಿಸಿ ಪ್ರಯಾಣಮಾಡಿಸಿದಳು. ತನಗೆ ತವರುಮನೆಯುವರು ಕೊಟ್ಟಿದ್ದ ಅಮೂಲ್ಯವಾದ ವಸ್ತ್ರವನ್ನೊಂದನ್ನೂ ಉಟ್ಟುಕೊಳ್ಳದೆ ಸಾಧಾರಣವಾದ ಬಿಳಿಯ ಸೀರೆಯನ್ನುಟ್ಟು ರಾಮಾನುಜಮ್ಮನನ್ನು ಕಂಕುಳಲ್ಲಿ ಎತ್ತಿಕೊಂಡು ತನ್ನ ಒಳ್ಳೆಯ ಸೀರೆಯನ್ನು ಸೀತೆಗೆ ಉಡಿಸಿ, ಒಡವೆಗಳನ್ನು ಇಟ್ಟು ಮುಂದೆ ನಡೆಸಿಕೊಂಡು ಅತ್ತೆಯೊಡನೆ ಹೊರಟಳು. ಯಶೋದಮ್ಮನು ಹೊರಡುವಾಗ "ಸಾವಿತ್ರಿ ! ಮನೆ ಜೋಕೆ ?" ಎಂದು ಹಿರಿಯಮಗಳಿಗೆ ಹೇಳಿ ಮುಂದೆ ನಡೆಯಲುಪಕ್ರಮಿಸಿದಳು. ಈಗ ಸಾವಿತ್ರಿಗೆ ಇಪ್ಪತ್ತುನಾಲ್ಕು ವರ್ಷ. ವೆಂಕಟೇಶನ ಮದುವೆಗೆ ಒಡವೆಗಳು ಬೇಕಾಗಿದ್ದುದರಿಂದ ಐದುಸಾವಿರ ರೂಪಾಯಿಗಳನ್ನು ತೆಗೆದುಕೊಂಡು ತಾಯಿ ತಂದೆಗಳು ಆಕೆಯನ್ನು ಎಪ್ಪತ್ತು ವರ್ಷ ವಯಸ್ಸುಳ್ಳ ಮೂರನೆಯ ಮದುವೆಯ ವರನಿಗೆ ಕೊಟ್ಟು ಮದುವೆಮಾಡಿದ್ದರು. ಮದುವೆಯಾದ ಎರಡನೆಯ ವರ್ಷವೇ ಗಂಡನು ಕಾಲವಾದನು. ಆತನು ತನ್ನ ಮದುವೆಗೋಸ್ಕರ ಮಾಡಿದ್ದ ಸಾಲಕ್ಕಾಗಿ ಸಾಲಗಾರರು ವ್ಯವಹರಿಸಿ ಮಾನ್ಯಗಳನ್ನೆಲ್ಲಾ ಮಾರಿಸಿದರು. ಈಗ್ಗೆ ಎರಡುವರ್ಷಗಳ ಹಿಂದೆ ಸಾವಿತ್ರಿ ಸುಬ್ರಹ್ಮಣ್ಯಯಾತ್ರೆಗೆ ಹೋಗಿ ತನ್ನ ತಲೆಗೂದಲನ್ನು ತೆಗೆಯಿಸಿದಳು. ಇದಲ್ಲದೆ ತನಗೆ ಜೀವನಾಂಶವನ್ನು ಕೊಡಬೇಕೆಂದು ಅತ್ತೆಯನ್ನು ಎಷ್ಟೋಸಾರಿ ಕೇಳಿದಳು. ಆದರೂ ಆಕೆ ಆ ಮಾತೇ ಕಿವಿಗೆ ಬೀಳದಂತೆ ಇದ್ದಳು. ತಮಗಾದರೆ ಬಡತನ, ಜೀವನ ಜರುಗುವುದು ಬಹು ಕಷ್ಟ. ಈಕಾಲದಲ್ಲಿ ಈ ಮಗಳೂ ವಿಧವೆಯಾಗಿ ತಮ್ಮ ಮನೆಯಲ್ಲಿದ್ದರೆ ಕಾಪಾಡುವುದು ಹೇಗೆ ಎಂದು ಲಕ್ಷ್ಮೀನಾರಾಣಯ್ಯನು ಯೋಚಿಸಿ ಅಮಲಾಪುರದ ಡಿಸ್ಟ್ರಿಕ್ಟ್ ಮುನಸಿಫ್ ಕೋರ್ಟಿನಲ್ಲಿ ಸಾವಿತ್ರಿಯ ಸವತಿಯ ಮಗನ ಮೇಲೆ ತನ್ನ ಮಗಳ ಕೈಯಲ್ಲಿ ವ್ಯವಹಾರ ಮಾಡಿಸಿದನು. ಅದರಮೇಲೆ ಅವನು ತನ್ನ ತಂದೆಯ ಆಸ್ತಿ ತನಗೆ ಸೇರಲಿಲ್ಲವೆಂದೂ ತನ್ನ ಕಿರಿಯ ತಾಯಿ ವ್ಯಭಿಚಾರಿಣಿಯೆಂದೂ ವಾದಿಸಿ, ಜೀವನಾಂಶವನ್ನು ಕೊಡಬೇಕಾದ ನಿಮಿತ್ತವಿಲ್ಲವೆಂದು ಹೇಳಿದನು. ಆದರೆ ಆಗ ಲಕ್ಷ್ಮೀನಾರಾಯಣಯ್ಯನು- ಪಿತ್ರಾರ್ಜಿತವಾದ ಹೆಂಚಿನ ಮನೆಯೊಂದಿರುವುದೆಂದು ಸ್ಥಾಪಿಸಿದ ಮೇಲೆ ವರ್ಷಕ್ಕೆ ಹನ್ನೆರಡು ರೂಪಾಯಿಗಳನ್ನು ಅವಳ ಜೀವನಕ್ಕಾಗಿ ಕೊಡಬೇಕೆಂದು ನ್ಯಾಯಾಧಿಪತಿ ತೀರ್ಪುಮಾಡಿದನು. ಜೀವನಾಂಶ ಕೊಡದೆ ತಪ್ಪಿಸಿಕೊಳ್ಳುವುದಕ್ಕಾಗಿ ಅವನು ಮಾಡಿದ ಕುತಂತ್ರವೇ ಹೊರತು ಸಾವಿತ್ರಿ ವ್ಯಭಿಚಾರಿಣಿಯಲ್ಲ. ಇವಳು ಸ್ವಲ್ಪ ಗಯ್ಯಾಳಿ. ಮೂಢಭಕ್ತಿ

ಬಹಳ. ಆದರಿಂದ ಎರಡನೆಯ ಹೊತ್ತು ಊಟವೇ ಇಲ್ಲ. ಕ್ರಮವಾಗಿ ವ್ರತ ಹಿಡಿದು ಉಪವಾಸಮಾಡುತ್ತಾ ಬಹು ನಿಯಮದಿಂದ ಮನೆಗೆಲಸಗಳನ್ನೆಲ್ಲಾ ಮಾಡುತ್ತಾಳೆ. ಶ್ರೀರಾಮನ ಮನೆಗೆ ಯಶೋದಮ್ಮನು ಸೊಸೆಯರೊಂದಿಗೆ ಹೋಗುವಾಗ್ಗೆ ಶ್ರೀರಾಮನ ಹೆಂಡತಿ ಬಾಗಿಲಲ್ಲೇ ನಿಂತಿದ್ದಳು. ಕಡುಬು ಮುಂತಾದ ಭಕ್ಷ್ಯಗಳನ್ನು ಮಾಡುವುದಕ್ಕಾಗಿ ಶ್ರೀರಾಮನ ತಾಯಿ ಮಡಿ ಯುಟ್ಟುಕೊಂಡು ಅಡಿಗೆಮಾಡುತ್ತಾ ಯಶೋದಮ್ಮನನ್ನು ರಹಸ್ಯವಾಗಿ ಒಳಗೆ ಕರೆದು ಏನು ಮಾಡೋಣ ಎಂದು ಆಲೋಚಿಸಿದಳು. "ಅತ್ತಿಗೆ! ನನ್ನ ಸೊಸೆ ಬಾಣಂತಿ, ಅವಳು ಹೆತ್ತು ಮೂರು ತಿಂಗಳಾಯಿತು. ಮಗು ಸತ್ತುಹೋದುದ ರಿಂದ ಅಳುತ್ತಿರುವಳು. ಅವಳು ಏನೂ ಮಾಡಲಾರಳಷ್ಟೆ? ಎರಡನೆಯ ಸೊಸೆ ಮಹಾರಾಣಿ, ಭಾಗ್ಯವಂತರ ಮಗಳು. ಆಕೆಗೆ ದೂರವಾಗಿಯೇ ಅಡ್ಡಬಿದ್ದು, ನಾವು ಸುಮ್ಮನಿರಬೇಕು. ಕೆಲಸಮಾಡೆಂದು ನಾವು ಅವಳ ಇದುರಿಗೆ ಬಾಯಿ ಬಿಡುವುದಕ್ಕಾದೀತೇ? ನಾನು ಮುದುಕಿ. ನನಗೆ ಕಣ್ಣೇ ಕಾಣದು." ಎಂದು ಯಶೋದಮ್ಮನು ಕೆಲವು ನೆವಗಳನ್ನು ಹೇಳಿ ತಪ್ಪಿಸಿಕೊಂಡಳು. ಎಷ್ಟುಮಟ್ಟಿಗೆ ಅಡಿಗೆಯಾಗಿದೆಯೋ ನೋಡೋಣವೆಂದು ಸತ್ಯವತಿ ಒಳಗೆ ಹೋಗಿ ಅಲ್ಲಿ ಯಾರೂ ಇಲ್ಲದಿರುವುದನ್ನು ಕಂಡು ತಾನೇ ಮಡಿಯುಟ್ಟುಕೊಂಡು ಬಂದಳು. ಯಾರೂ ಅವ ಳಿಗೆ ಹೇಳಲಿಲ್ಲ. ಆದರೂ ಅವಳು ಆಕೆಯ ಸಂಗಡ ಸೇರಿ ಭಕ್ಷ್ಯಗಳನ್ನು ಮಾಡಿ ಬಡಿಸುವುದಕ್ಕೂ ಹೋದಳು. ಅವಳ ವಿನಯವನ್ನು ಕಂಡು ಯಶೋದಮ್ಮನು ಹೊರತಾಗಿ ಉಳಿದವರೆಲ್ಲರೂ ಸಂತೋಷಪಟ್ಟರು. ಸ್ತ್ರೀಯರೆಲ್ಲರೂ ಈ ಸತ್ಯ ವತಿಯಂತೆಯೇ ತಾವು ಐಶ್ವರ್ಯವಂತರೆಂದು ಗರ್ವಪಡದೆ ಕೆಲಸಕಾರ್ಯಗಳನ್ನು ಮಾಡಿ ಇತರರಿಗೆ ತಮ್ಮ ಕೈಯಲ್ಲಾಗುವಮಟ್ಟಿಗೂ ಸಹಾಯಮಾಡಬೇಕು. ಮೈಬಗ್ಗಿ ಕೆಲಸಮಾಡುವುದರಿಂದ ಗೌರವಕ್ಕೇನು ಕೊರತೆಯುಂಟಾಗಲಾರದು. ಹಾಗೆ ಕೆಲಸಮಾಡುವುದರಿಂದ ಗರ್ವವಿಲ್ಲವೆಂದೂ ಯೋಗ್ಯಳೆಂದೂ ಎಲ್ಲರೂ ಕೊಂಡಾಡುವರು. ಆದರಿಂದ ಮತ್ತಷ್ಟು ಗೌರವವೂ ಪ್ರತಿಷ್ಠೆಯೂ ಬರುವು ದಲ್ಲದೆ ದೇಹಾರೋಗ್ಯವೂ ಸೌಖ್ಯವೂ ಉಂಟಾಗುವುವು. ಆಗ ಸತ್ಯವತಿಮಾಡಿದ ಅಲ್ಪಸಹಾಯದಿಂದ ಆ ಮನೆಯವರು ಮಾತ್ರವೇ ಸಂತೋಷಪಡಲಿಲ್ಲ. ಗ್ರಾಮದ ಸುತ್ತುಮುತ್ತಲಿನ ಜನಗಳೂ ಆಕೆಯ ಒಳ್ಳೆಯತನವನ್ನು ಕೇಳಿ ಪರಮಾನಂದಭರಿತ ರಾದರು. ಆಗ್ರಾಮದಲ್ಲಿ ಆಕೆಗೆ ಅಪರಿಮಿತವಾದ ಕೀರ್ತಿಬಂದಿತು. ಆ ದಿನ ಊಟವಾದಮೇಲೆ ಯಶೋದಮ್ಮನು ತನ್ನ ಸೊಸೆಯರೊಂದಿಗೆ ಹೊರಟು ಸಾಯಂ ಕಾಲ ಮನೆ ಸೇರಿದಳು.

# ಆರನೆಯ ಪ್ರಕರಣ.

ಆದಿನ ರಾತ್ರಿ ಮನೆಗೆ ಬಂದಮೇಲೆ ಸುಂದರಮ್ಮನುಮಲಗುವ ಮನೆಗೆ ಹೋಗಿ, ಗಂಡನೊಂದಿಗೆ ತನಗೂ ತನ್ನ ಅತ್ತೆಗೂ, ನಡೆದ ಕಲಹವನ್ನು ಹೇಳಿ ತಾನು ಕೆರೆಯಲ್ಲಾದರೂ ಭಾವಿಯಲ್ಲಾದರೂ ಬಿದ್ದು ಸಾಯುವೆನೆಂದು ಅಳತೊಡಗಿದಳು. ವೆಂಕಟೇಶನು ಹೆಂಡತಿಯ ಮಾತನ್ನು ನಂಬಿ ನಾವು ಬೇರೆ ಇರೋಣ ಎಂದು ಅವಳನ್ನು ಸಂತೈಸಿ ಮರುದಿನದಿಂದ ತಾಯಿಯೊಡನೆ ಸರಿಯಾಗಿ ಮಾತಾಡದೆ ಸಿಡುಸಿಡುಗುಟ್ಟತೊಡಗಿದನು. ಒಂದುದಿನ ಹೆಂಡತಿಯೂ ತಾಯಿಯೂ ಪುನಃ ಜಗಳವಾಡುತ್ತಿರುವಾಗ ಹೆಂಡತಿಯ ಪರವಾಗಿ ಕೆಲವು ಕೆಟ್ಟಮಾತುಗಳನ್ನು ಆಡಿದನು. ಅದರಿಂದ ಯಶೋದಮ್ಮನು ಕೋಪಿಸಿಕೊಂಡು ಯಾರೆಷ್ಟುವಿಧವಾಗಿ ಬೇಡಿಕೊಂಡರೂ ಅನ್ನವನ್ನು ತಿನ್ನದೆ ಎದ್ದುಹೋಗಿ ನೆರೆಮನೆಯಲ್ಲಿ ಕುಳಿತಳು. ಆಗ ಸಾವಿತ್ರಿಯೂ ಸತ್ಯವತಿಯೂ ಹೋಗಿ ಯಶೋದಮ್ಮನನ್ನು ಎಷ್ಟುಬಗೆಯಾಗಿ ಪ್ರಾರ್ಥಿಸಿದರೂ ಅವಳು ಬೇರೆ ಊಟಕ್ಕೆ ಬರಲಿಲ್ಲ. ಸ್ವಲ್ಪಹೊತ್ತಿನಮೇಲೆ ಅತಿ ಪ್ರಯಾಸದಿಂದ ಅವಳನ್ನು ಸಮಾಧಾನಪಡಿಸಿ ದೀಪಿಗೆ ಕಚ್ಚುವ ಹೊತ್ತಿನಲ್ಲಿ ಬಲಾತ್ಕಾರದಿಂದ ಮನೆಗೆ ಕರೆತಂದು ಎಲೆಯ ಮುಂದೆ ಕುಳ್ಳಿರಿಸಿದರು. ಆದರೆ ಆದಿನ ಆಕೆ ಸರಿಯಾಗಿ ಊಟಮಾಡದೆ ಬಾಯಲ್ಲಿ ಎರಡು ತುತ್ತನ್ನು ಇಟ್ಟುಕೊಂಡು ಎಲೆಬಿಟ್ಟು ಎದ್ದು ಹೋದಳು. ಆದಿನ ಮೊದಲುಗೊಂಡು ಹಿರಿಸೊಸೆಯಾದ ಸುಂದರಮ್ಮನಿಗೂ ಯಶೋದಮ್ಮನಿಗೂ ಮಾತೇ ಇಲ್ಲ. ಆದರೂ ಅವರು ಪದೇಪದೇ ಬೆಕ್ಕನ್ನೂ ಇಲಿಯನ್ನೂ ನೆವಮಾಡಿಕೊಂಡು ಒಬ್ಬರನೊಬ್ಬರು ಬಯ್ದಾಡುತ್ತಾ ಇದ್ದರು. ಒಂದಾನೊಂದುದಿನ ಅವರಿಬ್ಬರೂ ನಿಷ್ಕಾರಣವಾಗಿ ಯಾವುದೋ ಒಂದು ನೆವದಿಂದ ಹೊಡೆದಾಡಿ ಬಾಯಿಂದ ಬರಲಾಗದ ಕೆಟ್ಟಮಾತುಗಳನ್ನು ಆಡಿದರು. ಬರಬಾರದುದು ಬಂದು ನಿನ್ನ ಗಂಡನನ್ನೂ ಮಕ್ಕಳನ್ನೂ ಹೊತ್ತುಕೊಂಡು ಹೋಗ ಎಂದು ಯಶೋದಮ್ಮನು ಬಯ್ದಳು. ನಿನ್ನ ಗಂಡನೂ ನಿನ್ನ ಮಕ್ಕಳೂ ಸಾಯಬಾರದೇ ? ಎಂದು ಸುಂದರಮ್ಮನು ಶಪಿಸಿದಳು. ಗಂಡಸರು ಮನೆಗೆ ಬರುವಾಗ್ಗೆ ಕುಯ್ಯೋ ಮೊರ್ರೋ ಎಂದು ಅಳುತ್ತಾ ಇಬ್ಬರೂ ಆಮನೆಯನ್ನು ಮಹಾಶ್ಮಶಾನದಂತೆ ಮಾಡಿದ್ದರು. ಗಂಡನು ಮೊದಲು ತಾಯಿಯ ಪಕ್ಷವನ್ನು ವಹಿಸಿದ್ದಾಗ ಸುಂದರಮ್ಮನು ಅತ್ತೆ ಬಯ್ದರೆ ಪ್ರತಿಯಾಗಿ ಬಯ್ದು ಪ್ರತ್ಯಕ್ಷವಾಗಿ ತನ್ನ ಅತ್ತೆಯನ್ನು ಇದಿರಿಸುವು

ದಕ್ಕೆ ಸ್ವಲ್ಪ ಸಂಶಯುಪಡುತ್ತಿದ್ದಳು. ಗಂಡನು ತನ್ನ ಪಕ್ಷವನ್ನು ಅವಲಂಬಿಸಿರುವು ದರಿಂದ ಅವಳು ನಿರ್ಭಯವಾಗಿ ಅತ್ತೆಯೊಂದುಸಲ ಬಯ್ದರೆ ತಾನು ಹತ್ತುಸಲ ಬಯ್ಯುತ್ತಾ ಗಂಡನನ್ನು ಹೊಡೆದು ಬೀದಿಯಲ್ಲಿ ಅತ್ತಳು. ; ಎಂಬ ಆಂಧ್ರ ಭಾಷೆಯ ಗಾದೆಯಂತೆ ಗಂಡನು ಮನೆಗೆ ಬರುವ ಹೊತ್ತಿನಲ್ಲಿ ಇದ್ದುದನ್ನೂ ಇಲ್ಲ ದುದನ್ನೂ ಕಲ್ಪಿಸಿಕೊಂಡು ಬಿರುಮುಸುಕಿಟ್ಟುಕೊಂಡು ಮಲಗಿ ಅಳುತ್ತಿದ್ದಳು. ಆತನೂ ತನ್ನ ಹೆಂಡತಿಯನ್ನು ಹಿಂದೆ ಕರೆದುಕೊಂಡು ಬಂದು ತಾಯಿಯ ಸಂಗ ಡಲೇ ಜಗಳವಾಡುತ್ತಿದ್ದನು. ಆಗಾಗ್ಗೆ ಈ ಕಲಹದಲ್ಲಿ ಸಾವಿತ್ರಿಯೂ ತಾಯಿಯ ಪಕ್ಷವನ್ನೇ ವಹಿಸುತ್ತಿದ್ದಳು. ಕೆಲವು ರಾತ್ರಿಗಳಲ್ಲಿ ನೆರೆಹೊರೆಯವರಿಗೆ ನಿದ್ರೆಯೇ ಇಲ್ಲ. ಲಕ್ಷ್ಮೀನಾರಾಯಣಯ್ಯನು ಯಾರನ್ನು ಸಮಾಧಾನಪಡಿಸುವುದಕ್ಕೂ ಕೈಲಾಗದವನಾದುದರಿಂದ ಯಾರಗೊಡವೆಗೂ ಹೋಗುತ್ತಿರಲಿಲ್ಲ. ಸದ್ಯಃ ಈ ಜಗಳ ತನ್ನ ಕಿವಿಗೆ ಬೀಳದಿದ್ದರೆ ಸಾಕೆಂದು ಆತನು ಸಾಧ್ಯವಾದ ಮಟ್ಟಿಗೂ ಮನೆ ಯಲ್ಲಿ ನಿಲ್ಲದೆ ಅನ್ನ ಬಾಯಿಗೆ ಬಿದ್ದೊಡನೆಯೇ ಕಾಲಿಗೆ ಬುದ್ಧಿ ಹೇಳುತ್ತಿದ್ದನು. ಆಗ ರಾಮಸ್ವಾಮಿ ಅಮಲಾಪುರದ ಉಪಾಧ್ಯಾಯನ ಸಂಗಡ ಜಗಳವಾಡಿ ಕೊಂಡು ರಾಜಮಹೇಂದ್ರಕ್ಕೆ ಹೋಗಿ ಅಲ್ಲಿನ ಪಾಠಶಾಲೆಯಲ್ಲಿ ನಾಲ್ಕನೆಯ ತರ ಗತಿಗೆ ಸೇರಿದನು. ಆದರೆ ಅದು ಅವನಿಗೆ ತಕ್ಕುದಾಗಿರಲಿಲ್ಲ. ಅಲ್ಲಿ ಅಣ್ಣನ ಹತ್ತಿರವೇ ಇದ್ದನು. ಆಗ ರಾಜಮಹೇಂದ್ರದ ಚಿಕ್ಕ ಚಿಕ್ಕ ಸ್ಕೂಲುಗಳಲ್ಲಿ ಸರಿ ಯಾಗಿ ವಿಚಾರಣೆಮಾಡುವ ಅಧಿಕಾರಿಗಳು ಒಬ್ಬರೂ ಇರಲಿಲ್ಲ. ಅದರಿಂದ ಉಪಾಧ್ಯಾಯರು ತಾವು ಸೇರಿಸಿಕೊಳ್ಳುವ ತರಗತಿಗೆ ಹುಡುಗರು ತಕ್ಕವರೇ ತಕ್ಕ ವರಲ್ಲವೇ ಎಂದು ವಿಚಾರಿಸದೆ ಯಾರು ಯಾವ ತರಗತಿಗೆ ಸೇರಬೇಕೆಂದು ಬಂದರೂ ಅವರನ್ನು ಅದೇತರಗತಿಗೆ ಸೇರಿಸಿಕೊಳ್ಳುತ್ತಿದ್ದರು. ಹೀಗೆ ದಿನವಹಿ ಮನೆಯಲ್ಲಿ ಜಗಳ ಹತ್ತುತ್ತಾ ಇದ್ದುದರಿಂದ ಸುಬ್ರಹ್ಮಣ್ಯನು ಅಮಲಾಪುರಕ್ಕೆ ಹೋಗಿ ಕ್ರೈಸ್ತ ಪಾಠಶಾಲೆಗೆ ಸೇರಿ ಓದಿಕೊಳ್ಳತೊಡಗಿದನು. ಸತ್ಯವತಿ ತನ್ನ ಸಾಹಸ ವನ್ನೆಲ್ಲಾ ವೆಚ್ಚಮಾಡಿ ಯಶೋದಮ್ಮನ ಕಾಲು ಕಟ್ಟಿಕೊಂಡು ಬೇಡಿಕೊಳ್ಳು ತ್ತಿದ್ದಳು. ಸುಂದರಮ್ಮನನ್ನು ಮಾತಾಡಬೇಡವೆಂದು ಪ್ರಾರ್ಥಿಸುತ್ತಿದ್ದಳು. ಅವರು ಕೆಟ್ಟಮಾತಾಡಿದರೂ ತಲೆತಗ್ಗಿಸಿ ಸಹಿಸುತ್ತಿದ್ದಳು. ಹೇಗಾದರೂ ಕಲಹವನ್ನು ನಿರ್ಮೂಲವಮಾಡಬೇಕೆಂಬುದೇ ಆಕೆಯ ಉದ್ದೇಶ ಆದರೆ. ಮೂರ್ಖರಾದವರ ಬಳಿ ಯಲ್ಲಿ ಆಕೆಯ ಒಳ್ಳೆಯಮಾತುಗಳಿಂದ ಏನುತಾನೆ ಪ್ರಯೋಜನವಾದೀತು ? ಮೇಲಣ ಲೋಕದಿಂದ ಬ್ರಹ್ಮನೇ ಇಳಿದು ಬಂದು ಬೋಧಿಸಿದರೂ ಮೂರ್ಖರನ್ನು ಸಮಾಧಾನಪಡಿಸಲಾರನೆಂಬ ಮಾತು ವ್ಯರ್ಥವಾದೀತೇ ?

ಹಾಗೆ ಸತ್ಯವತಿ ಬೇಡಿಕೊಂಡಷ್ಟೂ ಸುಂದರಮ್ಮನಿಗೆ ಮತ್ಸರ ಹೆಚ್ಚಿ ಕಡೆಗೆ ಆಕೆಯೊಂದಿಗೆ ಮಾತನಾಡುವುದನ್ನೇ ಬಿಟ್ಟುಬಿಟ್ಟಳು. ಆಕೆ ಅತ್ತೆಯ ಕೋಪವನ್ನು ಶಾಂತಿಪಡಿಸುವುದಕ್ಕಾಗಿ ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದಳು. ಕಾದ ದೋಸೆಯ ಕಾವಲಿಯ ಮೇಲೆ ನೀರು ಹಾಕಿದಂತೆ ಮತ್ತಷ್ಟು ಉರಿದುಬಿದ್ದು ಯಶೋದಮ್ಮನು ದೊಡ್ಡಸೊಸೆಯ ಮೇಲಣ ಕೋಪವನ್ನೂ ಸತ್ಯವತಿಯ ಮೇಲೆಯೇ ತೋರಿಸುತ್ತಾ ಆದುದಕ್ಕೂ ಆಗದುದಕ್ಕೂ ನಿರ್ನಿಮಿತ್ತವಾಗಿ ಬಯ್ಯುತ್ತಾ ನಾನಾವಿಧವಾಗಿ ಬಾಧೆಪಡಿಸುತ್ತಿದ್ದಳು. ಸತ್ಯವತಿ ಯಾರೆಷ್ಟು ಹಿಂಸೆಗೊಳಿಸಿದರೂ ಸಹಿಸಿಕೊಂಡು ತಾನು ಯಾರಿಗೂ ಒಳ್ಳೆಯವಳಾಗದಿದ್ದರೂ ತನ್ನ ಪ್ರಯತ್ನವನ್ನು ಬಿಡದೆ ಅವರನ್ನು ಹೇಗಾದರೂ ಸಮಾಧಾನಪಡಿಸಿ ಸೇರಿಸಬೇಕೆಂದು ಮನಸ್ಸಿನಲ್ಲಿ ಭಗವಂತನನ್ನು ಧ್ಯಾನಮಾಡುತ್ತಿದ್ದಳು. ಹೀಗಿರುವಾಗ ಜೊತೆಯಲ್ಲಿರುವುದಕ್ಕೆ ಸರಿಬೀಳದೆ ವೆಂಕಟೇಶನೂ ಆತನ ಹೆಂಡತಿಯೂ ಬೇರೆ ಮನೆಗೆ ಹೋಗಿ ಪ್ರತ್ಯೇಕವಾಗಿ ಅಡಿಗೆಮಾಡಿಕೊಳ್ಳಲು ಉಪಕ್ರಮಿಸಿದರು. ಗೃಹಚ್ಛಿದ್ರಗಳು ದಿನಕ್ರಮವಾಗಿ ಹೆಚ್ಚಾಗುತ್ತಾ ಬಂದರೂ ಗಂಡನ ಮನಸ್ಸಿಗೆ ವ್ಯಸನವುಂಟಾದೀತೆಂದು ಯೋಚಿಸಿ ಪ್ರತಿವಾರದಲ್ಲಿಯೂ ತಾನು ನಾರಾಯಣಮೂರ್ತಿಯ ಹೆಸರಿಗೆ ಬರೆಯುವ ಕಾಗದಗಳಲ್ಲಿ ಸತ್ಯವತಿ ಈ ಸಂಗತಿಯನ್ನು ಎಳ್ಳಷ್ಟಾದರೂ ಬರೆಯಲಿಲ್ಲ. ಅಲ್ಲಿ ನಾರಾಯಣಮೂರ್ತಿಯ ತಿಳಿವಳಿಕೆಯನ್ನೂ ಬುದ್ಧಿಯನ್ನೂ ವಿದ್ಯೆಯಲ್ಲಿರುವ ಆಸಕ್ತಿಯನ್ನೂ ನೋಡಿ ನಾಲ್ಕನೆಯ ತರಗತಿಯಲ್ಲಿ ಓದಿಕೊಳ್ಳುತ್ತಿದ್ದ ಆತನ ತಮ್ಮನೂ ಅವನಂತೆಯೇ ಆದಾನೆಂದು ನಂಬಿ ರಾಘವಯ್ಯನಿಗೆ ದೂರಬಂಧುವಾದ ಗೋಪಾಲಯ್ಯನು ತನ್ನ ಮಗಳಾದ ಮಹಾಲಕ್ಷ್ಮಿಯನ್ನು ರಾಮಸ್ವಾಮಿಗೆ ಕೊಡಬೇಕೆಂದು ಉದ್ದೇಶಿಸಿ ನಾರಾಯಣಮೂರ್ತಿಯೊಡನೆ ಹೇಳಲು, ಆತನು ತಂದೆಯ ಹೆಸರಿಗೆ ಒಂದು ಪತ್ರಿಕೆ ಬರೆದನು. ಗೋಪಾಲಯ್ಯನಿಗೆ ಮಂಡಲ ನ್ಯಾಯಸಭೆಯಲ್ಲಿ ತಿಂಗಳಿಗೆ ಹತ್ತು ರೂಪಾಯಿ ಸಂಬಳವುಳ್ಳ ಒಂದು ಕೆಲಸವಿದೆ. ಈಗ ಮಹಾಲಕ್ಷ್ಮಿಗೆ ಹನ್ನೊಂದುವರ್ಷ ತುಂಬಿ ಹನ್ನೆರಡನೆಯವರ್ಷ ನಡೆಯುತ್ತಿದೆ. ಆ ಹುಡುಗಿ ರಾಜಕೀಯ ಬಾಲಿಕಾಪಾಠಶಾಲೆಯಲ್ಲಿ ಮೇಲಣ ತರಗತಿಯೊಳಗೆ ಓದಿಕೊಳ್ಳುತ್ತಾ ವಿದ್ಯಾಬುದ್ಧಿಗಳಲ್ಲಿ ತನ್ನ ಸಹಪಾಠಿಗಳನ್ನು ಮೀರಿ ಪ್ರತಿವರ್ಷವೂ ಒಳ್ಳೆಯ ಬಹುಮಾನಗಳನ್ನು ತೆಗೆದುಕೊಳ್ಳುತ್ತಾ ಇದ್ದಳು. ರಾಜಕೀಯ ಪಾಠಶಾಲೆಯೊಳಗೆ ಐದನೆಯ ತರಗತಿಯಲ್ಲಿ ಓದಿಕೊಳ್ಳುತ್ತಿದ್ದ ಕೃಷ್ಣಮೂರ್ತಿಯೆಂಬ ಹದಿನಾರುವರ್ಷ ವಯಸ್ಸುಳ್ಳ ಹುಡುಗನು ಪ್ರತಿದಿನವೂ ನಾರಾಯಣಮೂರ್ತಿಯ

ಹತ್ತಿರ ಪಾಠಗಳನ್ನು ಹೇಳಿಸಿಕೊಳ್ಳುತ್ತಿದ್ದನು. ಆತನು ತನ್ನ ತರಗತಿಯವರೊಳಗೆ ಬಹು ಬುದ್ಧಿವಂತನು. ಅವನಿಗೆ ತಾಯೊಬ್ಬಳೇ ಇರುವಳು. ಮಾನ್ಯವೇನೂ ಇಲ್ಲದಿದ್ದರೂ ತಾಯಿ ತನ್ನ ಒಡವೆಗಳನ್ನು ಮಾರಿ ಬಡ್ಡಿಗೆ ಹಾಕಿದ ಎರಡು ಮೂರು ಸಾವಿರ ರೂಪಾಯಿಗಳಿಂದ ಮಗನಿಗೆ ವಿದ್ಯೆಯನ್ನು ಕಲಿಸುತ್ತಿದ್ದಳು. ಆ ಹುಡುಗನಿಗೆ ಸೀತೆಯನ್ನು ಕೊಟ್ಟು ಮದುವೆಮಾಡಬೇಕೆಂದು ನಾರಾಯಣ ಮೂರ್ತಿಗೆ ಅಭಿಪ್ರಾಯವಿದ್ದು ತಂದೆಗೆ ಬರೆಯಲಾಗಿ ಆತನು ಅದಕ್ಕೆ ಒಡಂಬಟ್ಟು ಪ್ರತ್ಯುತ್ತರವನ್ನು ಬರೆದನು. ಈ ಸಂಗತಿಯನ್ನು ಆ ಹುಡುಗನ ತಾಯಿಗೆ ತಿಳಿಸಲಾಗಿ ಆಕೆಗೆ ಪರಮಾನಂದವುಂಟಾಯಿತು. ಹೀಗೆ ಎರಡು ನೆಂಟುತನಗಳೂ ಇಷ್ಟು ಅನುಕೂಲವಾಗಿ ಸಿಕ್ಕಿದುದರಿಂದ ವೈಶಾಖಮಾಸದಲ್ಲಿ ವಿವಾಹಗಳನ್ನು ಮಾಡಬೇಕೆಂದು ಲಗ್ನವನ್ನು ನಿಶ್ಚೈಸಿದರು. ವೆಚ್ಚದಲ್ಲಿ ವೆಚ್ಚವಾದರೆ ಸ್ವಲ್ಪ ಲಾಭವೆಂದು ಅಲ್ಲಿ ಲಕ್ಷ್ಮೀನಾರಾಯಣಯ್ಯನು ತನ್ನ ಹೆಂಡತಿಯ ತಮ್ಮನ ಮಗಳಾದ ಸೂರಮ್ಮನನ್ನು ಸುಬ್ರಹ್ಮಣ್ಯನಿಗೆ ತಂದುಕೊಳ್ಳುವುದಕ್ಕೆ ಒಪ್ಪಿಕೊಂಡು ಈ ಮೂರು ಮದುವೆಗಳನ್ನೂ ಒಂದೇಕಾಲದಲ್ಲಿ ಮಾಡುವುದಕ್ಕೆ ನಿಶ್ಚಯಿಸಿಕೊಂಡು ಹೊಲದಮೇಲೆ ನಾಲ್ಕು ಸಾವಿರ ರೂಪಾಯಿಗಳನ್ನು ಸಾಲತೆಗೆದು ಹೊಲವನ್ನು ಒಬ್ಬ ಒಕ್ಕಲಿಗನಿಗೆ ಮೂವತ್ತುವರ್ಷ ಅವಧಿಗೆ ಬರೆದು ಕೊಟ್ಟನು. ಸೂರಮ್ಮನ ತಂದೆ ಎಂಟು ವರ್ಷಗಳ ಹಿಂದೆಯೇ ಕಾಲವಾದನಾದುದರಿಂದ ಬಲತಾಯಿಯು ಭಾವನಸಂಗಡ ಜಗಳವಾಡಿಕೊಂಡು ತವರುಮನೆಗೆ ಓಡಿಹೋಗಿ ವ್ಯವಹರಿಸಿ ಜೀವನಾಂಶವನ್ನು ತೆಗೆದುಕೊಳ್ಳುತಿದ್ದಳು. ಈಗ ಸೂರಮ್ಮನಿಗೆ ಹತ್ತನೆಯವರ್ಷ. ಆ ಹುಡುಗಿ ಮೊದಲಿಂದಲೂ ಭಯಭಕ್ತಿಗಳಿಲ್ಲದೆ ಅಶಿಕ್ಷಿತೆಯಾಗಿ ಬೆಳೆದಳು. ಈ ಹುಡುಗಿಯನ್ನು ತನ್ನ ಮಗನಿಗೆ ತಂದುಕೊಳ್ಳುವ ವಿಷಯದಲ್ಲಿ ಲಕ್ಷ್ಮೀನಾರಾಯಣಯ್ಯನಿಗೆ ಸ್ವಲ್ಪವೂ ಇಷ್ಟವಿಲ್ಲ. ಆದರೂ ಆ ಹುಡುಗಿಯನ್ನು ಹೊರತು ಬೇರೆ ಹುಡುಗಿಯನ್ನು ತಂದುಕೊಳ್ಳಕೂಡದೆಂದು ಹೆಂಡತಿ ಹಟ ಹಿಡಿದಳು. ಆದುದರಿಂದ ಲಕ್ಷ್ಮೀನಾರಾಯಣಯ್ಯನು ಮದುವೆಯೊಂದಿಗೆ ಮದುವೆಯನ್ನು ಮಾಡಿದರೆ ವ್ಯಯ ಕಡಿಮೆಯಾಗುವುದೆಂದು ಯೋಚಿಸಿ ಕಡೆಗೆ ಹೆಂಡತಿಯ ಮಾತನ್ನೇ ಅಂಗೀಕರಿಸಿದನು. ನಾರಾಯಣಮೂರ್ತಿ ಬೇಸಗೆಕಾಲದ ವಿರಾಮ ದಿನಗಳಲ್ಲಿ ಮನೆಗೆ ಬರುವಾಗ್ಯೆ ಮದುವೆಯ ಕೆಲಸಗಳು ನಡೆಯುತ್ತಿದ್ದುವು. ವೈಶಾಖ ಶುದ್ಧ ದಶಮಿಯದಿನ ಸುಮುಹೂರ್ತವನ್ನು ನಿಶ್ಚಯಿಸಿ ಅಷ್ಟರೊಳಗಾಗಿಯೇ ನಂಟರಿಗೆ ಲಗ್ನಪತ್ರಿಕೆಗಳನ್ನು ಕಳುಹಿಸಿದರು. ಆದರೂ ಮನೆಯೊಳಗೆ

ಒಬ್ಬರಿಗೊಬ್ಬರಿಗೆ ಸರಿಬೀಳದುದರಿಂದ ಒಬ್ಬರೂ ಮನಸ್ಸಿಟ್ಟು ಕೆಲಸಮಾಡದೆ ತಟಸ್ಥರಾಗಿ ಸುಮ್ಮನಿರುತ್ತಾ ಬಂದರು. ಸತ್ಯವತಿಯೊಬ್ಬಳೂ ಸ್ವಲ್ಪಮಟ್ಟಿಗೆ ಸಾವಿತ್ರಿಯೂ, ಕೆಲಸಕಾರ್ಯಗಳಲ್ಲಿ ಬಹಳ ಆಸ್ಥೆಯಿಂದ ಓಡಾಡುತ್ತಿದ್ದರು. ನಾರಾಯಣಮೂರ್ತಿ ತಾಯಿಯ ಮುಖದಿಂದ ಮನೆಯ ಸ್ಥಿತಿಯನ್ನೆಲ್ಲಾ ವಿಚಾರಿಸಿ ಕೇಳಿ ವ್ಯಸನಪಟ್ಟು ಅಣ್ಣನ ಸಂಗಡ ಮಾತಾಡಿ ಎಲ್ಲರನ್ನೂ ಮೊದಲಿನಂತೆ ಸೇರಿಸಬೇಕೆಂದು ಪ್ರಯತ್ನಿಸಿದನು. ಆದರೆ ಕಾರ್ಯಸಿದ್ಧಿಯಾಗಲಿಲ್ಲ. ವೆಂಕಟೇಶನು ತಾನೊಬ್ಬನೇ ಸಂಪಾದಿಸುವವನೆಂದೂ ಕೆಲಸಕ್ಕೆ ಬಂದವನೆಂದೂ ಮದುವೆಯ ನಿಮಿತ್ತವಾಗಿ ಇರುವ ಮಾನ್ಯಗಳನ್ನು ಸಹ ಆಧಾರಮಾಡುವುದರಿಂದ ಇನ್ನುಮೇಲೆ ಒಂದುಕಾಸೂ ಬರುವುದಕ್ಕೆ ಮಾರ್ಗವಿಲ್ಲದೆ ಮುಂದೆ ಗೃಹಕೃತ್ಯವೆಲ್ಲಾ ತನ್ನ ಮೇಲೆ ಬೀಳುವುದೆಂದೂ ಯೋಚಿಸಿ ತಾನು ಹೇಗಾದರೂ ತಪ್ಪಿಸಿಕೊಂಡು ಬೇರೆ ಹೋಗಿ ಒಕ್ಕಲುತನ ಮಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿದ್ದನು. ಆದರೆ ಆ ಸಂಗತಿಯನ್ನು ಯಾರಸಂಗಡಲೂ ಹೇಳಲಿಲ್ಲ. ಹೆಂಗಸರ ಜಗಳ ಮುಂತಾದುವುಗಳನ್ನು ಹೇಳಿ, ಇನ್ನುಮೇಲೆ ಒಂದಿಗಿರುವುದು ಸರಿಬೀಳದೆಂದು ಬಾಯಿಬಿಟ್ಟು ಹೇಳಿದನು. ಅಷ್ಟರಲ್ಲಿ ಮದುವೆಯ ಕಾಲವು ಒದಗಿದುದರಿಂದ ಒಳಗಿದ್ದ ದ್ವೇಷವನ್ನು ನುಂಗಿ, ನಾಲ್ಕುಮಂದಿ ಏನಾಡಿಕೊಳ್ಳುವರೋ ಎಂದೆಲ್ಲರೂ ಮೇಲೆ ಒಂದಾಗಿ ಕಲೆತಿದ್ದರು. ವಿವಾಹಗಳು ಯಥಾವಿಧಿಯಾಗಿಯೇ ನಡೆದುವು. ಯಾವಭಾಗದಲ್ಲಿಯೂ ಇಲ್ಲಿ ಹೇಳತಕ್ಕಷ್ಟು ವಿಶೇಷವೇನೂ ಕಾಣಬರುವದಿಲ್ಲ. ಮದುವೆಗೆ ಬಂದಿದ್ದವರು ಆಕ್ಷೇಪಿಸದಿದ್ದರೂ ಬೀಗರಸಂಗಡ ಉಡುಗೆರೆಯ ನಿಮಿತ್ತವಾಗಿ ಬಂದಿದ್ದ ಒಬ್ಬ ದೂರದ ನಂಟನು ತನಗೆ ಮೊದಲು ಮಣೆಹಾಕಲಿಲ್ಲವೆಂಗೂ ವಿಶೇಷ ಗೌರವವನ್ನು ತೋರಿಸಲಿಲ್ಲವೆಂದೂ ಆಕ್ಷೇಪಿಸಿ ಒಂದುದಿನ ಊಟಕ್ಕೆ ಏಳದೆ ಮದುವೆಯುವರನ್ನೆಲ್ಲಾ ಮೂರು ಜಾವದವರೆಗೂ ಒಣಗಿಸಿದುದೊಂದೇ ವಿಶೇಷ. ಆ ದಿನ ನಾರಾಯಣಮೂರ್ತಿ ಸಾಹಸಮಾಡಿ ಮದುವೆಯುವರಿಗೆಲ್ಲಾ ಬೋಧಿಸಿ ಅವನನ್ನು ಬಿಟುಬಿಟ್ಟೇ ಊಟಮಾಡುವಂತೆ ಮಾಡದೆ ಇದ್ದರೆ ಮತ್ತೆ ಕೆಲವು ವಿಶೇಷಗಳು ಹುಟ್ಟುತ್ತಿದ್ದುವು. ಹಾಗೆ ಮಾಡಿದುದರಿಂದ ಮರುದಿನ ಆ ನೆಂಟನೇ ಮುಂದಾಗಿ ಭೋಜನಕ್ಕೆ ಬಂದು ಕುಳಿತುಕೊಂಡನು. ಅದರಿಂದ ಯಾವ ವಿಶೇಷಗಳಿಗೂ ಅವಕಾಶವಿಲ್ಲದಂತಾಯಿತು. ಪುರುಷರಲ್ಲಿ ನಾರಾಯಣಮೂರ್ತಿಯೂ, ಸ್ತ್ರೀಯರಲ್ಲಿ ಸತ್ಯವತಿಯೂ, ಮಾಡಿದ ಆದರಣೆಯಿಂದ ಯಾವಭಾಗದಲ್ಲಿಯೂ ಕೊರತೆಯಿಲ್ಲದೆ ಎಲ್ಲರೂ ಸಂತೋಷಪಟ್ಟರು. ಸುಂದರಮ್ಮನು ಭೋಜನಕಾಲಗಳಲ್ಲಿ ಮಾತ್ರ ಬಂದು ಇವು ಇಲ್ಲ

ವೆಂದೂ ಅವು ಇಲ್ಲವೆಂದೂ ದೋಷಗಳನ್ನೇ ಎಣಿಸುತ್ತಾ ಬಂದ ನೆರೆಮನೆ ಹೆಂಗಸರನ್ನು ಆದರಿಸುವರಿಲ್ಲವೆಂದು ಕಂಡಕಂಡವರಮೇಲೆ ಕಿಡಿಕಿಡಿಯಾಗಿ ಬೀಳುವುದೇ ಹೊರತು ಒಂದು ಕೆಲಸವನ್ನಾದರೂ ಮಾಡಿ ಪಾಪಕಟ್ಟಿಕೊಳ್ಳಲಿಲ್ಲ. ಸತ್ಯವತಿಯೊಬ್ಬಳು ಅಡಿಗೆಯ ಕೆಲಸದಲ್ಲಿ ಸಾವಿತ್ರಿಗೆ ಸಹಾಯ ಮಾಡಿದುದಲ್ಲದೆ ಬಂದ ಮುತ್ತೈದೆಯರಿಗೆಲ್ಲಾ ಅರಸಿನ, ಕುಂಕುಮ,ತಾಂಬೂಲ ಮುಂತಾದುವುಗಳನ್ನು ಕೊಟ್ಟು ಆದರಿಸುವ ವಿಷಯದಲ್ಲಿ ಯಶೋದಮ್ಮನಿಗೆ ಜೊತೆಯಾಗಿ ಯಾವಭಾಗದಲ್ಲಿಯೂ ಅರೆಯಿಲ್ಲದಂತೆ ಸಾವಿರ ಕಣ್ಣುಗಳುಳ್ಳವಳ ಹಾಗೆ ನೋಡಿಕೊಳ್ಳುತ್ತಿದ್ದಳು. ಆದರಿಂದಲೇ ಸಾಧಾರಣವಾಗಿ ಮದುವೆಯ ಮನೆಗಳಲ್ಲಿ ಕಳುವಾಗುವಂತೆ, ಮೂರು ಮದುವೆಗಳೊಂದೇಸಾರಿ ನಡೆಸರೂ ಒಂದು ವಸ್ತುವಾದರೂ ಹೋಗಲಿಲ್ಲ. ಐಶ್ವರ್ಯವಂತರ ಮಗಳಾದರೂ ಸತ್ಯವತಿಯು ಹಾಗೆ ಕೆಲಸಮಾಡುವದನ್ನು ಆ ಗ್ರಾಮದ ಹೆಣ್ಣುಮಕ್ಕಳನೇಕರು ನೋಡಿ ಕೆಲಸಬಿದ್ದಾಗ ದಾಸಿಯಂತೆ ಕೆಲಸ ಮಾಡಬೇಕೆಂದೂ, ಸುಖ ಬಂದಾಗ ರಾಣಿಯಂತೆ ಸುಖಪಡಬೇಕೆಂದೂ ತಿಳಿದುಕೊಂಡು ಹಾಗೆಯೇ ನಡೆಯಲಾರಂಭಿಸಿದರು. ಬಾಯಲ್ಲಿ ನೂರು ನೀತಿಗಳನ್ನು ಹೇಳುವುದಕ್ಕಿಂತ ಕೈಯಲ್ಲಿ ಒಂದು ಕೆಲಸಮಾಡಿ ತೋರಿಸಿದರೆ ಅದು ಎಷ್ಟೋ ಪ್ರಯೋಜನಕರವಾಗಿದ್ದು ಅನೇಕರನ್ನು ಸನ್ಮಾರ್ಗದಲ್ಲಿ ನಡೆಯಿಸುವುದು.

## ಏಳನೆಯ ಪ್ರಕರಣ.

ಹೀಗೆ ಮದುವೆಗಳೆಲ್ಲಾ ನಡೆದಮೇಲೆ ಔತಣಮಾಡಿ ನಂಟರಿಷ್ಟರನ್ನು ಕಳುಹಿಸುವುದಕ್ಕಿಂತ ಮುಂಚೆಯೇ ಒಂದು ದಿನ ಯಶೋದಮ್ಮನಿಗೂ ಹಿರಿಯ ಸೊಸೆಗೂ ದೊಡ್ಡ ಜಗಳ ಹತ್ತಿತು. ಒಂದು ದಿವಸ ಸುಂದರಮ್ಮನ ಮಗಳಾದ ರಾಮಾನುಜಮ್ಮನು ಕೈಯಲ್ಲಿ ಒಂದು ಸೀಬೆಯಹಣ್ಣನ್ನು ಹಿಡಿದುಕೊಂಡು ಆಡುತ್ತಿದ್ದಳು. ಆಗ ಚಿಕ್ಕ ಮದುವಣಗಿತ್ತಿಯಾದ ಸೂರಮ್ಮನು ಬಂದು, ಒಳ್ಳೆಯ ಮಾತಾಡಿ ಆ ಹುಡುಗಿಯ ಕೈಯಲ್ಲಿದ್ದ ಹಣ್ಣನ್ನು ಕಿತ್ತುಕೊಂಡು ಅರ್ಧವನ್ನು ತಾನು ತಿಂದು ಮಿಕ್ಕ ಅರ್ಧವನ್ನು ಅವಳಿಗೇ ಕೊಟ್ಟಳು. ಅದು ಹೇಗೋ ಸುಂದರಮ್ಮನ ಕಣ್ಣಿಗೆ ಬಿದ್ದಿತು. ಆಕೆ ತನ್ನ ಚಿಕ್ಕ ಓರಗಿತ್ತಿಯಮೇಲೆ ಕೋಪಮಾಡಿ ಬಯ್ದಳು. ಯಶೋದಮ್ಮನು ಅದನ್ನು ಕೇಳಿ ಒಳಗಿನಿಂದ ಒಂದು ಕಿರಿಯಸೊಸೆಯಲ್ಲಿ ಪ್ರೀತಿಯಿ

ದ್ದುದರಿಂದ ತಾನು ಎಟಕಿಸಿಕೊಂಡು ಮನೆಯೆಲ್ಲಾ ಹಾರಿಹೋಗುವಂತೆ ಜಗಳವಾಡಿದಳು. ಅವರಿಬ್ಬರೂ ಮಾತಿನಲ್ಲಿ ಒಬ್ಬರಿಗೊಬ್ಬರು ಸೋಲತಕ್ಕವರಲ್ಲ. ಆದರಿಂದ ಚಿತ್ರವಿಚಿತ್ರವಾಗಿ ವರ್ಣನೆಗಳನ್ನು ಕಲ್ಪಿಸಿ ಬಯ್ದುಹಾಗೆ ಬಯ್ಯದೆ ಭಾಷೆಯಲ್ಲಿರುವ ಆಡಬಾರದ ಮಾತುಗಳನ್ನೆಲ್ಲಾ ಉಪಯೋಗಿಸುವುದಕ್ಕೆ ಮೊದಲುಮಾಡಿದರು. ಲಕ್ಷ್ಮೀನಾರಾಯಣಯ್ಯನು ಅದನ್ನು ಕೇಳಿ ಸಹಿಸಲಾರದೆ ಹೆಂಡತಿಯನ್ನು ಗದರಿಸಿಕೊಂಡು ಜಗಳವಾಡಬೇಡ ಎಂದು ಬಯ್ದನು. ಯಶೋದಮ್ಮನಿಗೆ ಕೋಪಾವೇಶದಿಂದ ಮೈಮೇಲೆ ಜ್ಞಾನವೇ ಇರಲಿಲ್ಲ. ಆದುದರಿಂದ ಆಕೆ ಮೆತ್ತಗಿರುವ ನನ್ನನ್ನು ಬಯ್ಯುವುದಕ್ಕೆ ಬರುವ ನಿಮ್ಮ ಬಾಯಿ ನಿಮ್ಮ ಸೊಸೆಯನ್ನು ಬಯ್ಯುವುದಕ್ಕೆ ಸೇದಿಹೋಯಿತೆ; ಎಂದು ಗಂಡನಿಗೆ ಇದುರುಬಿದ್ದಳು. ಎಷ್ಟು ಶಾಂತಾತ್ಮರಾದರೂ ಅಂತಹ ಸಮಯದಲ್ಲಿ ಸಹಿಸಲಾದೀತೆ? ಆಗ ಲಕ್ಷ್ಮೀನಾರಾಯಣಯ್ಯನು ಕೋಪವನ್ನು ತಡೆಯಲಾರದೆ ಮೂಲೆಯಲ್ಲಿದ್ದ ಕಡ್ಡಿಯಿಂದ ಒಂದು ದೆಬ್ಬೆ ಹಾಕಿದನು. ಆಮೇಲೆ ಯಶೋದಮ್ಮನು ಗೊಳೋ ಎಂದು ಅಳುತ್ತಾ ಗಟ್ಟಿಯಾಗಿ ಕೂಗುತ್ತಾ ಶೋಕಿಸುವುದಕ್ಕೆ ಪ್ರಾರಂಭಿಸಿದಳು. ಅದುವರೆಗೆ ಕಿರುಮನೆಯಲ್ಲಿ ಮಂಚದಮೇಲೆ ಮಲಗಿದ್ದು ವಿನೋದ ನೋಡುತ್ತಿದ್ದ ವೆಂಕಟೇಶನು ಒಳಗಿನಿಂದ ಎದ್ದು ಬಂದು ತಾಯಿಯ ಮೇಲಣ ಕೋಪದಿಂದ ಹೆಂಡತಿಯನ್ನು ಹಿಡಿದುಕೊಂಡು ಹೊಡೆದನು.

ಆಗ ಸುಂದರಮ್ಮನು ಮನೆಯಲ್ಲಿ ಹೆಣ ಹೋದಹಾಗೆ ತಲೆಯನ್ನು ಬಿರಿಹೊಯ್ದುಕೊಂಡು ಕೆಳಗೆ ಬಿದ್ದು ಉರುಳಾಡುತ್ತಾ ಊರಿಗೆಲ್ಲಾ ಕೇಳಿಸುವಂತೆ ಗೋಳಾಡಿ ರೋದನಮಾಡಿದಳು. ಸಾಧಾರಣವಾಗಿ ಮೂರ್ಖರ ಕಾರ್ಯಸಾಧನೆಗೆ ಅಳುವೇ ಮುಖ್ಯಸಾಧನ. ಯಾವಾಗ ಬೇಕಾದರೂ ಅದು ಸಿದ್ಧವಾಗಿರುವುದಲ್ಲವೆ ? ಸ್ತ್ರೀಯರಿಗೆ ವಿದ್ಯಾಭ್ಯಾಸಮಾಡಿಸಿ ಐಕಮತ್ಯದಿಂದ ಲಾಭವುಂಟೆಂದು ಅವರು ತಿಳಿದುಕೊಳ್ಳುವಂತೆ ಮಾಡಿದರೆ ಅವರು ವಿವೇಕಿನಿಯರಾಗಿ ಜಗಳವಾಡದೆ ಒಟ್ಟಾಗಿಯೇ ವಾಸಮಾಡುತ್ತಾರೆ. ಒಂದು ಮನೆಯಲ್ಲಿ ನೂರುಮಂದಿ ಗಂಡಸರಾದರೂ ಇರಬಹುದು. ಇಬ್ಬರು ಹೆಂಗಸರುಮಾತ್ರ ಇರುವುದಕ್ಕೆ ಆಗುವುದಿಲ್ಲವೆಂಬ ಮಾತು ಆಗ ಸುಳ್ಳಾಗದೆ ಇದ್ದೀತೆ. ಬಳಿಕ ಮದುವೆಗಾಗಿ ಬಂದಿದ್ದ ನಂಟರೆಲ್ಲರೂ ತಮ್ಮತಮ್ಮ ಗ್ರಾಮಗಳಿಗೆ ಹೊರಟುಹೋದರು. ಯಶೋದಮ್ಮನು ನಾದಿನಿಯನ್ನೂ ಸೋದರಸೊಸೆಯಾದ ಸೂರಮ್ಮನನ್ನೂ ತನಗೆ ಪ್ರೀತಿಪಾತ್ರರಾಗಿದ್ದುದರಿಂದ ತನ್ನ ಹತ್ತಿರವೇ ಕೆಲವು ದಿನಗಳವರೆಗೆ ಇಟ್ಟುಕೊಂಡಿದ್ದಳು. ಸೂರ

ಮ್ಮನು ಚಿಕ್ಕಂದಿನಿಂದಲೂ ಅಶಿಕ್ಷಿತೆ. ಅದರಿಂದ ಅವಳು ಏನೇನೋ ಕೆಟ್ಟ ಚೇಷ್ಟೆಗಳನ್ನು ಮಾಡುತ್ತಾ ಎಲ್ಲರೊಂದಿಗೂ ಜಗಳವಾಡಿ ಅತ್ತೆಯಸಂಗಡ ಎಲ್ಲರಮೇಲೆಯೂ ಚಾಡಿ ಹೇಳುತ್ತಿದ್ದಳು.

ಯಶೋದಮ್ಮನು ಆ ಮಾತು ನಂಬಿಕೊಂಡು ಜಗಳಕ್ಕೆ ಹೋಗಿ ಎಲ್ಲರನ್ನೂ ಬಯ್ಯುತ್ತಿದ್ದಳು. ಸತ್ಯವತಿಯೊಬ್ಬಳು ಹೊರತು ಮಿಕ್ಕವರೆಲ್ಲರೂ ತಿರುಗಿಬಿದ್ದು ಜಗಳವಾಡುತ್ತಿದ್ದರು. ಅದರಿಂದ ನಿತ್ಯವೂ ಯಾವುದೋ ಒಂದುಬಗೆಯಲ್ಲಿ ಜಗಳ ಹತ್ತುತ್ತಲೇ ಇದ್ದಿತು. ಅದರಲ್ಲಿ ಮುಖ್ಯವಾಗಿ ಯಶೋದಮ್ಮನಿಗೂ ಸುಂದರಮ್ಮನಿಗೂ ನಡೆಯುವ ಕಲಹವನ್ನು ನೋಡುವವರಿಗೆ ಮನೆ ಬಿಟ್ಟುಹೋಗಿ ಯಾವಾಗ ಸುಖವಾಗಿರುವೆವೋ ಎಂಬ ಬುದ್ಧಿಯುಂಟಾಗದೆ ಹೋಗದು.

ಸತ್ಯವತಿಯು ಸೂರಮ್ಮನನ್ನು ಹತ್ತಿರಕ್ಕೆ ಕರೆದು ಆಗಾಗ್ಗೆ ಒಳ್ಳೆಯ ಮಾತಾಡಿ ಬುದ್ಧಿಹೇಳುತ್ತಿದ್ದಳು. ತುಪ್ಪವು ನಾಯಿಗೆ ರುಚಿಸುವುದುಂಟೇ? ಅದರಂತೆ ಆ ಹುಡುಗಿಗೆ ಆ ಹಿತವಾಕ್ಯವು ರುಚಿಸಲಿಲ್ಲ. ಮನಸ್ಸಿನಲ್ಲಿ ಕೋಪವಿಟ್ಟುಕೊಂಡು ಸೂರಮ್ಮನು ದಿನವಹಿ ಅತ್ತೆಯಸಂಗಡ ಸತ್ಯವತಿಯಮೇಲೆ ದೂರುಹೇಳುತ್ತಿದ್ದಳು.

ಯಶೋದಮ್ಮನು ಆ ಮಾತು ನಂಬಿಕೊಂಡು ನಿತ್ಯವೂ ನಿಷ್ಕಾರಣವಾಗಿ ಹೊಡೆದು ಬಯ್ದು ಕೊರಲು ಕೊಯ್ದು ಮುಲಗಿಸಿದರೂ ಸತ್ಯವತಿ ಬೇರೆ ಇದಿರು ಮಾತಾಡುತ್ತಿರಲಿಲ್ಲ. ಅದರಿಂದ ಹೊರಗಿನವರಿಗೆ ಏನೂ ಗೊತ್ತಾಗುತ್ತಿರಲಿಲ್ಲ. ಸಾಧಾರಣವಾಗಿ ನಮ್ಮ ದೇಶದ ಸ್ತ್ರೀಯರು ಈಗ ಮೂಢರು. ಅದರಿಂದ ಅವರು ತಮ್ಮಮೇಲೆ ತಿರುಗಿಬೀಳುವವರ ತಂಟೆಗೆ ಹೋಗುವುದಿಲ್ಲ. ತಮ್ಮ ಕೈಕೆಳಗಣವರಾಗಿ ಸಾಧುವಾಗಿ ಕಾಣುವವರ ಮೇಲೆಯೇ ಎಲ್ಲರಮೇಲಣ ಕೋಪವನ್ನೂ ತೀರಿಸುವರಲ್ಲವೆ ? ಈಗ ಸತ್ಯವತಿಗೆ ಅತ್ತೆಯಿಂದುಂಟಾಗುತ್ತಿದ್ದ ಬಾಧೆ ಅಷ್ಟಿಷ್ಟೆಂದು ಹೇಳುವುದಕ್ಕೆ ಯಾರಿಂದತಾನೇ ಆದೀತು. ಆದರೂ ಸತ್ಯವತಿ ಕನಸಿನಲ್ಲಿಯೂ ತನ್ನ ಅತ್ತೆ ಕೆಟ್ಟವಳೆಂದು ಹೇಳುತ್ತಿರಲಿಲ್ಲ. ಮನಸ್ಸಿನಲ್ಲಿ ಕೋಪವಿಟ್ಟುಕೊಳ್ಳುತ್ತಿರಲಿಲ್ಲ. ತಾಯಿಗೂ ಸುಂದರಮ್ಮನಿಗೂ ಹತ್ತುವ ಜಗಳವನ್ನು ನೋಡಿ ಕೆಲವು ಕಾಲದವರೆಗೆ ಅವರಿಬ್ಬರನ್ನೂ ದೂರವಾಗಿಡುವುದೊಳ್ಳೆಯದೆಂದು ಯೋಚಿಸಿ ಹೆಂಡತಿಯನ್ನೂ, ತಾಯಿಯನ್ನೂ ತನ್ನೊಡನೆ ರಾಜಮಹೇಂದ್ರಕ್ಕೆ ಕರೆದುಕೊಂಡು ಹೋಗಬೇಕೆಂದು ನಾರಾಯಣಮೂರ್ತಿ ಯೋಚಿಸಿಕೊಂಡಿದ್ದನು. ಆಗ ಲಕ್ಷ್ಮೀನಾರಾಯಣಯ್ಯನು ರಾಜಮಹೇಂದ್ರಕ್ಕೆ ನೀವೆಲ್ಲರೂ ಪ್ರಯಾಣಮಾಡಿ ಬನ್ನಿ ಎಂದು ಹೇಳಿ ಯಾರಿಗೂ ತಿಳಿಸದೆ ಸ್ವಲ್ಪ ಹಣ ತೆಗೆದುಕೊಂಡು ಕಾಶೀಯಾತ್ರೆ

ಗೆಂದು ಹೊರಟು ತಾನು ವಿಶಾಖಪಟ್ಟಣಕ್ಕೆ ಸೇರಿದಮೇಲೆ ಕಾಗದ ಬರೆದನು. ಆ ಕಾಗದ ಬಂದೊಡನೆಯೇ ಮನೆಯವರೆಲ್ಲರೂ ಸ್ವಲ್ಪ ವ್ಯಸನಪಟ್ಟು ಹೇಗಾದರೂ ಆತನನ್ನು ಕರೆತಂದು ಪುನಃ ಮನೆಗೆ ಸೇರಿಸಬೇಕೆಂದು ಯೋಚಿಸಿದರು. ಆದರೆ ದಾರಿಯಲ್ಲಿ ಆತನನ್ನು ಹಿಡಿದು ನಿಲ್ಲಿಸಿ ಹಿಂದಿರುಗಿಸುವುದು ಅಸಾಧ್ಯವೆಂದೆಣಿಸಿ ಆ ಪ್ರಯತ್ನವನ್ನು ಬಿಟ್ಟುಬಿಟ್ಟರು. ಆಮೇಲೆ ನಾರಾಯಣಮೂರ್ತಿಗೆ ತಾಯಿ ಮುಂತಾದವರೊಂದಿಗೆ ರಾಜಮಹೇಂದ್ರಕ್ಕೆ ಹೋಗಲು ಮನಸ್ಸಾಗಲಿಲ್ಲ. ಆದರಿಂದ ಮಂಗಳವಾರವೆಂದು ಒಂದುದಿನವೂ ಶುಕ್ರವಾರವೆಂದು ಮತ್ತೊಂದುದಿನವೂ ಅಷ್ಟಮಿ ನವಮಿಗಳೆಂದು ಬೇರೆ ದಿನಗಳೂ ತ್ಯಾಜ್ಯವೆಂದು ಮತ್ತೊಂದುದಿನವೂ ತಿಥಿ ವಾರ ನಕ್ಷತ್ರಗಳು ಒಳ್ಳೆಯವಲ್ಲವೆಂದು ಮತ್ತೆ ಕೆಲವುದಿನಗಳೂ ಕಾಲಹರಣಮಾಡಿದನು. ಆಗ ಯಶೋದಮ್ಮನು ಸಿಟ್ಟುಮಾಡಿ ಬಯ್ದಮೇಲೆ ನಾರಾಯಣಮೂರ್ತಿ ತ್ರಯೋದಶಿಯದಿನ ಪ್ರಯಾಣವನ್ನು ನಿಶ್ಚಯಿಸಿದನು. ಇಷ್ಟರೊಳಗೆ ಏಕಾದಶಿಯದಿನ ಆಕೆಗೆ ವಾಂತಿ ಭೇದಿಗಳಿಗೆ ಮೊದಲಾಯಿತು. ಜ್ವರವೂ ಬಂದಿತು. ಮೊದಲು ಎರಡು ಮೂರು ದಿನಗಳು ತಮಗೆ ತಿಳಿದ ಚಿಕಿತ್ಸೆಯನ್ನೇ ಅವರು ಮಾಡುತ್ತಿದ್ದರು. ಅದರಿಂದ ರೋಗವು ಸ್ವಲ್ಪವೂ ತಗ್ಗದೆ ಮತ್ತಷ್ಟು ಪ್ರಬಲಿಸಿತು. ಆಮೇಲೆ ಅವರು ಭಯಪಟ್ಟು ಔಷಧಕೊಡಿಸುವುದಕ್ಕಾಗಿ ಪೂಜಾರಿ ಶರಭಯ್ಯನನ್ನು ಕರೆತಂದರು. ಆತನು ಕೈನೋಡಿ ಈ ರೋಗವು ಮೋಹಕಾರಕದಿಂದ ಬಂದಿದೆಯೆಂದು ಹೇಳಿ ಮೂರುದಿನಗಳೊಳಗೆ ಇದನ್ನು ವಾಸಿಮಾಡುತ್ತೇನೆಂದು ಹತ್ತು ರೂಪಾಯಿಗಳನ್ನು ಈಸಿಕೊಂಡು ಆವಾವುದೋ ಔಷಧಗಳನ್ನು ಕೊಡುವುದಕ್ಕೆ ಪ್ರಾರಂಭಿಸಿದನು. ವ್ಯಾಧಿಯು ದಿನೇದಿನೇ ಪ್ರಬಲವಾಗುತ್ತಿದ್ದರೂ ವೈದ್ಯನು ದಿನವಹಿ ಬಂದು ಕೈನೋಡುತ್ತಾ ವಾಂತಿ ತಗ್ಗದಿದ್ದರೂ ಒಂದುದಿನಕ್ಕಿಂತ ಒಂದುದಿನ ಕೈಯಲ್ಲಿ ಗುಣ ಕಾಣುತ್ತದೆಂದೂ ಕ್ರಮಕ್ರಮವಾಗಿ ನಿಲ್ಲಬೇಕೇಹೊರತು ಒಂದೇಸಾರಿ ತಟ್ಟನೆ ನಿಲ್ಲುವುದು ಒಳ್ಳೆಯದಲ್ಲವೆಂದೂ ಒಂದುನಿಮಿಷದಲ್ಲಿ ವಮನ ನಿಲ್ಲಿಸತಕ್ಕ ಶಕ್ತಿ ತನಗಿದ್ದರೂ ಅದರಿಂದಲೇ ತಾನು ನಿಲ್ಲಿಸಲಿಲ್ಲವೆಂದೂ ನಿದಾನವರಿತು ಮೋಹಕಾರಕದ ವಿಷಯದಲ್ಲಿ ಕೆಲಸ ಮಾಡುತ್ತಿರುವೆನೆಂದೂ ಹೇಳಿ ಹಸುವಿನ ಮಜ್ಜಿಗೆಯಲ್ಲಿ ಅನ್ನ ಹಾಕಿಸುತ್ತಿದ್ದನು. ಅದರಿಂದ ಆಕೆ ಬಲಹೀನೆಯಾಗಿ ಮಂಚದಮೇಲೆಯೇ ಯಾವಾಗಲೂ ಮಲಗಿರುತ್ತಿದ್ದಳು. ಕೆಲವು ದಿನಗಳಲ್ಲಿ ಆಕೆಯ ಮೋಗಾಲುಗಳ ಮೇಲೆ ಊದು ಕಾಣಿಸಿ ಕ್ರಮವಾಗಿ ಮೇಲೆಯೂ ಹಬ್ಬುತ್ತಾ ಬಂದಿತು. ನಾರಾಯಣಮೂರ್ತಿ ಮುಂತಾದವರು ಅದನ್ನು ನೋಡಿ ಆಕೆ ಬದುಕುವದು ಕಷ್ಟವೆಂದು

ಆಲೋಚಿಸಿಕೊಂಡರು. ಆ ವೈದ್ಯನು ಇಂತಹ ಎಷ್ಟೋಮಂದಿ ರೋಗಿಗಳಿಗೆ ಕಡೆಗಾಣಿಸಿದವನು. ಆದುದರಿಂದ ಪರಮಾರ್ಥವನ್ನು ಅಷ್ಟರೊಳಗಾಗಿಯೇ ಕಂಡುಹಿಡಿದು ಪ್ರಾಣಹೋದಮೇಲೆ ತನಗೆ ಹಣ ಬಾರದೆಂದು ಯೋಚಿಸಿ ಯಾವುದಾದರೂ ಒಂದುನೆವದಿಂದ ಆಗಲೇ ಹಣ ಸುಲಿದುಕೊಳ್ಳಬೇಕೆಂದು ನಿಶ್ಚಯಮಾಡಿಕೊಂಡು ಈ ಹೊತ್ತು ಚಿಂತಾಮಣಿಮಾತ್ರೆ ಹಾಕದಿದ್ದರೆ ಪ್ರಯೋಜನವಿಲ್ಲವೆಂದೂ ತಾನು ಹೇಳಿದಂತೆ ಪಥ್ಯನಡೆಯಿಸದೆ ಹಾಳುಮಾಡಿದರೆಂದೂ ಆ ಔಷಧ ತನ್ನ ಹತ್ತಿರ ಎಲ್ಲದುದರಿಂದ ಬೇರೊಂದು ನಂಬಿಕೆಯಾದ ಸ್ಥಳದಲ್ಲಿ ಕೊಂಡುಕೊಂಡುಬರುವುದಕ್ಕೆ ಒಂದುನಿಮಿಷದೊಳಗಾಗಿ ಹತ್ತುರೂಪಾಯಿ ಬೇಕೆಂದೂ ಹೇಳಿದನು. ಆಗ ವೆಂಕಟೇಶನ ಪೆಟ್ಟಿಗೆಯಲ್ಲಿ ಮೂವತ್ತು ರೂಪಾಯಿಗಳಿದ್ದುವು. ಆದರೂ ಅವನು ಹತ್ತಿರ ಒಂದುಕಾಸೂ ಇಲ್ಲವೆಂದು ನಟಿಸಿದನು. ನಾರಾಯಣಮೂರ್ತಿಯ ಹತ್ತಿರ ನಿಜವಾಗಿಯೇ ಒಂದುಕಾಸೂ ಇರಲಿಲ್ಲ. ಆದರಿಂದ ಆತನು ಏನುಮಾಡುವುದಕ್ಕೂ ತಿಳಿಯದೆ ಯೋಚಿಸುತ್ತಿದ್ದನು. ಸತ್ಯವತಿ ಅದನ್ನು ತಿಳಿದು ಕಣ್ಸನ್ನೆಮಾಡಿ ಗಂಡನನ್ನು ಕಿರುಮನೆಗೆ ಕರೆದು ತನ್ನ ಕೊರಲಲ್ಲಿದ್ದ ಸರದಲ್ಲಿ ನಾಲ್ಕು ಚಿನ್ನದಕಾಸುಗಳನ್ನು ತೆಗೆದು ಕೈಗೆ ಕೊಟ್ಟು ಇವುಗಳನ್ನು ಮಾರಿ ವೈದ್ಯನಿಗೆ ಕೊಟ್ಟು ಒಳ್ಳೆಯ ಔಷಧ ಹಾಕಿಸಬೇಕೆಂದು ಆತುರದಿಂದ ಹೇಳಿದಳು. ತವರುಮನೆಯವರು ಇಟ್ಟ ಹೆಂಡತಿಯ ಒಡವೆಯನ್ನು ಮಾರುವುದಕ್ಕೆ ಮನಸ್ಸಿಲ್ಲದೆ ಆತನು ಸಂಶಯಪಡುತ್ತಿದ್ದನು.

ಸತ್ಯ—ನೀವು ಎಷ್ಟುಮಾತ್ರವೂ ಸಂದೇಹ ಪಡಬೇಡಿರಿ. ನನ್ನ ಪ್ರಾರ್ಥನೆಯನ್ನು ಲಾಲಿಸಿ. ಈ ಕಾಸುಗಳನ್ನು ಯಾರಿಗಾದರೂ ಮಾರಿಬಿಟ್ಟು ಬೇಗ ಔಷಧವನ್ನು ಕೊಡಿಸಿ. ಬದುಕಿದ್ದರೆ ಒಡವೆಗಳು ಎಂದಿಗಾದರೂ ಬರುವುವು. ಹೋದ ಪ್ರಾಣ ಪುನಃ ಹಿಂದಿರುಗಿ ಬರಲಾರದು.

ನಾರಾ—ನಿಷ್ಕಾರಣವಾಗಿ ನಿನ್ನ ನಗ ಹೋಗುವುದೇ ಹೊರತು ನಮ್ಮ ತಾಯಿಬೇರೆ ಉಳಿಯುವಂತೆ ತೋರುವುದಿಲ್ಲ. ನಾನು ನಿನಗೆ ಯಾವುದೊಂದು ಒಡವೆಯನ್ನೂ ಮಾಡಿಸಿಕೊಡಲಿಲ್ಲವಷ್ಟೆ ? ನಿನಗೆ ನಿನ್ನ ತವರುಮನೆಯವರು ಕೊಟ್ಟ ಒಡವೆಯನ್ನೂ ತೆಗೆದುಕೊಳ್ಳುವುದಕ್ಕೆ ನನಗೆ ಕೈಯೇ ಬಾರದು.

ಸತ್ಯ—ನಾನೇ ಒಡವೆಯನ್ನು ಕೊಡುವಾಗ ನೀವು ಇದನ್ನು ತೆಗೆದುಕೊಳ್ಳುವುದಕ್ಕೆ ಏಕೆ ಸಂಶಯಪಡುವಿರಿ. ? ನೀವು ಕ್ಷೇಮವಾಗಿದ್ದರೆ ನನಗೆ ಒಡವೆಗಳಿಲ್ಲದಿದ್ದರೂ ವ್ಯಸನವಿಲ್ಲ. ಪ್ರಾಣವಿರುವವರೆಗೆ ನಾವು ಮಾಡಬೇಕಾದ ಪ್ರಯತ್ನ

ವನ್ನು ಮಾಡಬೇಕು. ನೀವು ಸುಮ್ಮನೆ ಕಾಲಹರಣ ಮಾಡಬೇಡಿ. ಇನ್ನು ನನ್ನ ಮಾತಿಗೆ ಬದಲು ಹೇಳದೆ ಬೇಗ ತೆಗೆದುಕೊಂಡು ಹೊರಡಿ.

ಎಂದು ಬಲಾತ್ಕಾರಪಡಿಸಲು ನಾರಾಯಣಮೂರ್ತಿ ತನಗೆ ಬೇರೆ ಯಾವ ಮಾರ್ಗವೂ ಕಾಣದುದರಿಂದ ವಿಧಿಯಿಲ್ಲದೆ ವ್ಯಸನಪಟ್ಟು ಆ ನಾಲ್ಕು ಕಾಸುಗಳನ್ನೂ ತೆಗೆದುಕೊಂಡು ಹೋಗಿ ಮೂರು ಹತ್ತು ರೂಪಾಯಿಗಳನ್ನು ಆ ವೈದ್ಯನಿಗೆ ತಂದುಕೊಟ್ಟನು. ಸತ್ಯವತಿ ಅತ್ತೆಗೆ ರೋಗ ಬಂದ ದಿನದಿಂದ ರಾತ್ರಿ ಹಗಲೂ ಮಂಚವನ್ನು ಬಿಡದೆ ಸೀನೀರು ಕೊಡುತ್ತಾ ಕೈಕಾಲೊತ್ತುತ್ತಾ ತಾಪ ಶಾಂತಿಯಾಗುವಂತೆ ಬೀಸುತ್ತಾ ವೈದ್ಯ ಹೇಳಿದ ಹಾಗೆ ಹೊಟ್ಟೆ ಮುಂತಾದುದನ್ನು ನೋಡುತ್ತಾ ಇದ್ದು ಬೇಕಾದ ಪಟ್ಟುಗಳನ್ನು ಹಾಕುತ್ತಾ ಔಷಧಗಳನ್ನು ಅರೆಯುತ್ತಾ ಮಲಮೂತ್ರಗಳು ಮಂಚದಮೇಲೆಯೇ ಆದರೂ ಅಸಹ್ಯಪಡದೆ ಸಿಡುಗುಟ್ಟದೆ ಆ ಬಟ್ಟೆ ತೆಗೆದು ಬೇರೆ ಬಟ್ಟೆ ಹಾಕುತ್ತಾ ಬೇಕಾದಾಗ ಹಿಡಿದು ಕುಳ್ಳಿರಿಸಿ ಮಲಗಿಸುತ್ತಾ ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗಿಂತ ಅತಿಶಯವಾಗಿ ನೋಡಿಕೊಳ್ಳುತ್ತಿದ್ದಳು. ಸಾವಿತ್ರಿಯು ಪಥ್ಯ ಪಾನಗಳನ್ನು ನೋಡಿಕೊಳ್ಳುತ್ತಾ ಮನೆಯವರಿಗೆಲ್ಲಾ ಊಟವಾದಮೇಲೆ ಸ್ವಲ್ಪಹೊತ್ತು ತಾಯಿಯ ಹತ್ತಿರ ಕುಳಿತುಕೊಂಡು ವ್ಯಸನಪಡುತ್ತಿದ್ದಳು. ಸೀತೆಗೆ ಸತ್ಯವತಿಯಲ್ಲಿ ಬಹಳ ಪ್ರೀತಿಯಿದ್ದಿತು. ಆದರೆ ಅವಳಿಗೆ ಬಾಲ್ಯ. ತಾಯಿಯ ದೇಹಸ್ಥಿತಿ ಅವಳಿಗೆ ಚೆನ್ನಾಗಿ ತಿಳಿಯುತ್ತಿರಲಿಲ್ಲ. ಆದರೂ ಔಷಧ ಅರೆಯುವುದೇ ಮುಂತಾದ ಕೆಲಸಗಳಲ್ಲಿ ಅವಳು ಅತ್ತಿಗೆಗೆ ಸಹಾಯ ಮಾಡುತ್ತಿದ್ದಳು. ಸುಂದರಮ್ಮನು—ಯಾರಾದರೂ ಬಂದರೆ ಗೊಳೋ ಎಂದು ಅಳುತ್ತಾ ಬರುತ್ತಿದ್ದಳೇ ಹೊರತು ಅತ್ತೆಗೆ ಸ್ವಲ್ಪವಾದರೂ ಉಪಚರಿಸುತ್ತಿತ್ತಿರಲಿಲ್ಲ. ಯಶೋದಮ್ಮನಿಗೆ ಅಂತ್ಯಕಾಲ ಸಮೀಪಿಸುತ್ತಿದ್ದಿತು. ಆಕೆ ಬದುಕುವಳೆಂಬ ಆಸೆಯನ್ನು ಎಲ್ಲರೂ ಬಿಟ್ಟುಬಿಟ್ಟರು. ಎಲ್ಲರೂ ಗಾಬರಿಯಾಗಿ ವೈದ್ಯನನ್ನು ಕರೆತರಬೇಕೆಂದು ಓಡಿಹೋದರು. ಆಗ ಶರಭಯ್ಯನು ಮುಖವನ್ನು ಜೋಲು ಹಾಕಿದನು ಆಗ ಒಬ್ಬ ವೈದ್ಯನು ಬಂದು ನನಗೆ ಎರಡು ರೂಪಾಯಿ ಕೊಟ್ಟರೆ ಎರಡು ಗಳಿಗೆಯೊಳಗಾಗಿ ವಾಸಿಮಾಡುತ್ತೇನೆಂದು ಹೇಳಿದನು. ಕಣ್ಣುಗಳಲ್ಲಿ ನೀರು ಸುರಿಸುತ್ತಾ ಬೀಸಣಿಗೆಯನ್ನು ಕೈಯಲ್ಲಿ ಹಿಡಿದುಕೊಂಡು `ಬೀಸುತ್ತಿದ್ದ ಸತ್ಯವತಿ ತನ್ನ ಸೆರಗಿನಲ್ಲಿದ್ದ ರೂಪಾಯಿಗಳನ್ನು ಬಿಚ್ಚಿ ಕೈಯಲ್ಲಿಟ್ಟು ಔಷಧ ಹಾಕಿಸಿದಳು. ಆಮೇಲೆ ಅವರು ಯಾವ ಔಷಧದಿಂದಾದರೂ ವಾಸಿಯಾದೀತೋ ಏನೋ ಎಂಬ ಚಾಪಲ್ಯದಿಂದ ಔಷಧ ಕೊಡುವವರು ವೈದ್ಯ

ರಹುದೋ ಅಲ್ಲವೋ ಎಂದು ವಿಚಾರಿಸದೆ ಯಾರೇನು ಕೊಟ್ಟರೂ ಅದನ್ನೆಲ್ಲಾ ನುಂಗುವುದಕ್ಕೆ ಶಕ್ತಿಯಿರುವವರೆಗೂ ಬಾಯಲ್ಲಿ ಸುರಿಯುತ್ತಿದ್ದರು. ಆಕೆ ಹೆಚ್ಚು ಕಡಿಮೆ ಒಂದು ತಿಂಗಳ ತನಕ ಮಂಚದಮೇಲೆಯೇ ಮಲಗಿದ್ದಳು. ಪ್ರಾಣ ಹೋಗುವವರೆಗೂ ಜ್ಞಾನವಿದ್ದೇ ಇದ್ದಿತು. ಹಿಂದೆ ಆಕೆ ಸತ್ಯವತಿಯನ್ನು ಎಷ್ಟು ಹಿಂಸೆಪಡಿಸಿದ್ದರೂ ಅಪತ್ಕಾಲದಲ್ಲಿ ತನಗೆ ಮಾಡಿದ ಉಪಚಾರವನ್ನು ನೋಡಿ ಬಹು ಸಂತೋಷಿಸಿ ಸೊಸೆಯನ್ನು ಹತ್ತಿರಕ್ಕೆ ಕರೆದು ಅಪ್ಪಿಕೊಂಡು ಕಣ್ಣಿನಲ್ಲಿ ನೀರು ಸುರಿಸುತ್ತಾ—ನೀನು ನಮ್ಮ ಮನೆಗೆ ಮಹಾಲಕ್ಷ್ಮಿ. ನಾನು ನಿನ್ನ ವಿಷಯದಲ್ಲಿ ಮಾಡಿದ ತಪ್ಪುಗಳನ್ನು ಕ್ಷಮಿಸಿ ಮರೆತುಬಿಡಬೇಕು. ನಾನು ಇನ್ನೊಂದು ಜನ್ಮದಲ್ಲಿ ನಿನ್ನ ಹೊಟ್ಟೆಯೊಳಗೆ ಹುಟ್ಟಿ ನಿನ್ನ ಋಣವನ್ನು ತೀರಿಸಿ ಕೊಳ್ಳಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ-ಎಂದುಹೇಳಿ ಕೈಯನ್ನು ಮುಖಕ್ಕೆ ಅಡ್ಡಲಾಗಿಟ್ಟುಕೊಂಡಳು. ಸತ್ಯವತಿ ಏನೋ ಹೇಳಬೇಕೆಂದು ಪ್ರಯತ್ನಿಸಿ ದುಃಖ ದಿಂದ ಬಾಯಿಬಾರದೆ ಕಣ್ಣೀರು ಸುರಿಸುತ್ತಾ ಸುಮ್ಮನಾದಳು. ಇಷ್ಟರಲ್ಲಿ ಯಶೋದಮ್ಮನಿಗೆ ಅವಸಾನಕಾಲ ಒಂದುದರಿಂದ ಮಂಚದಮೇಲಿನಿಂದ ಇಳಿಸುವು ದಕ್ಕಾಗಿ ವೆಂಕಟೇಶನನ್ನು ಕರೆದರು. ಅಷ್ಟರಲ್ಲಿಯೇ ನಕ್ಷತ್ರ ಒಳ್ಳೆಯದಹುದೋ ಅಲ್ಲವೋ ತಾಯಿಯನ್ನು ಬೀದಿಯಲ್ಲಿ ಮಲಗಿಸಬೇಕೋ ಬೇಡವೋ ಎಂದು ಕೇಳಿ ತಿಳಿದುಕೊಂಡು ಬರುವುದಕ್ಕಾಗಿ ವೆಂಕಟೇಶನು ಜೋಯಿಸನ ಮನೆಗೆ ಹೋಗಿದ್ದನು. ಆಗ ನಾರಾಯಣಮೂರ್ತಿ ಮುಂತಾದವರು ಕೆಳಗೆ ಚಾಪೆಯಮೇಲೆ ಆಕೆಯನ್ನು ಮಲಗಿಸಿದರು. ಪ್ರಾಣಹೋದಮೇಲೆ ನೆರೆಹೊರೆಯವರು ನೋಡುವುದಕ್ಕೆ ಬಂದಾಗ ಸೂರಮ್ಮನು ಅತ್ತಷ್ಟು ಮತ್ತೆ ಯಾರೂ ಗಟ್ಟಿಯಾಗಿ ಅತ್ತವರೇ ಕಾಣ ಲಿಲ್ಲ. ಆಮೇಲೆ ವೆಂಕಟೇಶನು ಒಂದು ಯಾಕೆ ಬೀದಿಗೆ ಹಿಡಿಯಲಿಲ್ಲ—ಎಂದು ತಮ್ಮಂದಿರಮೇಲೆ ಕೋಪಮಾಡಿಕೊಂಡನು. ಮನೆಯ ಯಜಮಾನಿ ಸತ್ತಾಗ ಮನೆ ಹೇಗಿರುತ್ತದೆಂಬುದನ್ನು ನಾವು ತಿಳಿಸಬೇಕಾಗಿಯೇ ಇಲ್ಲ. ಅದು ಪಟ್ಟಣ ವಲ್ಲವಾದಕಾರಣ ಹೊರುವುದಕ್ಕೆ ಹಣ ಕೊಡದೆಯೇ ನಾಲ್ಕು ಮಂದಿ ನೆಂಟರು ಬಂದು ಸಹಾಯಮಾಡಿ ಶವವನ್ನು ಹೊತ್ತುಕೊಂಡುಹೋಗಿ ದಹನಾದಿ ಕಾರ್ಯ ಗಳನ್ನು ನಡೆಯಿಸಿದರು. ಆಮೇಲೆ ಹತ್ತು ದಿನಗಳೂ ನಡೆಯಬೇಕಾದ ಕರ್ಮಗಳು ನಡೆದುವು. ಉತ್ತರಕ್ರಿಯೆಗಳ ನಿಮಿತ್ತವಾಗಿ ವ್ಯಯವಾದ ಹಣದಲ್ಲಿ ವಿಸ್ತಾರ ವಾದ ಭಾಗವು ಸತ್ಯವತಿಯ ಕಾಸುಗಳನ್ನು ಮಾರಿದಹಣವೇ. ಆದರೂ ವೆಂಕ ಟೇಶನೂ ಸ್ವಲ್ಪ ವ್ಯಯ ಮಾಡಬೇಕಾಯಿತು. ಆದುದರಿಂದ ತಾನು ಸ್ಥಾಲಗಾರರ

ಮಗನಾಗುವೆನೆಂದೂ ಎಲ್ಲರನ್ನೂ ಕರೆಯಿಸಿ ಊಟ ಮಾಡಿಸಬೇಕೆಂದೂ ಗೊಣ ಗುತ್ತಾ ಹತ್ತುದಿನಗಳಲ್ಲಿಯೇ ಹೆಚ್ಚು ಜನಗಳು ಬೇರೆ ಇರಬೇಕೆಂಬ ಅಭಿಪ್ರಾಯ ವನ್ನು ತೋರಿಸಿದನು. ನಾರಾಯಣಮೂರ್ತಿ ಸಹೋದರರನ್ನೂ ಹೆಂಡತಿಯನ್ನು ಕರೆದುಕೊಂಡು ರಾಜಮಹೇಂದ್ರಕ್ಕೆ ಹೊರಡಬೇಕೆಂದು ನಿಶ್ಚಯಿಸಿದನು. ತಾಯಿಯ ಒಡವೆಗಳು ನ್ಯಾಯವಾಗಿ ಮಗಳಿಗೆ ಸಲ್ಲಬೇಕಾದರೂ ನಾರಾಯಣಮೂರ್ತಿ, ಅತ್ತಿಗೆ ಮತ್ತು ಅಣ್ಣ ಇವರ ಇಷ್ಟಾನುಸಾರ ಅದನ್ನು ಅವರಿಗೇ ಕೊಟ್ಟು, ಪಾತ್ರ ಸಾಮಗ್ರಿಯನ್ನೂ ಅಪೇಕ್ಷಿಸಿದಷ್ಟು ಕೊಟ್ಟುಬಿಟ್ಟು ಹೆಚ್ಚು ಜನರನ್ನೆಲ್ಲ ತನ್ನೊಡನೆ ಕರೆದುಕೊಂಡು ರಾಜಮಹೇಂದ್ರವನ್ನು ಹೊಕ್ಕನು.

# ಎಂಟನೆಯ ಪ್ರಕರಣ.

ನಾರಾಯಣಮೂರ್ತಿ ಕುಟುಂಬಸಮೇತನಾಗಿ ರಾಜಮಹೇಂದ್ರವನ್ನು ಹೊಕ್ಕಮೇಲೆ ಕೆಲವು ತಿಂಗಳು ಸುಖವಾಗಿದ್ದನು. ಮುಂಗೊಂಡಾಗ್ರಹಾರದಲ್ಲಿ ದ್ದಾಗಲೇ ಸತ್ಯವತಿ ಗರ್ಭಿಣಿಯಾಗಿದ್ದುದರಿಂದ ತವರುಮನೆಯವರು ಆಕೆಯನ್ನು ಬಾಣಂತಿತನಕ್ಕಾಗಿ ಕರೆದುಕೊಂಡು ಹೋದರು. ಆ ಪೆದ್ದಾಪುರದಲ್ಲಿ ರಾಘವ ಯ್ಯನ ಮನೆಯ ಮಹಡಿಯಮೇಲೆ ನಿಂತುಕೊಂಡು ನೋಡಿದರೆ ಪೀರರ ಪಂಜಾ ಹತ್ತಿರದಲ್ಲೇ ಕಾಣುತ್ತಿದ್ದಿತು. ಸತ್ಯವತಿ ತಾನು ಆ ಪಂಜಾವಿನ ಕಥೆಯನ್ನು ಕೇಳಿದಾಗ ಮೂವತ್ತುಮೂರುಕೋಟಿ ದೇವತೆಗಳೂ ಸ್ಥಳದೇವತೆಗಳೂ ಸಾಲದೆ ಹಿಂದುಗಳಿಗೆ ತುರುಕರ ದೇವತೆಗಳೂ ಬೇಕಾದವರಾಗಿರುವರೇ ಎಂದು ಆಶ್ಚರ್ಯ ಪಡುತ್ತಿದ್ದಳು.

ಸತ್ಯವತಿಯ ತಾಯಾದ ಶ್ಯಾಮಲಾಂಬೆ ಬಾಲ್ಯದಿಂದಲೂ ಪಟ್ಟಣವಾಸದಲ್ಲಿ ಪಳಗಿದವಳಾದುದರಿಂದಲೂ ಓದಿದವಳಾದುದರಿಂದಲೂ ತನ್ನ ಓರಗೆಯವರಿಗಿರುವ ಹುಚ್ಚು ಆಚಾರಗಳೂ ಮೂರ್ಖತೆಯೂ ಅವಳಿಗಿರಲಿಲ್ಲ. ಅವಳು ಉಪವಾಸಮಾಡಿ ದೇಹಕ್ಕೆ ವಿರೋಧಮಾಡಿಕೊಳ್ಳತಕ್ಕವಳಲ್ಲ. ಮನೆಯನ್ನು ಶುಚಿಯಾಗಿಟ್ಟುಕೊ ಳ್ಳುವುದರಲ್ಲಿಯೂ ಕಾಲಕ್ಕೆ ಸರಿಯಾಗಿ ಅಡಿಗೆಮಾಡಿ ಬಡಿಸುವುದರಲ್ಲಿಯೂ ಅವ ಳಿಗೆ ಆಸೆ ಬಹಳ. ಆದುದರಿಂದ ಹಗಲೂ ರಾತ್ರಿಯೂ ನಿತ್ಯವೂ ಒಂದೇವೇಳೆಗೆ ಭೋಜನವಾಗುತ್ತದೆ. ಆದಕಾರಣ ಸಾಧಾರಣವಾಗಿ ಧನವಂತರಿಗೆ ಬರುವ

ರೋಗಗಳು ಬಾರದೆ ಮನೆಯವರೆಲ್ಲರೂ ಆರೋಗ್ಯವಾಗಿರುತ್ತಾರೆ. ಆ ಊರಿನವರೆಲ್ಲರೂ ಇದನ್ನು ನೋಡಿ ಆಶ್ಚರ್ಯಪಡುವರು. ಆಕೆಯ ಯೋಗ್ಯತೆಗೆ ತಕ್ಕ ಹಾಗೆಯೇ ಸೊಸೆಯೂ ಬಹು ಗುಣವತಿಯಾಗಿಯೂ ವಿದ್ಯಾವತಿಯಾಗಿಯೂ ಇದ್ದಾಳೆ. ಆ ಹುಡುಗಿಯ ಹೆಸರು ಜಾನಕಮ್ಮ. ಆಕೆ ಅಷ್ಟು ರೂಪವತಿಯಲ್ಲ. ಆದರೂ ಗುಣವತಿ. ಗಂಡನಿಗೆ ಅವಳಲ್ಲಿ ಬಹು ಪ್ರೀತಿ. ಆ ದಂಪತಿಗಳ ಪರಸ್ಪರಾನುರಾಗವನ್ನು ನೋಡಿದವರೆಲ್ಲರೂ ಗಂಡ ಹೆಂಡರು ಒಂದುದೇಹವೆಂಬ ಮಾತು ಇವರ ಹತ್ತಿರ ಸಾರ್ಥಕವಾಯಿತೆಂದು ಮೆಚ್ಚಿಕೊಳ್ಳುತ್ತಾರೆ. ಲೋಕದಲ್ಲಿ ಅನೇಕ ಮೂಢರು ತಮ್ಮ ಕೈಹಿಡಿದ ಹೆಂಡತಿಯರಿಗೆ ಎಷ್ಟು ಸುಗುಣಗಳಿದ್ದರೂ ಮೇಲಣಚರ್ಮ ತಮ್ಮ ಕಣ್ಣಿಗೆ ಇಂಪಾಗಿಲ್ಲವೆಂದು ಅವರನ್ನು ಅನಾದರಿಸಿ ನರಕವೆಂಬ ಬಾವಿಗೆ ಮೊದಲನೆಯ ಹಂತವೆನಿಸಿದ—ಯೌವನ ಮದಾಂಧರ ಕಣ್ಣುಗಳಿಗೆ ಭ್ರಮೆಯನ್ನುಂಟುಮಾಡಿ ಸವಿಮಾತುಗಳೆಂಬ ಪಾಶದಿಂದ ಅವರನ್ನು ಸೆಳೆದು ನರಕದಲ್ಲಿ ತಳ್ಳುವುದಕ್ಕಾಗಿ ಅವತರಿಸಿ ವ್ಯಭಿಚಾರವೇ ಕುಲವೃತ್ತಿಯಾಗಿ ಉಳ್ಳ—ಅಪಮೃತ್ಯುದೇವತೆಯರ ಬಲೆಗೆ ಸಿಕ್ಕಿಕೊಂಡು ಮನೆಯನ್ನೂ ಶರೀರವನ್ನೂ ಸೂರೆಗೊಟ್ಟು ಸರ್ವಸ್ವವನ್ನೂ ನಾಶಮಾಡಿಕೊಂಡು ನಿಂದೆಗೆ ಗುರಿಯಾಗುವರು. ಅಂತಹ ಬುದ್ಧಿಹೀನರು ಈ ದಂಪತಿಗಳ ಚರಿತ್ರೆಯನ್ನು ಕೇಳಿದರೂ ನೋಡಿದರೂ ಬುದ್ಧಿ ಕಲಿತುಕೊಳ್ಳಬಹುದು. ಅತ್ತೆಗೆ ಜಾನಕಮ್ಮನೆಂದರೆ ಎರಡನೆಯ ಪ್ರಾಣ; ಪ್ರತಿ ವಿಷಯದಲ್ಲಿಯೂ ಅವರಿಬ್ಬರದೂ ಒಂದೇ ಮಾತು. ಲೋಕದಲ್ಲಿರುವ ಮೂಢಸ್ತ್ರೀಯರಂತೆ ಅತ್ತೆ ಸೊಸೆಯರು ಸೇರಿದಾಗ ಬೆಕ್ಕೂ ಇಲಿಯೂ ಸೇರಿದಹಾಗೆ ಕಾಣರು. ಲಕ್ಷ್ಮಿಯೂ ಸರಸ್ವತಿಯೂ ಕಲೆತಹಾಗೆ ಎಷ್ಟೋ ಆನಂದವುಂಟಾಗುತ್ತದೆ. ಆ ಮನೆಯ ಸೊಸೆತನವೆಂಬ ಮಾತು ಕರ್ಣಕಠೋರವಾಗಿರದೆ ಕಿವಿಗೆ ಅಮೃತವೆರೆದಂತಿರುವುದು. ದೇಹ ಬೇರೆಯಾಗಿದ್ದರೂ ಸತ್ಯವತಿಯೂ ಜಾನಕಮ್ಮನೂ ಒಂದೇ ಪ್ರಾಣವೆಂದು ಹೇಳುವಂತೆ ಅನ್ಯೋನ್ಯವಾಗಿರುವರು. ಅವರಿಬ್ಬರಿಗೂ ಇರುವ ಗುಣವನ್ನು ಕಣ್ಣಾರೆ ನೋಡಿ ಸುಖಾನುಭವ ಮಾಡಬೇಕಲ್ಲದೆ ತಿಳಿಸಿದರೆ ಅದು ಸುಳ್ಳಾಗಿ ತೋರುವುದು. ಹಿಟ್ಟಿನಲ್ಲಿ ಹೆಣ್ಣು ಬೊಂಬೆಮಾಡಿ ಮಣೆಯಮೇಲಿಟ್ಟರೆ ಅದೂ ಸುಮ್ಮನಿರದೆ ಹುಡುಗಿಯಂತೆ ಅಣ್ಣೆಕಲ್ಲಾಡಿತು, ಎಂಬ ಗಾದೆ ಯಾವಯುಗದುದೋ ? ಎಂದು ಇವರನ್ನು ನೋಡಿದವರಿಗೆಲ್ಲಾ ತೋರುವುದು. ಓರಗೆಯವರಲ್ಲಿ ಓರಗೆಯವರೂ ತಮ್ಮಂತೆ ಗುಣವಂತರಾದವರಲ್ಲಿ ಗುಣವಂತರೂ ಸ್ನೇಹಿಸುವರೆಂಬ ಮಾತು ಇವರನ್ನು ನೋಡಿದರೆ ಸಿದ್ಧಾಂತವಾಗುವುದು. ಸತ್ಯವತಿಯೂ ಜಾನ

ಕಮ್ಮನೂ ಇಬ್ಬರೂ ಸಮಾನಗುಣವತಿಯರೇ ಎಂದು ಹೇಳಬಹುದು. ಆದರೂ ವಿದ್ಯಾ ಬುದ್ಧಿಗಳಲ್ಲಿ ಜಾನಕಮ್ಮನು ಸತ್ಯವತಿಯನ್ನು ನೋಡಿ ಕಲಿತುಕೊಳ್ಳಬೇಕಾದ ಅಂಶಗಳು ಅನೇಕಗಳು. ಸತ್ಯವತಿ ತನ್ನ ತವರುಮನೆಯಲ್ಲಿದ್ದಾಗಲೇ ಜಾನಕಮ್ಮನು ನಡತೆಯ ವಿಷಯವನ್ನೂ ವಿದ್ಯಾವಿಷಯವನ್ನೂ ಮತ್ತು ಬೇರೆಬೇರೆ ಸಂಗತಿಗಳನ್ನೂ ಕಲತುಕೊಂಡು ಎಷ್ಟೋ ಅಭಿವೃದ್ಧಿಸ್ಥಿತಿಗೆ ಬಂದಳು. ಓದುವುದಕ್ಕೆ ಬಾರದ ಹೆಂಗಸರಂತೆ ಅವರು ಯಾವಾಗಲೂ ಪರರಮೇಲೆ ದೋಷಾರೋಪಣೆ ಮಾಡುತ್ತಾ ಕಾಲಹರಣಮಾಡರು.

ಕೆಲಸಕಾರ್ಯಗಳಾದಮೇಲೆ ಅವಕಾಶವಾದಾಗ ಪತಿವ್ರತೆಯರ ಚರಿತ್ರೆಗಳನ್ನು ಓದುತ್ತಲೋ ಲೋಕೋಪಕಾರಕವಾದ ವಿಷಯದಲ್ಲಿ ಪ್ರಸಂಗಿಸುತ್ತಲೋ ಹೊತ್ತುಕಳೆಯುತ್ತಿರುವರು. ಕುಟುಂಬದಲ್ಲಿ ಅತ್ತೆಯೂ ಸೊಸೆಯೂ ಗಂಡನೂ ಹೆಂಡತಿಯೂ ಹೀಗೆ ಪರಸ್ಪರ ಸ್ನೇಹಿತರಾಗಿದ್ದರೆ ಆ ಮನೆಯೇ ಭೂಲೋಕದಲ್ಲಿ ಸ್ವರ್ಗವೆಂದು ಹೇಳಬಹುದು. ಅವರ ಮನೆಯಲ್ಲಿ ರಾಘವೈಯ್ಯನ ಮುತ್ತಜ್ಜಿಯೊಬ್ಬಳೇ ಈ ಗುಂಪಿಗೆ ಸೇರದವಳು. ಆಕೆಗೆ ಈಗ ಪ್ರಾಯಶಃ ಎಪ್ಪತ್ತುವರುಷ ವಯಸ್ಸು. ರಾಘವೈಯ್ಯನ ಅಜ್ಜನು ಆಕೆಯನ್ನು ಮುಪ್ಪಿನಲ್ಲಿ ಮದುವೆಮಾಡಿಕೊಂಡು ಕೆಲವು ದಿನಗಳಲ್ಲಿಯೇ ಸತ್ತುಹೋದನು. ಅವಳಿಗೆ ಸಂತಾನವಿಲ್ಲ. ಆಕೆಯ ಹೆಸರು ಪಾರ್ವತಮ್ಮ. ಹೊತ್ತುಹೋಗದಿದ್ದರೆ ಜಾನಕಮ್ಮನೂ ಸತ್ಯವತಿಯೂ ಅಜ್ಜಮ್ಮಾ ಎಂದು ಕೂಗಿ ಆಕೆಯಿಂದ ಪೂರ್ವಕಾಲದ ಕಥೆಗಳನ್ನು ಹೇಳಿಸಿ ಕೇಳುತ್ತಾ ವಿನೋದವಾಗಿ ಹೊತ್ತು ಕಳೆಯುವುದುಂಟು. ಆಕೆಗೆ ಈಕಾಲದವರ ನಡತೆಗಳೂ ವಸ್ತುಗಳೂ ಎಲ್ಲಾ ಹೊಸದು. ಹೀಗಿರಲಾಗಿ ಒಂದುದಿನ ಚಂದ್ರಗ್ರಹಣ ಹಿಡಿಯಿತು. ಪಾರ್ವತಮ್ಮನು ಹಿಡಿದ ಸ್ನಾನಮಾಡಿಕೊಂಡು ಬಂದು ಒದ್ದೆಯಸೀರೆಯನ್ನು ಬಿಚ್ಚಿಹಾಕಿ ಒಣಗಿದ ಸೀರೆಯನ್ನು ಉಟ್ಟುಕೊಂಡು ಹಿಂಡಿದ ಸೀರೆಯನ್ನು ಗಳದಮೇಲೆ ಆರಿಹಾಕುವುದಕ್ಕಾಗಿ ದೊಡ್ಡಿಗೆ ಬಂದಳು. ಆಗ ಅಲ್ಲಿ ಸತ್ಯವತಿಯೂ ಜಾನಕಮ್ಮನೂ ಚಂದ್ರನನ್ನು ಬೆರಲಿನಿಂದ ತೋರಿಸುತ್ತಾ ಗ್ರಹಣದ ವಿಷಯವಾಗಿ ಏನೋ ಮಾತುಗಳಾಡುತ್ತಿದ್ದರು. ಪಾರ್ವತಮ್ಮನು ಅದನ್ನು ನೋಡಿ ಮೂಗಿನಮೇಲೆ ಬೆರಲಿಟ್ಟುಕೊಂಡು ಭಯಪಟ್ಟು ಮಾತನಾಡದೆ ನಿಂತಳು.

ಸತ್ಯವತಿ—ಅಜ್ಜಮ್ಮಾ, ಇದೇನು ಹೀಗೆ ಬೆರಗಾಗಿ ನಿಂತಿದ್ದೀಯೆ ?

ಪಾರ್ವ—ಏನಮ್ಮಾ? ಮನೆಮುಳುಗಿಸಿದೆಯಲ್ಲ ! ನಮ್ಮ ಕಾಲದಲ್ಲಿ ಯಾವಾಗಲೂ ಗ್ರಹಣಬಂದಿತೆಂದರೆ ಬಸುರಿಯರು ಕಿರುಮನೆಯಲ್ಲಿ ಮಲಗಿದ್ದು ಜಲಮಲಾದಿಗಳಿಂದ ಹೊಟ್ಟೆಯುಬ್ಬರಿಸಿಕೊಂಡರೂ ಶುದ್ಧ ಮೋಕ್ಷವಾಗುವವರೆಗೂ ಹೊಸಿಲುದಾಟಿ ಈಚೆಗೆ ಬಂದು ಅರಿಯರು. ಇದೇನು ಕೇಡುಗಾಲವೇ ! ಇದೇನು ಕೇಡುಗಾಲವೇ !

ಸತ್ಯ—(ನಗುತ್ತಾ) ಅಜ್ಜಮ್ಮಾ, ಬಂದರೇನು ?

ಪಾರ್ವ—ನಾನು ಮುದುಕಿ. ನನ್ನ ಮಾತುಗಳು ನಿನಗೆ ಇರುವೆ ಕಡಿದಂತೆಯೂ ಇರುವುದಿಲ್ಲ. ನಾನು ಆಡಿದಮಾತಿಗೆ ಇದಿರುಮಾತಾಡುತ್ತಾ ಮನಸು ಬಂದಹಾಗೆ ನಗುತ್ತಾ ಇದ್ದೀಯೆ! ನಾಳೆ ಹುಟ್ಟುವ ಮಗುವಿಗೆ ಮೂಗೋ ಕಾಲೋ ಡೊಂಕಾದಾಗ ದೊಡ್ಡವಳ ಮಾತು ಕೇಳದೆ ಹೋದೆನಲ್ಲಾ ಎಂದು ಪಶ್ಚಾತ್ತಾಪ ಪಡುವೆ.

ಸತ್ಯ—ಅಜ್ಜಮ್ಮಾ ಯಾರಿಗಾದರೂ ಗ್ರಹಣ ಹಿಡಿದಾಗ ಹೊರಗೆ ಬಂದುದರಿಂದ ಕೈಯಾಗಲಿ ಕಾಲಾಗಲಿ ಡೊಂಕಾದುದನ್ನು ನೀನು ನೋಡಿದ್ದೀಯಾ ?

ಪಾರ್ವ—ನಮ್ಮ ಅಣ್ಣನ ಮಗನ ಸೋದರಳಿಯನಿಗೆ ಮೂಗು ಡೊಂಕಾಗಿದೆ. ಇದಕ್ಕೆ ಕಾರಣವೇನೆಂದರೆ ಗ್ರಹಣ ಹಿಡಿದಾಗ ನಮ್ಮ ಅತ್ತಿಗೆ ಹೊರಗೆ ಬರಲಿಲ್ಲವಾದರೂ ಕಿರುಮನೆಯಲ್ಲಿ ಮಂಚದಮೇಲೆಮಲಗಿಕೊಂಡು ಅಲುಗಿದಳಂತೆ. ಇದೇಕಾರಣ. ಗ್ರಹಣ ಹಿಡಿದಿರುವಷ್ಟು ಹೊತ್ತೂ ಗರ್ಭಿಣಿಯರು ಕೈಕಾಲುಗಳನ್ನು ಅಲ್ಲಾಡಿಸಕೂಡದು. ಯಾವುದು ಅಲ್ಲಾಡಿದರೆ ಅದೆಲ್ಲಾ ವಕ್ರವಾಗುವುದು. ಏನೇ ಸತ್ಯಮ್ಮಾ ! ಇನ್ನೂ ಇಲ್ಲೇ ಇದ್ದೀಯೆ ! ನನ್ನ ಮಾತು ಸುಳ್ಳೆಂದು ನೆನಸುವೆಯೋ ?

ಸತ್ಯ—ಅಜ್ಜಮ್ಮಾ, ಹಾಗೆನ್ನಬೇಡ. ನೀನು ಹೇಳುವುದಕ್ಕೆ ಮುಂಚೆಯೇ ನಾನು ಚಂದ್ರನನ್ನು ನೋಡಿದ್ದೆನು. ಆದುದರಿಂದ ಇನ್ನು ಪುನಃ ಅದನ್ನು ನೋಡಿದರೆ ಏನೂ ಆಗಲಾರದೆಂದು ಹಾಗೆಯೇ ನಿಂತಿದ್ದೇನೆ. ತೆಗೆ ತೆಗೆ ; ಬೇಡವೆಂದು ನೀನು ಖಂಡಿತವಾಗಿ ಹೇಳಿದರೆ ನೋಡುವುದಿಲ್ಲ.

ಪಾರ್ವ—ನಯಭಯಗಳೊಂದೂ ಇಲ್ಲದೆ ಮಾತಾಡುತ್ತೀಯೆ ಮಗುವೇನಾಗಿ ಹೋಗುವುದೋ ಎಂಬ ಭಯ ನಿನಗೆ ಇನ್ನೂ ಹುಟ್ಟಲಿಲ್ಲ. ನಿನಗೆ ತಿಳಿದಿರುವ ವೇದಾಂತಗಳು ನನಗೆ ತಿಳಿಯವು. ಈ ಕಾಲದಲ್ಲಿ ಎಷ್ಟು ಚಿಕ್ಕವರಿಗೂ ದೊಡ್ಡವರ ಮಾತೆಂದರೆ ಲಕ್ಷ್ಯವಿಲ್ಲ.

ಸತ್ಯ—ಅಜ್ಜಮ್ಮಾ, ಸಿಟ್ಟುಮಾಡಬೇಡ, ಇದೊ, ಬರುತ್ತೇನೆ. ಕಣ್ಣಿಗೆ ನಿದ್ದೆ ಹತ್ತದೆ ಇದೆ. ನಿಮ್ಮ ಕಾಲದ ಸುದ್ದಿ ಇನ್ನೇನಾದರೂ ಇದ್ದರೆ ಹೇಳು. ನೀನು ನಿನ್ನ ಗಂಡನೊಂದಿಗೆ ಕಾಶೀಯಾತ್ರೆಗೆ ಹೋದೆಯಷ್ಟೆ. ದಾರಿಯಲ್ಲಿ ಏನೇನು ನೋಡಿದೆ?

ಪಾರ್ವ—ಆಕಾಲದ ಕಥೆಯನ್ನು ಹೇಳಿದರೆ ಈಗ ನೀವೆಲ್ಲರೂ ಹಾಸ್ಯ ಮಾಡಿಕೊಂಡು ನಗುತ್ತೀರಿ. ಪೂರ್ವದಲ್ಲಿ ಕಾಶಿಗೆ ಹೊರಟವರೂ ಕಾಡಿಗೆ ಹೋದವರೂ ಒಂದೇ ಎಂದು ಹೇಳುತ್ತಿದ್ದರು. ಆಗ ಪುನಃ ಹಿಂದಿರುಗಿ ಬರುವ ವರೆಗೂ ಅವರು ಬದುಕಿದಾರೆಂಬ ಆಸೆ ಮನೆಯಲ್ಲಿ ಒಬ್ಬರಿಗೂ ಇರುತ್ತಿರಲಿಲ್ಲ. ಈಗ ಎರಡು ತಿಂಗಳೊಳಗಾಗಿಯೇ ಕಾಶಿಗೆ ಹೋಗಿ ಬಂದೆನೆಂದು ಧಡಬಡನೆ ಬರುತ್ತಾರೆ. ನಿಜವಾಗಿ ಹೋಗುತ್ತಾರೆಯೋ ಇಲ್ಲವೋ ಗೊತ್ತಿಲ್ಲ.

ಸತ್ಯ—ಅಜ್ಜಮ್ಮಾ, ನೀನೇಕೆ ಕಾಶಿಗೆ ಹೋಗಿದ್ದೆ?

ಪಾರ್ವ—ನನ್ನ ಬಾಲ್ಯದಲ್ಲಿ ನನ್ನ ಸವತಿಯ ಕಾಟವನ್ನು ಎಷ್ಟೆಂದು ಹೇಳಲಿ? ಅವಳು ದೆವ್ವವಾಗಿ ನನ್ನನ್ನು ಹಿಡಿದುಕೊಂಡು ನಾನು ಎಷ್ಟು ಔಷಧಗಳನ್ನು ತೆಗೆದುಕೊಂಡರೂ ಎಷ್ಟು ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದರೂ ನನ್ನನ್ನು ಬಿಟ್ಟು ಕದಲದೆ ಇದ್ದಳು. ರಂಗೋಲಿ ಹಾಕಿ ಕುಳ್ಳಿರಿಸಿದಾಗ ಕಾಶಿಗೆ ಹೋದರೆ ಬಿಟ್ಟುಹೋಗುತ್ತೇನೆಂದು ಹೇಳಿದಳು. ಆಗ ನಮ್ಮ ಮನೆಯವರು ನನ್ನನ್ನು ಕಾಶಿಗೆ ಕರೆದುಕೊಂಡುಹೋದರು.

ಸತ್ಯ—ಅಜ್ಜಮ್ಮಾ, ದಾರಿಯಲ್ಲಿ ಜಗನ್ನಾಥವನ್ನು ನೋಡಿದೆಯಾ ?

ಪಾರ್ವ—ಅಯ್ಯೋ ಜಗನ್ನಾಥವನ್ನೇ ನೋಡದಿದ್ದರೆ ಇನ್ನೇನಿದೆ! ದೇವರ ಪ್ರಸಾದವಿನ್ನೂ ನನ್ನ ಹತ್ತಿರ ಕೊಂಚವಿದೆ. ನಾಳೆ ಮಡಿಯುಟ್ಟುಕೊಂಡು ಬಂದಾಗ ಜಗನ್ನಾಥದ ಬುಟ್ಟಿಯಿಂದ ಅದನ್ನು ತೆಗೆದುಕೊಡುವೆನು. ಅಲ್ಲಿ ಪ್ರಸಾದಕೊಡುವವರು ನಾಯಿಂದರು. ನಾವು ಅದನ್ನು ಕಣ್ಣಿಗೆ ಒತ್ತಿಕೊಂಡು ತಿನ್ನಬೇಕು. ಹಾಗೆ ತಿನ್ನದೆ ಆ ಕ್ಷೌರಕರು ಕೊಡುವ ಪ್ರಸಾದ ನಮಗೆ ಬೇಡವೆಂದರೆ ಒಡನೆಯೇ ಕಣ್ಣುಗಳು ಹೋಗುವುವು.

ಸತ್ಯ—ಅಜ್ಜಮ್ಮಾ, ಜಗನ್ನಾಥಸ್ವಾಮಿಗೆ ಕೈಯೂ ಕಾಲೂ ಇಲ್ಲವೆಂದು ಹೇಳುತ್ತಾರಲ್ಲ, ಅದು ನಿಜವೋ ?

ಪಾರ್ವ—ಅದಕ್ಕೆ ಒಂದು ಕಾರಣವುಂಟು, ಹೇಳುತ್ತೇನೆ ಕೇಳು. ಆತನ ಹೆಸರು ಮರೆತುಹೋಯಿತು. ಯಾರೋ ಇರಲಿ, ಒಬ್ಬ ದೊಡ್ಡ ಅರಸನು.

ಅವನು ಕೋಟ್ಯಂತರ ಧನವನ್ನು ವೆಚ್ಚ ಮಾಡಿ ದೊಡ್ಡದಾಗಿ ಒಂದು ಗುಡಿಯನ್ನು ಕಟ್ಟಿಸಿ ಅದರಲ್ಲಿ ಪ್ರತಿಷ್ಠೆಮಾಡುವುದಕ್ಕೆ ತಕ್ಕ ದೇವರನ್ನು ಮಾಡಿಸಬೇಕೆಂದು ಕಾಶಿಯಿಂದ ಕೆಲಸಗಾರರನ್ನು ಕರೆಯಿಸಿ ದಿವ್ಯಸುಂದರವಿಗ್ರಹವುಳ್ಳ ದೇವರನ್ನು ಮಾಡಿಕೊಂಡು ಬನ್ನಿ—ಎಂದು ಹೇಳಿದನು.

ಸತ್ಯ—ಹಾಗೆ ಯಾರಾದರೂ ಮಾಡಿ ತಂದರೋ ?

ಪಾರ್ವ—ಇಲ್ಲ. ವಿಗ್ರಹ ಚೆನ್ನಾಗಿಲ್ಲದಿದ್ದರೆ ತಲೆ ತೆಗೆಯಿಸುವೆನೆಂದು ಅರಸನು ಹೆದರಿಸುತ್ತಿದ್ದನು. ಆದಕಾರಣ ಕೆಲಸಗಾರರೊಬ್ಬರೂ ಬರಲಿಲ್ಲ. ಹೀಗೆ ಕೆಲವುಕಾಲ ಕಳೆದಮೇಲೆ ಒಂದು ದಿನ ಒಬ್ಬ ಮುದುಕನು ಉಳಿ ಸುತ್ತಿಗೆ ಮುಂತಾದುವನ್ನು ತೆಗೆದುಕೊಂಡು ಬಂದು ನೀನು ಅಪೇಕ್ಷಿಸಿದ ವಿಗ್ರಹವನ್ನು ಮಾಡುತ್ತೇನೆಂದು ಆ ರಾಜನ ಸಂಗಡ ಹೇಳಿದನು. ಆ ಅರಸನು ವಿಗ್ರಹ ಚೆನ್ನಾಗಿಲ್ಲದಿದ್ದರೆ ನಿನ್ನ ತಲೆ ತೆಗೆಯಿಸುತ್ತೇನೆಂದು ಅವನಿಗೂ ಹೇಳಿದನು. ಆದರೂ ಅವನು ಹೆದರದೆ ಹಾಗೆಯೇ ಆಗಲೆಂದು ಒಪ್ಪಿಕೊಂಡು ಒಂದನ್ನು ಮಾತ್ರ ಅಪೇಕ್ಷಿಸಿದನು.

ಸತ್ಯ—ಅದೇನು ?

ಪಾರ್ವ—ನಾನು ವಿಗ್ರಹದ ಕೆಲಸವನ್ನೆಲ್ಲಾ ಮಾಡಿ ಮುಗಿಸುವವರೆಗೂ ಯಾರೂ ಒಳಕ್ಕೆ ಬರಕೂಡದು. ಹಾಗೆ ಬಂದರೆ ಕೆಟ್ಟುಹೋಗುವುದು. ನನ್ನಮೇಲೆ ತಪ್ಪಿಲ್ಲ ಎಂದು ಧೊರೆಗೆ ಹೇಳಿ ಒಪ್ಪಿಸಿ ಗುಡಿಯೊಳಗೆ ಹೊಕ್ಕು ಕದದ ಅಗುಳಿಯನ್ನು ಹಾಕಿಕೊಂಡನು. ಗುಡಿಯಲ್ಲಿ ಒಂದೇತರವಾಗಿ ರಾತ್ರಿಯೂ ಹಗಲೂ ಸುತ್ತಿಗೆಯ ಪೆಟ್ಟುಗಳು ಟಕ್ಕೂ ಟಕ್ಕೂ ಎಂದು ಕೇಳುತ್ತಿದ್ದುವು. ಹೀಗೆ ಮೂರು ತಿಂಗಳು ತುಂಬಿದಮೇಲೆ ಆ ಅರಸು ಅತಿ ಚಾಪಲ್ಯದಿಂದ ಆ ಮುದುಕನು ನಮ್ಮ ಗುಡಿಯ ಗೋಡೆಗಳನ್ನು ಒಡೆದುಹಾಕುತ್ತಿದಾನೆಯೋ ಏನೋ ಎಂದು ಕೊಂಡು ಬಾಗಿಲ ಹತ್ತಿರ ಬಂದು ಕೂಗಿದನು. ಎಷ್ಟು ಕೂಗಿದರೂ ಉತ್ತರವೇ ಬರಲಿಲ್ಲ. ಇದಲ್ಲದೆ ಗುಡಿಯಲ್ಲಿ ಎಲ್ಲೆಲ್ಲಿಯೂ ಸುತ್ತಿಗೆಯ ಪೆಟ್ಟುಗಳು ಮೊದಲಿಗಿಂತ ಹೆಚ್ಚಾಗಿ ಕೇಳಿಸಿದುವು. ಆಗ ಅರಸನು ಹಾರೆಗಳನ್ನು ತರಿಸಿ ಕದಗಳನ್ನು ಇಡಿರೆತ್ತಿಸಿ ಒಳಗೆ ಹೋಗಿ ನೋಡಿದನು. ಅಲ್ಲಿ ಮೊಂಡುಕಾಲುಗಳೂ ಮೊಂಡು ಕೈಗಳೂ ಉಳ್ಳ ಅಂಗವಿಕಾರವಾದ ಒಂದು ಬೊಂಬೆ ಇದ್ದಿತು.

ಸತ್ಯ—ಆಗ ಅರಸು ಏನು ಮಾಡಿದನು ?

ಪಾರ್ವ—ಇಂತಹ ವಿಗ್ರಹವನ್ನೇಕೆ ಮಾಡಿದೆ ಎಂದು ಕೇಳಿದನು. ಮುದುಕನು ನೀವು ನನ್ನ ಕೆಲಸ ಮುಗಿಯುವವರೆಗೆ ಒಳಗೆ ಬಾರದಿರಬೇಕಾಗಿದ್ದಿತು.

ಅವಸರ ಪಡದೆ ಇದ್ದರೆ ಇದೇ ದಿವ್ಯಸುಂದರವಿಗ್ರಹವಾಗುತ್ತಿದ್ದಿತು. ಎಂದು ಹೇಳಿದನು. ಆಗ ಆ ಅರಸು ಕುಪಿತನಾಗಿ ಶಿರಶ್ಛೇದನ ಮಾಡಿಸುತ್ತೇನೆಂದು ಹೇಳಿ ಹೊರಡುವಾಗ್ಗೆ ಆ ಮುದುಕನು ಅಯ್ಯಾ ಕೋಪಮಾಡಬೇಡ, ಈ ವಿಗ್ರಹವೇ ಜಗನ್ನಾಥಸ್ವಾಮಿಯಾಗುವುದು. ಎಲ್ಲರೂ ಇದನ್ನೇ ಪೂಜಿಸುವರು. ಎಂದು ನುಡಿದು ಮೇಲೆ ನೆಗೆದು ಕಲ್ಲುಗಳ ಸಂದಿನಲ್ಲಿ ನುಸಿದು ಮಾಯವಾದನು.

ಸತ್ಯ—ಮನುಷ್ಯನು ಕಲ್ಲುಗಳ ಸಂದಿನಲ್ಲಿ ಹೇಗೆ ನುಸಿದುಕೊಂಡು ಹೋದನು?

ಪಾರ್ವ—ಆತನು ಸಾಧಾರಣ ಮನುಷ್ಯನೆಂದೆಣಿಸುವೆಯೋ? ಪರಮೇಶ್ವರನೇ ಆ ಮುದುಕನಹಾಗೆ ಬಂದು ಹಾಗೆ ಮಾಡಿದನು. ಆದುದರಿಂದಲೇ ಜಗನ್ನಾಥನಲ್ಲಿ ದೇವರಿಗೆ ಅಷ್ಟುಮಹಿಮೆ. ಆ ದೇವರ ತೇರಿನ ಕೆಳಗೆ ಬಿದ್ದು ಸತ್ತರೆ ಎಷ್ಟೋ ಪುಣ್ಯವಂತೆ. ದಿಕ್ಕು ಕೆಟ್ಟು ಬಂದ ಕುಂಪಣಿಯುವರು ಈಗ ಯಾರನ್ನೂ ಸಾಯಲೀಸರು. ಕ್ರೈಸ್ತರು ಪ್ರಬಲಿಸಿದ ಕಾರಣ ಈಗ ಎಲ್ಲಿನೋಡಿದರೂ ಹೊಲೆಯರ ಗುಂಪೇ ಬರುತ್ತಿದೆ. ಅವರು ಯಾವಾಗಲೋ ವರ್ಣಸಂಕರ ಮಾಡಿಬಿಡುತ್ತಾರೆ.

ಸತ್ಯ—ಅಜ್ಜಮ್ಮಾ, ಸರ್ಕಾರದವರನ್ನು ನಿಷ್ಕಾರಣವಾಗಿ ಏಕೆ ಬಯ್ಯುವೆ? ಅವರು ನಮಗೇನು ಅಪಕಾರವನ್ನು ಮಾಡಿರುತ್ತಾರೆ. ಈಗ ನೋಡು ರಸ್ತೆಗಳನ್ನು ಹಾಕಿಸಿ, ಕಾಲುವೆಗಳನ್ನು ತೆಗೆಯಿಸಿ ದೇಶವೆಲ್ಲಾ ಎಷ್ಟು ಸೊಗಸಾಗಿ ಕಾಣುವಂತೆ ಮಾಡಿದ್ದಾರೆ.

ಪಾರ್ವ—ಅದಕ್ಕೆ ಬೆಂಕಿಹಾಕಿತು; ಅದಕ್ಕೆ ಅತ್ತರು, ಜಾತಿಕೆಡಿಸಿದಮೇಲೆ ಇವೆಲ್ಲಾ ಏಕೆ? ಸಹಗಮನದ ಹೆಸರನ್ನೇ ತೊಡೆದುಬಿಟ್ಟರಲ್ಲ.

ಸತ್ಯ—ನೀನು ಎಂದಾದರೂ ಸಹಗಮನಮಾಡುತ್ತಿದ್ದಾಗ ನೋಡಿದ್ದೀಯಾ?

ಪಾರ್ವ—ಒಂದುಸಾರಿಮಾತ್ರ ನೋಡಿದೇನೆ. ಆಗ ನನಗೆ ಇಪ್ಪತ್ತುವರುಷ ವಯಸ್ಸು. ಆದರೂ ನಮ್ಮವರು ಹೋಗುವಾಗ್ಗೆ ಈ ದಿಕ್ಕುಕೆಟ್ಟ ಕುಂಪಣಿಯುವರು ಸಹಗಮನವನ್ನು ನಿಲ್ಲಿಸಿಬಿಟ್ಟರು. ಆ ವರ್ಷವೇ ಅದು ನಿಂತುಹೋಯಿತೆಂದು ಎಲ್ಲರೂ ಆಶ್ಚರ್ಯಪಡುತ್ತಿದ್ದರು.

ಸತ್ಯ—ನೀನು ನೋಡಿರುವುದನ್ನು ನನಗೆ ಹೇಳುತ್ತೀಯಾ ?

ಪಾರ್ವ—ನಮ್ಮ ನೆಂಟನೇ ಒಬ್ಬನು ಎಪ್ಪತ್ತುವರುಷದವನು ಸತ್ತುಹೋದನು. ಆತನ ಮೂರನೆಯ ಮದುವೆಯ ಹೆಂಡತಿ ಇನ್ನೂ ದೊಡ್ಡವಳಾಗಿರಲ್ಲ. ಆಗ ಅವಳಿಗೆ ಸುಮಾರು ಏಳುವರುಷ, ಆದಕಾರಣ ಗಂಡನು ಸತ್ತುಹೋದರೆ

ಚೆನ್ನಾಗಿ ಆಳುವುದಕ್ಕೂ ಅವಳಿಗೆ ತಿಳಿಯದು. ಅವಳ ತಂದೆ ಶ್ರೋತ್ರಿಯನು. ಆತನು ನಿತ್ಯಕರ್ಮಗಳೆಲ್ಲಾ ಮುಗಿದಮೇಲೆ ಅಪರಾಹ್ಣ ತಿರುಗಿದ ಹೊರತು ಊಟಮಾಡತಕ್ಕವನಲ್ಲ. ಗಂಡನು ಸತ್ತುಹೋದಾಗ ಆ ಹುಡುಗಿ ಬೀದಿಯಲ್ಲಿ ಆಡುತಿದ್ದಳು. ಆಗ ಅವಳನ್ನು ಎತ್ತಿಕೊಂಡು ಒಳಗೆಹೋಗಿ ಅಮ್ಮಾ, ನೀನು ಸಹಗಮನಮಾಡಿದರೆ ಯಾವಾಗಲೂ ಸ್ವರ್ಗದಲ್ಲಿ ಗಂಡನೊಂದಿಗೆ ಸುಖಪಡಬಹುದು. ಮತ್ತು ಗಂಡನ ವಂಶದವರನ್ನೂ ನಿನ್ನ ತಂದೆಯ ಕುಲದವರನ್ನೂ ಉದ್ಧಾರಮಾಡಬಹುದು ; ಎಂದು ತಂದೆ ಹೇಳಿದನು. ಆಗ ಆ ಹುಡುಗಿ ಸಹಗಮನವೆಂದರೇನೋ ಅದನ್ನು ತಿಳಿಯದೆ ಆಗಲೆಂದು ಒಪ್ಪಿಕೊಂಡಳು. ಕೂಡಲೆ ಆ ಹುಡುಗಿಗೆ ಮೈತುಂಬಾ ಒಡವೆಗಳನ್ನು ಇಡಿಸಿ, ಒಳ್ಳೇ ಸೀರೆಯನ್ನು ಉಡಿಸಿ, ಹೊಸ ಮದುವಣಗಿತ್ತಿಯಂತೆ ಸಿಂಗರಿಸಿ ಬಾಜಾ ಬಜಂತ್ರಿ ಮುಂತಾದುವುಗಳಿಂದ ಶವದೊಂದಿಗೆ ಮೆರವಣಿಗೆ ಮಾಡಿಸುತ್ತಾ ದೂರವಾಗಿರುವ ಗೋದಾವರೀತೀರಕ್ಕೆ ತೆಗೆದುಕೊಂಡು ಹೋದರು. ಅದನ್ನು ನೋಡುವುದಕ್ಕಾಗಿ ಊರಿಂದ ಸಾವಿರಾರು ಮಂದಿಗಳು ಹೋದರು. ಅರಿಸಿನಕುಂಕುಮ ತೆಗೆದುಕೊಳ್ಳುವುದಕ್ಕಾಗಿ ಊರಲ್ಲಿದ್ದ ಮುತ್ತೈದೆಯರೆಲ್ಲರೂಹೋದರು. ಮೊತ್ತಮೊದಲು ಬ್ರಾಹ್ಮಣರು ಗಂಡನ ತಲೆಯನ್ನು ಆ ಹುಡುಗಿಯ ತೊಡೆಯಮೇಲೆ ಇರಿಸಿ ಮಂತ್ರಹೇಳುತ್ತಾ ಏನೇನೋ ಕರ್ಮಗಳನ್ನು ಮಾಡಿಸಿದರು. ಆಮೇಲೆ ಆ ಹುಡುಗಿಯ ತಂದೆ ಅವಳ ನಗಗಳನ್ನೆಲ್ಲಾ ತೆಗೆಯಿಸಿ ಬ್ರಾಹ್ಮಣರಿಗೆಲ್ಲರಿಗೂ ಹಂಚಿ ಕೊಟ್ಟನು.

ಸತ್ಯ—ಮುತ್ತೈದೆಯರಿಗೆ ಯಾವಾಗ ಅರಸಿನ ಕುಂಕುಮ ಕೊಟ್ಟರು ?

ಪಾರ್ವ—ಬಹುಕಾಲವಾದುದರಿಂದ ಅದು ನನಗೆ ಮರೆತು ಹೋಯಿತು. ಅಷ್ಟರೊಳಗೆಯೇ ಕೊಟ್ಟಿರಬಹುದು. ಜನ್ಮಾಂತರಗಳಲ್ಲಿಯೂ ಮುತ್ತೈದೆತನ ಬರುವುದೆಂದು ಆಗ ಅರಿಸಿನ ಕುಂಕುಮಗಳನ್ನು ನಾನೂ ತೆಗೆದುಕೊಂಡೆನು. ಬ್ರಾಹ್ಮಣರು ಚಿತೆಯಮೇಲೆ ಆ ಹುಡುಗಿಯನ್ನು ಗಂಡನ ಮಗ್ಗುಲಲ್ಲಿ ಮಲಗಿಸಿ ಸುಮ್ಮನೆ ಮಂತ್ರ ಹೇಳುತ್ತಿದ್ದರು. ಆಗ ವಾದ್ಯದ ಶಬ್ದ ತಾನೇ ತಾನಾಗಿ ಹರಡಿಕೊಂಡು ಬೇರೆ ಯಾವ ಶಬ್ದವೂ ಕಿವಿಗೆ ಕೇಳದಂತೆ ಮಾಡಿದ್ದಿತು. ಆಗ ತಂದೆಯೇ ಇರಬಹುದು. ನಾಲ್ಕು ಕಡೆಯೂ ಬೆಂಕಿ ಹೊತ್ತಿಸುವಾಗ್ಯೆ ನಾನು ಹೇಳಲಾರೆನು; ಈಗಲೂ ಅದು ಕಣ್ಣಿಗೆ ಕಟ್ಟಿದಂತಿದೆ. ನನ್ನ ಮೈಯೆಲ್ಲಾ ನಡುಗುತ್ತದೆ.

ಸತ್ಯ—ಈಗ ಕೇಳಿದರೆ ನನಗೇ ಇಷ್ಟು ವ್ಯಸನವಾಗುತ್ತದೆ. ಹತ್ತಿರವಿದ್ದು ಅದನ್ನೆಲ್ಲಾ ನೋಡಿದ ನಿನಗೆ ಆಗ ಎಷ್ಟು ವ್ಯಸನವಾಯಿತೋ ಇಂತಹ ಕ್ರೂರ ಕೃತ್ಯಗಳನ್ನು ನಿಲ್ಲಿಸಿದ ದೊರೆಗಳನ್ನು ನೀನು ಬಯ್ಯಬಹುದೇ.

ಪಾರ್ವ—ನಾವು ಹಾಗೆ ದೂಷಿಸಬಾರದು. ಶಾಸ್ತ್ರದಲ್ಲಿ ಹೇಳಿದುದನ್ನು ದೂಷಿಸಿದರೆ ಕಣ್ಣುಗಳು ಹೋಗುತ್ತವೆ. ನಮಗೆ ಎಷ್ಟು ಕಷ್ಟವಾಗಿ ಕಾಣಬಂದರೂ ಶಾಸ್ತ್ರಹೇಳಿದಂತೆ ನಡೆದರೆ ಬಹು ಪುಣ್ಯ. ಆಗಲೂ ಎಲ್ಲಿಯೋ ಲಕ್ಷಕ್ಕೆ ಒಬ್ಬ ವೀರಪತಿವ್ರತೆ ಸಹಗಮನ ಮಾಡುತ್ತಿದ್ದಳೇ ಹೊರತು ಎಲ್ಲರೂ ಮಾಡುತ್ತಿರಲಿಲ್ಲ. ಚಿತೆಗೆ ಬೆಂಕಿ ಹಾಕುವಾಗ್ಗೆ ನನ್ನ ಮೈಯೆಲ್ಲಾ ಬೆವರಿ ಮರಣಕಂಪನವೆತ್ತಿ ನಿಲ್ಲಲಾರದೆ ಹಿಂದಿರುಗಿಬಂದು ಬಸವಳಿದು ಕೆಳಗೆ ಬಿದ್ದೆನು. ಮೈಗೆ ಉರಿ ಸೋಕಿದೊಡನೆಯೇ ಆ ಹುಡುಗಿ ಕಿರ್ರೆಂದು ಗಟ್ಟಿಯಾಗಿ ಅರಚಿಕೊಂಡು ಬೆಚ್ಚಿ ಬಿದ್ದು ಎದ್ದು ಅಳುತ್ತಾ ಕೆಳಕ್ಕೆ ಧುಮುಕಿದಳು. ಆಗ ತಂದೆ ಅವಳನ್ನು ಎಷ್ಟೋ ಬಯ್ದು ಜಾವಹೊತ್ತಿನವರೆಗೆ ಶಾಸ್ತ್ರದಲ್ಲಿ ಹೇಳಿದ ಪ್ರಾಯಶ್ಚಿತ್ತಗಳನ್ನೆಲ್ಲಾ ಮಾಡಿಸಿ ಪುನಃ ಮಲಗಿಸಿದರಂತೆ. ನಾನು ಅದನ್ನು ನೋಡದರೆ ಮನೆಗೆ ಓಡಿಬಂದೆನು. ಆ ರಾತ್ರಿಯೇ ನನಗೆ ಜ್ವರಬಂದಿತು. ಹತ್ತುದಿನಗಳವರೆಗೆ ನಿದ್ದೆಯಲ್ಲಿಯೂ ಬೆಚ್ಚಿ ಬೀಳುತ್ತಿದ್ದೆನು. ಅದು ಇನ್ನೂ ಮರೆಯಲಿಲ್ಲ. ಈಗಲೂ ಆ ಸಂಗತಿ ನೆನಪಿಗೆ ಬಂದರೆ ಭಯದಿಂದ ಮೈಯೆಲ್ಲಾ ಬೆವರುತ್ತದೆ. ಬಳಿಕ ತಿರುಗಿ ಮಲಗಿಸಿದಮೇಲೆ ಪುನಃ ಎದ್ದುಬಾರದಂತೆ ಬ್ರಾಹ್ಮಣರು ಬಿದಿರುಕಡ್ಡಿಗಳಲ್ಲಿ ಗಟ್ಟಿಯಾಗಿ ಅಮುಕಿ ಹಿಡಿದುಕೊಂಡು ಅಳುವ ಸದ್ದು ಕೇಳಿಸದಂತೆ ವಾದ್ಯಗಳನ್ನು ಬಾಜಿಸಿರಿ, ಎಂದು ವೇದ ಮಂತ್ರಗಳನ್ನು ಗಟ್ಟಿಯಾಗಿ ಹೇಳುತ್ತಾ ಒಂದು ನಿಮಿಷದೊಳಗಾಗಿ ದಹನಮಾಡಿಸಿದರಂತೆ. ಆ ಹುಡುಗಿ ಅಂದಿನಿಂದ ಪಿಶಾಚಿಯಾಗಿ ನಮ್ಮ ಊರಿನ ಹತ್ತಿರವೇ ಇದಾಳೆಯಂತೆ. ನಮ್ಮ ಕಾಲದಲ್ಲಿ ಅಂತಹ ಪತಿವ್ರತೆಯರಿದ್ದರು. ಈ ಕಾಲದಲ್ಲಿ ಗಂಡ ಮನೆಗೆ ಬಂದರೆ ಮೇಲಕ್ಕೆ ಏಳುವುದೇಇಲ್ಲ. ನಮ್ಮ ಕಾಲದಲ್ಲಿ ಸೊಸೆಯರು ತಮ್ಮ ಗಂಡಂದಿರೊಂದಿಗೆ ಮಧ್ಯಾಹ್ನ ಮಾತಾಡಿದರೆ ಅತ್ತೆಯರು ಕೊಂದು ಹಾಕುತ್ತಿದ್ದರು. ಈಗಿನವರು ಅತ್ತೆ ಮಾವಂದಿರ ಇದಿರಾಗಿಯೇ ಗಂಡಂದಿರೊಂದಿಗೆ ಗುಸುಗುಟ್ಟುತ್ತಾರೆ. ಕಾಲವೆಲ್ಲಾ ಕೆಟ್ಟುಹೋಯಿತು.

ಸತ್ಯ—ಅಜ್ಜಮ್ಮಾ, ಹೊತ್ತಾಯಿತು. ಈಸಾರಿ ಹೋಗಿ ಮಲಗಿಕೊ. ಎಂದು ಆ ರಾತ್ರಿ ಎಲ್ಲರೂ ಹೋಗಿ ಮಲಗಿಕೊಂಡು ಸುಖವಾಗಿ ನಿದ್ರೆಮಾಡಿದರು. ಸತ್ಯವತಿ ಗ್ರಹಣ ನೋಡಿದಳೆಂಬ ಸುದ್ದಿ ಆ ಊರಿನಲ್ಲೆಲ್ಲಾ ಹಬ್ಬಿತು. ಎಲ್ಲರೂ ಮೂಗಿನಮೇಲೆ ಬೆರಳಿಟ್ಟುಕೊಂಡು ಆಶ್ಚರ್ಯಪಡುತ್ತಾ ಸತ್ಯವತಿ ಹೆರುವ ಮಗುವಿಗೆ ಯಾವ ಅಂಗವು ಸೊಟ್ಟಯಾಗಿರುವುದೋ ನೋಡಬೇಕೆಂದು ಬೆಟ್ಟದಷ್ಟು ಆಸೆಯನ್ನು ಇಟ್ಟುಕೊಂಡಿದ್ದರು.

# ಒಂಭತ್ತನೆಯ ಪ್ರಕರಣ.

ಸತ್ಯವತಿಯ ಹೆರಿಗೆಯಾಗುವವರೆಗೆ ಹೇಳಬೇಕಾದ ವಿಶೇಷವೇನೂ ಇಲ್ಲ. ಮಾಘಬಹುಳ ತ್ರಯೋದಶಿಯದಿನ ಉದಯವಾದ ಎರಡುಗಳಿಗೆಗೆ ಸತ್ಯವತಿಯು ಸುಖವಾಗಿ ಪುರುಷಶಿಶುವನ್ನು ಪ್ರಸವಿಸಿದಳು. ಆಕೆಯ ತಾಯಿತಂದೆಗಳು ಪೂರ್ವಾಚಾರವನ್ನೇ ನಂಬಿಕೊಂಡಿರುವ ಸತ್ಕಕಾಲದವರಲ್ಲ. ಆದುದರಿಂದ ಅವರು ಮಗಳನ್ನು ಲಂಘನವಿರಿಸದೆ ಪ್ರಾಣಕ್ಕೆ ಅಲಕ್ಷ್ಯವಾಗಿದ್ದ ಕಾರಣ ಅಶಕ್ತಿಯುಂಟಾಗದಿರುವುದಕ್ಕಾಗಿ ಹತ್ತುದಿನ ಮೊದಲುಗೊಂಡು ಜಾಗ್ರತೆಯಾಗಿ ಜೀರ್ಣವಾಗುವ ರವೆ ಮುಂತಾದುವುಗಳಲ್ಲಿ ಪದಾರ್ಥಗಳನ್ನು ಮಾಡಿಹಾಕುತ್ತಾ ಬಂದರು. ಪೂರ್ವದಲ್ಲಿ ಸುಂದರಮ್ಮನ ಹೆಂಗೆ ಮನೆಯ ಮುಂದಿದ್ದಂತೆ ಈ ಹೆಂಗೆ ಮನೆಯಲ್ಲಿ ಗಾಳಿಯನ್ನು ಕೆಡಿಸುವ ಅಗ್ಗಿಷ್ಟಿಕೆಯ ಹೊಗೆಯಾಗಲಿ ಬೆಳ್ಳುಳ್ಳಿ ಮೊದಲಾದುವುಗಳ ನಾತವಾಗಲಿ ಯಾವುದೂ ಇರಲಿಲ್ಲ. ಒಳ್ಳೆಯ ಗಾಳಿ ಬರಲೆಂದು ಅವರು ಕದವನ್ನು ಕೊಂಚ ಓರೆಯಾಗಿ ತೆರೆದಿದ್ದರು. ಊರಿನವರು ಗುಂಪುಗುಂಪಾಗಿ ಬಂದುಬಂದು ಮಗುವಿಗೆ ಎಲ್ಲಿ ಗ್ರಹಣ ತಗುಲಿದೆ ಎಂದು ವಿಚಾರಿಸುತ್ತಿದ್ದರು. ಎಲ್ಲಿಯೂ ಗ್ರಹಣ ತಗುಲಿಲ್ಲವೆಂದು ಮಂತ್ರಸಾನಿ ಹೇಳಿದರೂ ಮತ್ತೆ ಯಾರು ಹೇಳಿದರೂ ಅವರು ನಂಬದೆ ನಿಜವಾಗಿ ಮಗುವಿಗೆ ಯಾವುದೋ ಒಂದು ಅಂಗ ಜೊಂಕಾಗಿದೆ ಎಂದುಕೊಂಡು ಹೋಗುತ್ತಿದ್ದರು. ಅಹಾ! ಜನರಿಗೆ ಈಗಲೂ ಹೀಗೆ ಮೂಢತ್ವವಿರುವುದಲ್ಲ? ಇತ್ತ ರಾಜಮಹೇಂದ್ರದಲ್ಲಿ ನಾರಾಯಣಮೂರ್ತಿ ರಾತ್ರಿಯೂ ಹಗಲೂ ಕಷ್ಟಪಟ್ಟು ಓದಿ ಪುಷ್ಯಮಾಸದಲ್ಲಿ ಪರೀಕ್ಷೆಗಾಗಿ ಚೆನ್ನಪುರಿಗೆ ಹೋಗುವಾಗ್ಗೆ ಮೊದಲು ಪೆದ್ದಾಪುರಕ್ಕೆ ಹೋಗಿ ಹೆಂಡತಿಯನ್ನು ನೋಡಿ ಅಲ್ಲಿ ಎರಡುದಿನವಿದ್ದು, ಆಮೇಲೆ ಕಾಕಿನಾಡಿಗೆ ಹೋಗಿ ಅಲ್ಲಿಯೇ ಹಡಗು ಹತ್ತಿದನು. ಆತನು ಚೆನ್ನಪಟ್ಟಣದಲ್ಲಿದ್ದ ಹದಿನೇಳುದಿನಗಳೂ ದೇಹವು ಅಲ್ಲಿಯೇ ಇದ್ದರೂ ಪ್ರಾಣವೆಲ್ಲಾ ಹೆಂಡತಿಯಮೇಲೆಯೇ ಇದ್ದಿತು. ಅಲ್ಲಿನ ವಿನೋದಗಳನ್ನು ನೋಡುವುದಕ್ಕಾಗಿ ಆತನ ಜತೆಗಾರರೆಲ್ಲಾ ಅಲ್ಲಿಯೇ ಇದ್ದರು. ಆದರೂ ಆತನು ಒಂದು ನಿಮಿಷವೂ ಅಲ್ಲಿ ನಿಲ್ಲದೆ ಪರೀಕ್ಷೆಯಾದಕೂಡಲೆ ಬಂದ ಮೊದಲನೆಯ ಹೊಗೆಬಂಡಿಯ ಮೇಲೆಯೇ ಪುನಃ ಹಿಂದಿರುಗಿ ಪೆದ್ದಾಪುರಕ್ಕೆ ಬಂದನು. ಆಗಲೇ ರಾಜಮಹೇಂದ್ರದ ಪಾಠಶಾಲಾಧಿಕಾರಿಯೊಬ್ಬನು ಆತನಿಗೆ ನಾಲ್ವತ್ತು ರೂಪಾಯಿನ ಸಂಬಳವುಳ್ಳ ಪ್ರಧಾನೋಪಾಧ್ಯಾಯನ ಕೆಲಸವನ್ನು ಕೊಡುತ್ತೇನೆ, ನೀನು ಒರ

ಬೇಕು ಎಂದು ಕಾಗದ ಬರೆದನು. ಅದುವರೆಗೆಯೇ ಆತನು ತನ್ನ ಪ್ರಯಾಣದ ವೆಚ್ಚಕ್ಕಾಗಿ ಕೊಂಚ ಸಾಲಮಾಡಿಕೊಂಡಿದ್ದನು. ಮತ್ತು ಆತನಿಗೆ ಮುಂದೆ ಹಣ ವೆಚ್ಚವಾಗಬೇಕಾದ ಕೆಲಸಗಳು ಅನೇಕಗಳಿದ್ದುವು. ತಾನಾಗಿ ಕೆಲಸ ದೊರೆತಾಗ ಬಿಟ್ಟುಬಿಟ್ಟರೆ ಪುನಃ ಸಿಕ್ಕಲಾರದಲ್ಲವೆ ? ಈ ಕಾರಣಗಳಿಂದ ಆತನು ಸತ್ಯವತಿಯ ಸಂಗಡ ಆಲೋಚಿಸಿ ರಾಜಮಹೇಂದ್ರಕ್ಕೆ ಹೋಗಿ ಕೆಲಸಕ್ಕೆ ಒಪ್ಪಿಕೊಂಡನು. ಹೀಗಿರುವಾಗ ಬಿ. ಎ. ತರಗತಿಯಲ್ಲಿ ತೇರಿದಂತೆ ಚೆನ್ನಪಟ್ಟಣದಿಂದ ತಂತಿಯ ಸಮಾಚಾರ ಬಂದದಿನವೇ ಪುತ್ರಜನನವಾದ ಶುಭವಾರ್ತೆಯೂ ಬಂದು ನಾರಾಯಣಮೂರ್ತಿಗೆ ಸಂತೋಷವನ್ನು ಇಮ್ಮಡಿಸಿತು. ಇಪ್ಪತ್ತೊಂದನೆಯದಿನ ನಾಮಕರಣಮಹೋತ್ಸವವು ನಿಶ್ಚಯವಾಯಿತು. ಆದುದರಿಂದ ನಾಲ್ಕುದಿನ ರಜಾ ತೆಗೆದುಕೊಂಡು ನಾರಾಯಣಮೂರ್ತಿ ತಮ್ಮಂದಿರೊಡನೆಯೂ ಅತ್ತಿಗೆ ನಾದನಿಯರೊಡನೆಯೂ ಒಡಹುಟ್ಟಿದ ಹೆಣ್ಣುಮಕ್ಕಳೊಡನೆಯೂ ಪೆದ್ದಾಪುರಕ್ಕೆ ಹೋಗಿ ಪುನಃ ಹಿಂದಿರುಗಿ ಬಂದನು. ಆ ಮಗುವಿಗೆ ಲಕ್ಷ್ಮೀನಾರಾಯಣರಾವ್ ಎಂದು ಅಜ್ಜನ ಹೆಸರನ್ನೇ ಇಟ್ಟರು. ಕೆಲವು ತಿಂಗಳಕೆಳಗೆ ನಾಗರಚೌತಿಯದಿನ ಹುತ್ತಕ್ಕೆ ಹಾಲೆರೆಯುವುದಕ್ಕಾಗಿ ತಾಯಿಯೊಂದಿಗೆ ರಾಮಾನುಜಮ್ಮನೂ ಹೋಗಿದ್ದಳು. ಆಗ ಅವಳನ್ನು ಒಂದು ಹಾವು ಕಚ್ಚಿತು. ಮಗು ಸತ್ತಿತು. ಸತ್ತಸಮಾಚಾರ ತಿಳಿದರೂ ನಾರಾಯಣಮೂರ್ತಿಯೂ ಸತ್ಯವತಿಯೂ ಬಂದು ನೋಡಿಕೊಂಡು ಹೋಗಲಿಲ್ಲವಲ್ಲ ಎಂಬ ಕೋಪದಿಂದಲೂ ತಮ್ಮ ಮಗಳು ಸತ್ತ ದುಃಖದಲ್ಲಿಯೂ ನಾರಾಯಣಮೂರ್ತಿ ತಾನೇ ಬಂದು ಕರೆದನಲ್ಲ ಎಂಬ ಮತ್ಸರದಿಂದಲೂ ಶುಭ ಲೇಖನವನ್ನು ಬರೆದುಕೊಟ್ಟು ದೊಡ್ಡತಮ್ಮನಾದ ರಾಮಸ್ವಾಮಿಯನ್ನು ಕಳುಹಿಸಿದರೂ ನಾಮಕರಣಮಹೋತ್ಸವಕ್ಕೆ ವೆಂಕಟೇಶನೂ ಸುಂದರಮ್ಮನೂ ಮಾತ್ರ ಬರಲಿಲ್ಲ. ಅವರು ಬಾರದೆ ಹೋದರಲ್ಲ ಎಂದು ನಾರಾಯಣಮೂರ್ತಿಯೂ ಸತ್ಯವತಿಯೂ ಬಹು ಪೇಚಾಡಿಕೊಂಡರು. ಈ ಲೋಕದಲ್ಲಿ ಯಾರೂ ಸರ್ವದಾ ಸುಖವಾಗಿರುವುದಿಲ್ಲ. ಮಧ್ಯೇಮಧ್ಯೇ ಯಾವುದೋ ಒಂದು ಬಗೆಯಾದ ದುಃಖ ವುಂಟಾಗುತ್ತಿರುವುದು. ಹೀಗೆ ಅವರೆಲ್ಲರೂ ಸುಖವಾಗಿರುವಾಗ ಒಂದು ದಿನ ಕೃಷ್ಣಮೂರ್ತಿ ನರಸಾಪುರದಲ್ಲಿ ತನ್ನ ಸೋದರಮಾವನಿಗೆ ಕಾಯಿಲೆಯಾಗಿರುವುದೆಂದು ಕೇಳಿ ನೋಡಿಕೊಂಡು ಬರುವುದಕ್ಕಾಗಿ ಮಧ್ಯಾಹ್ನ ಮೂರುಘಂಟೆಯ ಸಮಯದಲ್ಲಿ ಹಡಗು ಹತ್ತಿದನು. ಆ ಹಡಗು ಗೋದಾವರಿಯಲ್ಲಿ ಅರ್ಧ ದೂರ ಹೋದಮೇಲೆ ದೊಡ್ಡದೊಂದು ಬಿರುಗಾಳಿ ಬಂದಿತು. ಕಟ್ಟಿದ್ದ ಹಳೆಯಹಗ್ಗಗಳೆಲ್ಲ

ಕಿತ್ತುಹೋದುವು. ಮತ್ತು ಹಡಗು ನಡಿಸುತ್ತಿದ್ದವರಿಗೆ ತಿಳುವಳಿಕೆ ಕಡಿಮೆ, ಈ ಕಾರಣಗಳಿಂದ ಹಡಗು ಮೂಲೆಗೆ ಒರಗಿತು. ಒಳಗಿದ್ದವರೆಲ್ಲರೂ ಏಕಕಾಲದಲ್ಲಿ ಒಂದೇಕಡೆಗೆ ಬಂದುದರಿಂದ ಹಡಗು ಮುಳುಗಿಹೋಯಿತು. ಆಗ ಈಜೆಗೆ ಬಾರದೆಯೂ, ದಡಸೇರುವುದಕ್ಕೆ ಈಜು ಬೀಳದೆಯೂ ಮೃತಿಪಟ್ಟವರಲ್ಲಿ ಕೃಷ್ಣಮೂರ್ತಿಯೊಬ್ಬನು. ಹಡಗು ಮುಳುಗಿಹೋದ ಸಿಡಿಲಿನಂತಹ ದುರ್ವಾರ್ತೆ ರಾತ್ರಿ ಏಳು ಘಂಟೆಗೆ ರಾಜಮಹೇಂದ್ರಕ್ಕೆ ತಿಳಿಯಿತು. ಆಗ ನಾರಾಯಣಮೂರ್ತಿ ಮುಂತಾದವರು ಚಿಕ್ಕಚಿಕ್ಕ ದೋಣಿಗಳಲ್ಲಿ ಕುಳಿತುಕೊಂಡು ಅಲ್ಲಿಗೆ ಹೋಗಿ ನೋಡಿ ಅನ್ಯಾಯವಾಯಿತೆಂದು ಬಹು ವಿಷಾದಪಟ್ಟರು. ಸೀತೆಗೆ ಮದುವೆಯಾಗಿ ಒಂದು ವರ್ಷವಾದರೂ ತುಂಬಲಿಲ್ಲ. ಆದರೂ ಅವಳಿಗೆ ವೈಧವ್ಯಯೋಗ ಸಂಭವಿಸಿತು. ಆಹಾ! ವಿಧಿವಿಲಾಸವನ್ನು ಏನೆಂದು ಹೇಳೋಣ. ಸತ್ಯವತಿಯು ಮಗುವಿಗೆ ಐದುತಿಂಗಳು ತುಂಬುವವರೆಗೂ ತವರುಮನೆಯಲ್ಲಿಯೇ ಇರಬೇಕೆಂದು ಯೋಚಿಸಿಕೊಂಡಿದ್ದಳು. ಆದರೆ ತನ್ನ ಪ್ರೀತಪಾತ್ರಳಾದ ನಾದಿನಿಗೆ ಅಂತಹ ವಿಪತ್ತು ಬಂದುದನ್ನು ಕೇಳಿದ ಕೂಡಲೆ ಒಂದು ನಿಮಿಷವಾದರೂ ಅಲ್ಲಿರುವುದಕ್ಕೆ ಅವಳ ಕಾಲು ನಿಲ್ಲಲಿಲ್ಲ. ಅವಳು ಮಗುವೆತ್ತಿಕೊಂಡು ಮೂರನೆಯ ತಿಂಗಳಲ್ಲಿಯೇ ಹಡಗುಹತ್ತಿ ಅಣ್ಣನೊಂದಿಗೆ ಹೊರಟು ಮರುದಿನವೇ ರಾಜಮಹೇಂದ್ರಕ್ಕೆ ಸೇರಿದಳು. ಆಗ ಮನೆಯಲ್ಲಿ ಎಲ್ಲಿ ನೋಡಿದರೂ ರೋದನಧ್ವನಿಯೇ ತುಂಬಿದ್ದಿತು. ನೋಡುವವರಿಗೆ ಝುಗ್ಗನೆ ಎದೆಯೊಡೆದುಹೋಗುವಂತಿದ್ದಿತು. ನಾದಿನಿಯ ಮೇಲೆ ಪ್ರೀತಿ ಬಹಳವಾಗಿದ್ದುದರಿಂದ ಸತ್ಯವತಿಯ ದುಃಖವು ಅಪಾರವಾಗಿದ್ದಿತು. ಆಕೆಯೇ ಸೀತೆಗೆ ಮೊದಲಿಂದಲೂ ಓದುಕಲಿಸಿದವಳು. ಆದಕಾರಣ ಅವಳನ್ನು ತಾನೇ ಹೆತ್ತವಳಂತೆ ನೋಡಿಕೊಳ್ಳುತ್ತಿದ್ದಳು. ಸೀತೆಗೂ ಅತ್ತಿಗೆಯ ವಿಷಯದಲ್ಲಿ ಅಂತಹ ಪ್ರೀತಿಯೇ. ತನ್ನ ಒಡಹುಟ್ಟಿದವರಲ್ಲಿ ಸೀತೆಯೇ ಬಹಳ ಚಿಕ್ಕವಳಾದುದರಿಂದಲೂ ಅತಿ ಮೋಹದಿಂದ ಸಾಕಿದವಳಾದುದರಿಂದಲೂ ಅವಳ ಮದುವೆಗೆ ತಾನೇ ಪ್ರೇರಕನಾದುದರಿಂದಲೂ ನಾರಾಯಣಮೂರ್ತಿ ಸೀತೆಗೆ ಒದಗಿದ ದುರ್ಗತಿಗಾಗಿ ಅಪರಿಮಿತವಾದ ದುಃಖಕ್ಕೆ ಗುರಿಯಾದನು. ಆ ದಂಪತಿಗಳು ಒಳಗೆ ಎಷ್ಟು ದುಃಖಪಟ್ಟರೂ ಮೇಲೆ ಮಾತ್ರ ಮಿಕ್ಕವರಂತೆ ಗಟ್ಟಿಯಾಗಿ ಅಳುತ್ತಿರಲಿಲ್ಲ. ವೆಂಕಟೇಶನು ಒಡಹುಟ್ಟಿದವಳಿಗೆ ಇಂತಹ ವಿಪತ್ತು ಸಂಭವಿಸಿತೆಂಬ ಮಾತನ್ನು ಕೇಳಿದರೂ ಒಂದುಸಾರಿಯಾದರೂ ಬಂದು ನೋಡಿಕೊಂಡು ಹೋಗಲಿಲ್ಲ. ತನ್ನ ಮಗಳು ಹೋದಾಗ ಅವರಿಬ್ಬರೂ ಬಂದು ನೋಡಲಿಲ್ಲವಲ್ಲ ಎಂಬ ಕೋಪದಿಂದ ಅವನ ಎದೆ ಕಲ್ಲಾಗಿದ್ದಿತು.

ಸುಮ್ಮನಿದ್ದು ಆಪತ್ಕಾಲದಲ್ಲಿ ಸಂತೈಸುವುದಕ್ಕೆ ಬದಲಾಗಿ ಅಂತಹ ಸಂಬಂಧವನ್ನು ಮಾಡಿದುದಕ್ಕಾಗಿ ನಾರಾಯಣಮೂರ್ತಿಯನ್ನು ದೂಷಿಸುತ್ತಾ 'ಮಾಡಿದ್ದುಣ್ಣೋ ಮಹರಾಯ' ಎಂದು ಉತ್ತರ ಬರೆದನು. ಆ ಪತ್ರಿಕೆಯ ಮಾತುಗಳು ಆತನಿಗೆ ಶೂಲದಂತಿದ್ದುವು. ಸುಂದರಮ್ಮನು ಸ್ತ್ರೀಜನ್ಮವೆತ್ತಿದ್ದರೂ ಗಂಡನಿಗಿಂತ ಹೆಚ್ಚಾಗಿ ಕಠಿನಹೃದಯೆಯಾಗಿ ಮತ್ಸರ ಸಾಧಿಸುವುದಕ್ಕೆ ಇದೇ ಸಮಯವೆಂದು ತನಗೆ ಖಂಡುಗದಷ್ಟು ದುಃಖವಿದ್ದಾಗ ತನ್ನನ್ನು ಬಂದು ನೋಡದೆ ಹೋದಬಳಿಕ ತಾನುಮಾತ್ರ ಏಕೆ ನೋಡಬೇಕೆಂದು ಅವರ ಮುಂದೆ ಇವರ ಮುಂದೆ ಹೇಳುತ್ತಿದ್ದಳು. ವಿದ್ಯೆಯ ಮಹಿಮೆಯನ್ನು ತಿಳಿಸುದೆ ಪೂರ್ವಕಾಲದಂತೆ ಮೂರ್ಖತನದಲ್ಲಿ ಬೆಳೆದವರು ಕೋಪವನ್ನೇ ಪ್ರಧಾನವಾಗಿಟ್ಟುಕೊಂಡು ಯಾವಾಗಲೂ ಹಗೆತನವನ್ನೇ ಸಾಧಿಸುತ್ತಿರುವರು.

## ಹತ್ತನೆಯ ಪ್ರಕರಣ.

ಎಂತಹ ದುಃಖವಾದರೂ ಬಹುಕಾಲದವರೆಗೆ ಒಂದೇ ಬಗೆಯಾಗಿರಲಾರದು; ದಿನಗಳು ಕಳೆದಹಾಗೆಲ್ಲಾ ದುಃಖವೂ ಅಷ್ಟಕ್ಕಷ್ಟಕ್ಕೆ ಕಡಮೆಯಾಗುತ್ತಾ ಬಂದು ಕಡೆಗೆ ಕಾಣಲೇ ಕಾಣದೆ ಹೋಗಬಹುದು. ಬಂದ ವಿಪತ್ತನ್ನು ತಾಳಲಾರದೆ ಈಗಲೇ ಪ್ರಾಣತ್ಯಾಗಮಾಡುತ್ತೇವೆಂದು ಹೇಳುವವರೂ ಒಂದು ತಿಂಗಳೊಳಗಾಗಿ ದುಃಖವನ್ನೆಲ್ಲಾ ಮರೆತುಬಿಟ್ಟು ದೈವಕಟಾಕ್ಷದಿಂದ ಏನೂ ಆಪತ್ತು ಬಾರದವರಂತೆಯೇ ನಾಲ್ಕು ಜನರಲ್ಲಿ ಸುಖವಾಗಿ ತಿರುಗುವರು; ಸರ್ವದಯಾಪರನಾದ ಈಶ್ವರನು ತನ್ನ ವಿಚಿತ್ರಸೃಷ್ಟಿಯಲ್ಲಿ ಪ್ರಾಣಿಗಳ ದುಃಖವು ಒಂದು ನಿಮಿಷದೊಳಗಾಗಿಯೇ ತಗ್ಗಿ ಮರೆತುಹೋಗುವಂತೆಯೂ ಕಾಲಕ್ರಮದಿಂದ ಸುಖವು ಬೆಳೆದು ದೃಢಪಡುವಂತೆಯೂ ತಕ್ಕ ಸಾಧನ ಸಾಮಗ್ರಿಯನ್ನು ಮಾಡಿರುತ್ತಾನೆ. ಸೀತೆಗೆ ಸಂಭವಿಸಿದ ವಿಪತ್ತನ್ನು ನೆನೆದುಕೊಂಡು ನಾರಾಯಣಮೂರ್ತಿಯೂ ಸತ್ಯವತಿಯೂ ಆರಂಭದಶೆಯೊಳಗೆ ಅನುಭವಿಸಿದ ಖೇದವನ್ನು ನೋಡಿದವರಾರೂ ಅವರು ಪುನಃ ಬೀದಿಯ ಬಾಗಿಲಿಗೆ ಬಂದು ನಾಲ್ವರಲ್ಲಿ ತಲೆಯೆತ್ತಿಕೊಂಡು ತಿರುಗಾಡುತ್ತಾರೆಂದು ತಿಳಿದಿರಲಿಲ್ಲ. ಆದರೂ ಅವರು ದಿನೇದಿನೇ ಸ್ವಲ್ಪ ಧೈರ್ಯವನ್ನು ತಂದುಕೊಂಡು ಆಗ ರಾಜಮಹೇಂದ್ರದಲ್ಲಿ ನಡೆಯುತ್ತಿದ್ದ ಪ್ರಯತ್ನಗಳನ್ನು ಸ್ಮರಿಸಿಕೊಂಡು ಈಗ ಬಂದಿ

ರುವ ವಿಪತ್ತು ಪರಿಹಾರವಾಗಬಹುದಲ್ಲವೇ ಎಂದು ಚಿಂತಿಸುತ್ತಾ ಎದೆಯನ್ನು ಕೊಂಚ ಗಟ್ಟಿಮಾಡಿಕೊಂಡಿದ್ದರು. ಇಷ್ಟರಲ್ಲಿ ರಾಮಸ್ವಾಮಿಗೋಸ್ಕರ ಅವರಿಗೆ ಸ್ವಲ್ಪ ಮನೋವ್ಯಥೆಯೂ ಉಂಟಾಗುತ್ತಿದ್ದಿತು. ಅವನು ತನಗೆ ತಕ್ಕುದಲ್ಲದ ತರಗತಿಗೆ ಸೇರಿದುದರಿಂದ ಪಾಠಗಳನ್ನು ಓದುವ ಶಕ್ತಿ ಇರಲಿಲ್ಲ. ಚಿಕ್ಕಂದಿನಿಂದಲೂ ಭಯಭಕ್ತಿಗಳಿಂದ ಒಂದು ಸ್ಥಳದಲ್ಲಿ ಕಾಲೂರಿ ಕಷ್ಟಪಟ್ಟು ಓದುವುದಕ್ಕೆ ಅವನು ಪ್ರಯತ್ನಿಸಿದವನಲ್ಲ. ಅವನಿಗೆ ಯಾವಾಗಲೂ ವಿದ್ಯೆಯಲ್ಲಿ ಅಸಹ್ಯ. ಒಂದು ದಿನವಾದರೂ ಸರಿಯಾಗಿ ಪಾಠಶಾಲೆಗೆ ಹೋದವನಲ್ಲ. ಮನಸ್ಸು ಬಂದದಿನ ಹೋಗುತ್ತಲೂ ಮನಸ್ಸು ಬಾರದ ದಿನ ಮನೆಯಲ್ಲಿಯೇ ಇರುತ್ತಲೂ ವ್ಯರ್ಥವಾಗಿ ಕಾಲಹರಣ ಮಾಡುತ್ತಿದ್ದನು. ಅಣ್ಣನು ಅದನ್ನು ನೋಡಿ ಪಾಠಶಾಲೆಗೆ ಕ್ರಮವಾಗಿ ಹೋಗೆಂದೂ ಪಾಠಗಳನ್ನು ಓದೆಂದೂ ಗದರಿಸಿಕೊಂಡು ಹೇಳುತ್ತಿದ್ದನು. ಆಗಲೆಲ್ಲಾ ರಾಮಸ್ವಾಮಿ ಕೋಪಿಸಿಕೊಂಡು ಒಂದೆರಡು ಹೊತ್ತು ಊಟಮಾಡದೆ ಮುಸುಕಿ ಹಾಕಿಕೊಂಡು ಒಂದು ಮೂಲೆಯಲ್ಲಿ ಮಲಗಿರುತ್ತಿದ್ದನು. ಸಾವಿತ್ರಿ ಅನ್ನವನ್ನು ಕಲಸಿಕೊಂಡು ಬಂದು, ಗಂಡಹೆಂಡರಿಬ್ಬರೂ ಅನ್ನಹಾಕದೇ ಕಾಯುತ್ತಲ್ಲಾ ಎಂದು ತಮ್ಮನನ್ನು ಹಿಂಸೆಪಡಿಸುತ್ತಾರೆಂದು ಜಗಳವಾಡಿ ಮನೆಯಲ್ಲಿ ಯಾರಿಗೋ ಪ್ರಾಣಸಂಕಟವಾಗಿರುವಂತೆ ಅಳುತ್ತಿದ್ದಳು.

ನಿಜವಾಗಿ ಆಗಾಗ್ಗೆ ಓದಿಕೊಳ್ಳಲೆಂದು ನಾರಾಯಣಮೂರ್ತಿ ತಮ್ಮನ ಮೇಲೆ ಕೂಗಾಡುತ್ತಿದ್ದನು. ಸತ್ಯವತಿ ಒಂದುದಿನವಾದರೂ ಮೈದುನನನ್ನು ಕೆಟ್ಟಮಾತಾಡಲಿಲ್ಲ. ಅಪ್ಪಾ ಅಣ್ಣಾ ಎಂದು ಕರೆಯುತ್ತಾ ಅವನು ನೆಮ್ಮದಿಯಾಗಿದ್ದಾಗ ಒಳ್ಳೆಯ ಮಾತುಗಳಿಂದ ಬುದ್ಧಿ ಹೇಳಿ ಓದಿಕೊ ಎಂದು ಬೇಡಿಕೊಳ್ಳುತ್ತಿದ್ದಳು. ರಾಮಸ್ವಾಮಿ ತನ್ನ ಅಣ್ಣನಮೇಲೆ ಸಿಟ್ಟುಮಾಡಿಕೊಂಡು ಮಲಗಿದ್ದಾಗಲೆಲ್ಲಾ ಸತ್ಯವತಿ ನಾನಾವಿಧದಿಂದ ಅವನನ್ನು ಸಮಾಧಾನಪಡಿಸಿ ಊಟಕ್ಕೆ ಕರೆದುಕೊಂಡು ಬರುತ್ತಿದ್ದಳು. ಹೀಗಿದ್ದರೂ ಸತ್ಯವತಿ ಮೈದುನನನ್ನೂ ನಾದಿನಿಯನ್ನೂ ಸರಿಯಾಗಿ ನೋಡಳೆಂದೂ ತನ್ನ ಗಂಡನು ಸಂಪಾದಿಸಿ ಇಡುತ್ತಾನೆಂದು ಅವಳು ತಲೆಯಲ್ಲಿಯೇ ನಡೆಯುತ್ತಾಳೆಂದೂ ಸಾವಿತ್ರಿಯು ಆಕ್ಷೇಪಣೆಮಾಡುತ್ತಾ ನೆರೆಹೊರೆಯವರಲ್ಲಿ ಸತ್ಯವತಿಯನ್ನು ದೂರುತ್ತಾ ಹೆಣ್ಣುಮಗಳತನವನ್ನು ಅಷ್ಟಕ್ಕಷ್ಟಕ್ಕೆ ಹೆಚ್ಚಾಗಿ ತೋರಿಸುತ್ತಿದ್ದಳು. ವಿದ್ಯಾಬುದ್ಧಿಗಳಿಲ್ಲದೆ ಮೂರ್ಖಳಾದ ಒಬ್ಬ ಹೆಂಗಸು ಮನೆಯಲ್ಲಿದ್ದರೆ ತಾನು ಯಾವಾಗಲೂ ನೆಮ್ಮದಿಯಾಗಿರದೆ ಇಲ್ಲದ ಹೋಗದ ವಿಚಾರವನ್ನು ತಂದಿರಿಸಿಕೊಂಡು ತನ್ನ ಅಧಿಕಾರವನ್ನು ಎಲ್ಲರಮೇಲೆ

ಯೂ ತೋರಿಸುತ್ತಾ ಸಜ್ಜನರಿಗೆ ಸಿವ್ಯಾಕ್ಕರಣವಾಗಿ ಮನಸ್ತಾಪವನ್ನುಂಟುಮಾಡು ತ್ತಾ ಬಾಲಕರು ಮುಂತಾದವರ ವಿದ್ಯಾಬುದ್ಧಿಗಳಿಗೆ ಭಂಗಮಾಡುತ್ತಾ ಕುಟುಂಬ ಕ್ಕೆಲ್ಲಾ ಅಪಾರವಾದ ಆಯಾಸವನ್ನೂ ಹಾನಿಯನ್ನೂ ಉಂಟುಮಾಡುವಳಲ್ಲವೇ? ಸಾವಿತ್ರಿ ತನ್ನ ಮಂಕುತನದಿಂದ ನಾದಿನಿಯ ಮೇಲೆ ತನ್ನ ಅಧಿಕಾರವನ್ನು ತೋರಿಸಿ ತನಗೆ ಹೊಡೆಯುವುದಕ್ಕೂ ಬಯ್ಯುವುದಕ್ಕೂ ಪರಮಸ್ವಾತಂತ್ರ್ಯವುಂಟೆಂದೂ ಹೆಣ್ಣುಮಗಳತನವನ್ನು ಎಷ್ಟು ಅಧಿಕವಾಗಿ ತೋರಿಸಿದರೂ ಅಷ್ಟು ಪ್ರತಿಷ್ಠೆಯೆಂದೂ ಭಾವಿಸಿಕೊಂಡು ಅದುದಕ್ಕೂ ಆಗದುದಕ್ಕೂ ಕೋಪಮಾಡುತ್ತಾ ಸತ್ಯವತಿಯ ಮೇಲೆ ಹಗೆತನವನ್ನೇ ಬೆಳಸುತ್ತಿದ್ದಳು. ಆದರೂ ಆಕೆ ಮಾತ್ರ ಒಂದು ದಿನವೂ ಅತ್ತಿಗೆಯ ಮಾತಿಗೆ ಇದಿರುಮಾತಾಡದೆ ಆಕೆಯ ಮನಸ್ಸನ್ನು ನೋಯಿಸದೆ ದನಕರುಗಳನ್ನೂ ತನ್ನ ಎಳೇ ಮಕ್ಕಳನ್ನೂ ನೋಡಿಕೊಳ್ಳಬೇಕಾಗಿದ್ದರೂ ತೆರವುಮಾಡಿಕೊಂಡು ಅತ್ತಿಗೆಗೂ ಉಪಚಾರ ಮಾಡುತ್ತಿದ್ದಳು. ಸಾಧಾರಣವಾಗಿ ನಮ್ಮಲ್ಲಿ ಮೂರ್ಖರಾದವರಿಗೆ, ಇತರರು ತಮಗೆಷ್ಟು ತಗ್ಗಿನಡೆದರೂ ಅವರಮೇಲೆ ಅಷ್ಟು ದೊಡ್ಡ ಅಧಿಕಾರವನ್ನು ತೋರಿಸಿ ಬಾಯಿಮಾಡುವುದೂ ತಿರುಗಿಬಿದ್ದವರ ತಂಟೆಗೆಮಾತ್ರ ಹೋಗದೆ ಮೆತ್ತಗಿರುವವರನ್ನೇ ಬಾಧಿಸುವುದೂ ಸಹಜವಲ್ಲವೇ? ಅದುದರಿಂದ ಸಾವಿತ್ರಿ ನಾದಿನಿಯ ನಡತೆಯ ವಿಷಯವಾಗಿ ತಪ್ಪು ಹಿಡಿಯುವುದಕ್ಕೆ ಅವಕಾಶ ಸಿಕ್ಕದೇ ಇದ್ದರೂ ಸರಿಯಾದ ಆಚಾರವ್ಯವಹಾರಗಳು ಇಲ್ಲವೆಂದೂ ಭಾಗ್ಯವಂತರ ಮಗಳೆಂದೂ ಗರ್ವವೆಂದೂ ನಾಚಿಕೆಯಿಲ್ಲದೆ ಹತ್ತುಮಂದಿಗಳನ್ನು ಸೇರಿಸಿ ಪಾಠಹೇಳುತ್ತಾ ಇದ್ದಾಳೆಂದೂ ಗೊಣಗುಟ್ಟುತ್ತಿದ್ದಳು. ಅತ್ತಿಗೆ ತನ್ನನ್ನು ಎಷ್ಟು ಆಡಿದರೂ ಸತ್ಯವತಿ ಇದಿರುಮಾತಾಡದೆ ಮನಸ್ಸಿನಲ್ಲಿಯಾದರೂ ಕೋಪವನ್ನು ಇಟ್ಟುಕೊಳ್ಳದೆ ಮೂಗಿಯಂತಿರುತ್ತಾ ಸೀತೆಯ ದುಃಖವನ್ನು ಪರಿಹರಿಸುವುದೇ ತನ್ನ ಕೆಲಸವೆಂದೆಣಿಸಿಕೊಂಡು ಚಿಕ್ಕ ನಾದಿನಿಯ ಸುಖಕ್ಕಾಗಿ ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸುತ್ತಾ ಸ್ವಲ್ಪ ಬಿಡುವಾದಾಗಲೆಲ್ಲಾ ಸೀತೆಗೆ ಓದುಹೇಳುತ್ತಾ ತಾನು ಕೆಲಸಮಾಡುತ್ತಿದ್ದಾಗಲೂ ನಾದಿನಿಯನ್ನು ಹತ್ತಿರ ಇರಿಸಿಕೊಂಡು ನೀತಿಕಥೆ ಮೊದಲಾದುವುಗಳನ್ನು ಹೇಳಿ ಸ್ವಲ್ಪ ಕಾಲದಲ್ಲಿಯೇ ದುಃಖವು ಮರೆತುಹೋಗುವಂತೆ ಮಾಡಿದಳು. ಹೀಗಿರಲಾಗಿ ಮನೆಯಲ್ಲಿ ನಾರಾಯಣಮೂರ್ತಿ ಓದಿಕೊಳ್ಳೆಂದೂ ಪಾಠಶಾಲೆಗೆ ಹೋಗೆಂದೂ ಹೇಳುತ್ತಿದ್ದುದರಿಂದ ರಾಮಸ್ವಾಮಿ ವೇಳೆಗೆ ಸರಿಯಾಗಿ ಊಟವನ್ನು ಮಾತ್ರ ಮಾಡಿ ಟೋಪಿ ಇಟ್ಟುಕೊಂಡು ಪುಸ್ತಕಗಳನ್ನು ಕೈಯಲ್ಲಿ ತೆಗೆದುಕೊಂಡು ಇಷ್ಟಬಂದ ದಿನ ಪಾಠಶಾಲೆಗೆ ಹೋಗುತ್ತಾ ಇಷ್ಟಬಾರದ ದಿನ ಎಲ್ಲಿಗೋ ಹೋಗಿ

ಇಸ್ಪೇಟುಗಳನ್ನು ಆಡಿಕೊಂಡು ಸಾಯಂಕಾಲಕ್ಕೆ ಮನೆಸೇರುತ್ತಾ ದಿನಗಳನ್ನು ಕಳೆಯುತ್ತಿದ್ದನು. ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳು ಆಡಿದುದೇ ಆಟವಲ್ಲದೆ ಭಯವಾಗಲಿ ಅಡ್ಡಿಯಾಗಲಿ ಯಾವುದೂ ಇರಲಿಲ್ಲ. ಏಕೆಂದರೆ ಅನೇಕ ಪಾಠಶಾಲೆಗಳಿರುವುದೇ ಇದಕ್ಕೆ ಮೂಲ. ಉಪಾಧ್ಯಾಯರು ಯಾವ ಹುಡುಗನನ್ನು ಗದರಿಸಿಕೊಂಡರೂ ಆ ಹುಡುಗನು ಓಡಿಹೋಗಿ ಎಲ್ಲಿ ಬೇರೆ ಪಾಠಶಾಲೆಗೆ ಸೇರಿಕೊಳ್ಳುವನೋ ಎಂದು ಭಯಪಡುತ್ತಾ ವಿದ್ಯಾರ್ಥಿಗಳು ಮಠಕ್ಕೆ ಬಂದರೂ ಬಾರದಿದ್ದರೂ ಪಾಠಗಳನ್ನು ಓದಿದರೂ ಓದದಿದ್ದರೂ ನೋಡಿದರೂ ನೋಡದಹಾಗೆ ಸುಮ್ಮನಿರುತ್ತಾ ಬಾಲಕರ ಚಿತ್ತವೃತ್ತಿಯಂತೆಯೇ ನಡೆಯುತ್ತಿದ್ದರು. ಅತ್ತೆಗೊಂದು ಕಾಲ ಸೊಸೆಗೊಂದು ಕಾಲ ಎಂಬಂತೆ ಪಾಠಶಾಲೆಗಳಲ್ಲಿ ಈಗ ಉಪಾಧ್ಯಾಯರ ಕಾಲವು ಹೋಗಿ ವಿದ್ಯಾರ್ಥಿಗಳ ಕಾಲವು ಬಂದು ಉಪಾಧ್ಯಾಯರಿಗೆ ಬಾಲಕರು ಭಯಪಡುವುದಕ್ಕೆ ಬದಲಾಗಿ ಬಾಲಕರಿಗೆ ಉಪಾಧ್ಯಾಯರು ಭಯಪಡಬೇಕಾಯಿತು. ಆದುದರಿಂದ ಓದಿನಲ್ಲಿ ಆಸಕ್ತಿಯುಳ್ಳ ಬುದ್ಧಿವಂತರು ಕೆಲವರು ಹೊರತು ಉಳಿದವರು ಸ್ವೇಚ್ಛೆಯಾಗಿ ಒಂದು ಪಾಠಶಾಲೆಯನ್ನು ಬಿಟ್ಟು ಮತ್ತೊಂದು ಪಾಠಶಾಲೆಗೆ ಹೋಗಿ ಒಂದು ವರುಷದೊಳಗಾಗಿ ಪಟ್ಟಣದಲ್ಲಿರುವ ಪಾಠಶಾಲೆಗಳಲ್ಲೆಲ್ಲಾ ತಿರುಗಿ ಎಲ್ಲಿಯೂ ನಾಲ್ಕು ತಿಂಗಳು ಕಾಲೂರಿ ಓದದೆ ಏತಕ್ಕೂ ಕೆಲಸಕ್ಕೆ ಬಾರದೆ ಪುಂಡರಾಗಿ ಕೆಟ್ಟುಹೋಗುತ್ತಿದ್ದರು. ತಾಯಿತಂದೆಗಳು ಸಹ ಎಲ್ಲಿ ತಕ್ಕ ಉಪಾಧ್ಯಾಯರಿರುವರೋ ಎಲ್ಲಿ ವಿದ್ಯೆ ಚೆನ್ನಾಗಿ ಬರುವುದೋ ಎಂದು ವಿಚಾರಿಸುವುದಕ್ಕೆ ಸಮರ್ಥರಾಗದೆ ಹುಡುಗರಿಗೆ ಎಲ್ಲಿಗೆ ಹೋಗುವುದಕ್ಕೆ ಇಷ್ಟವೋ ಎಲ್ಲಿ ಮಾಸದಕ್ಷಿಣೆ ಕಡಮೆಯೋ ಆ ಪಾಠಶಾಲೆಗೆ ಅವರನ್ನು ಮನಸ್ಸು ಬಂದಂತೆ ಹೋಗುವ ಹಾಗೆ ಬಿಡುತ್ತಿದ್ದರು. ಹೀಗೆ ತಿರುಗಿ ಕೆಟ್ಟುಹೋದವರಲ್ಲಿ ನಮ್ಮ ರಾಮಸ್ವಾಮಿಯೊಬ್ಬನು. ತಮ್ಮ ತಿಳಿವಳಿಕೆಗೆ ತಕ್ಕ ತರಗತಿಗಳಿಗೆ ಸೇರಿ ಸರಿಯಾಗಿ ಓದಿ ಮುಂದಕ್ಕೆ ಬಾರದೆ ದೊಡ್ಡ ತರಗತಿಗೆ ಸೇರಿ ಕಡೆಗೆ ಯಾವ ಕೆಲಸಕ್ಕೂ ಬಾರದೆ ಕೆಟ್ಟುಹೋದ ನಮ್ಮ ರಾಮಸ್ವಾಮಿಯಂತಹರು ಈಗಲೀಗ ಲೆಕ್ಕಕ್ಕೆ ಹೆಚ್ಚಾಗುತ್ತಾ ಬಂದರು. ಅಣ್ಣನ ಕೈಯಿಂದ ಮೂರು ರೂಪಾಯಿಗಳನ್ನು ದಂಡವಾಗಿ ಕೊಡಿಸಿ ಮಧ್ಯತರಗತಿಯ ಪರೀಕ್ಷೆಗೆ ಹೋಗಿ ಪ್ರಶ್ನಪತ್ರಿಕೆಗಳಿಗೆಲ್ಲಾ ಸರಿಯಾದ ಉತ್ತರಗಳನ್ನು ಬರೆದಂತೆ ಬಡಾಯಿ ಹೇಳಿಕೊಳ್ಳುತ್ತಿದ್ದರೂ ಪರೀಕ್ಷೆಯಲ್ಲಿ ಕೃತಾರ್ಥರಾದವರ ಹೆಸರು ಬಂದಾಗ ರಾಮಸ್ವಾಮಿಯ ಹೆಸರು ಬರಲಿಲ್ಲ. ತನ್ನ ಉತ್ತರಪತ್ರಿಕೆಗಳನ್ನು ತಿದ್ದಿದ ಪರೀಕ್ಷಕರು ಸರಿಯಾಗಿ ನೋಡದೆ ಅನ್ಯಾಯ ಮಾಡಿ

ದ್ದಾರೆಂದು ಆತನು ಎಷ್ಟು ಮಂದಿಗಳ ಮುಂದೆ ಹೇಳಿದರೂ ರಾಜಕೀಯ ಪಾಠಶಾಲೆಯಲ್ಲಿ ಐದನೆಯ ತರಗತಿಗೆ ಸೇರುವುದಕ್ಕೆ ಆ ಮಾತು ಬೇರೆ ಸಹಕಾರಿಯಾಗಲಿಲ್ಲ. ಆತನು ಮೊದಲು ಓದುತ್ತಿದ್ದ ತರಗತಿಯಲ್ಲಿಯೇ ಪುನಃ ಓದಲೇ! ಎಂಬ ದುರಭಿಮಾನದಿಂದ ಯಾವ ಪಾಠಶಾಲೆಗೂ ಸೇರದೆ ಕೆಲವು ದಿನಗಳನ್ನು ಕಳೆದು, ಬಳಿಕ ತಾನು ಯಾವುದೋ ಒಂದು ಪಾಠಶಾಲೆಗೆ ಸೇರುವುದಕ್ಕೆ ಪ್ರಯತ್ನಿಸಿದನು. ಆದರೆ ನಾರಾಯಣಮೂರ್ತಿ ತಾನು ಉಪಾಧ್ಯಾಯನಾಗಿದ್ದ ಪಾಠಶಾಲೆಯಲ್ಲೇ ಸೇರೆಂದು ನಿರ್ಬಂಧಪಡಿಸಿದುದರಿಂದ ಮೊದಲನೆಯ ಪ್ರಯತ್ನವನ್ನು ಬಿಟ್ಟು ಉದ್ಯೋಗಗಳನ್ನು ಸಂಪಾದಿಸಿ ಮನೆಗೆ ಚಿನ್ನದ ಕಲಶಗಳನ್ನು ಹಾಕಿಸುತ್ತೇನೆಂದು ಪ್ರಯಾಣಮಾಡಿ ಹೋಗಿ ಶಿರಸ್ತೇದಾರರನ್ನು ಅನುಸರಿಸುವುದಕ್ಕೆ ಮೊದಲು ಮಾಡಿದನು. ಆ ಶಿರಸ್ತೇದಾರನು ಲಂಚವೇ ಉದ್ಯೋಗಧರ್ಮವೆಂದೂ ವ್ಯಭಿಚಾರವೇ ಪುರುಷಧರ್ಮವೆಂದೂ ಎಣಿಸಿದ ಸಿದ್ಧಾಂತದಲ್ಲಿ ಸೇರಿದ ಪೂರ್ವಕಾಲದವನು. ಆದುದರಿಂದ ಈಗಿನ ವಿದ್ಯೆಯನ್ನೂ ಈಗಿನವರ ನಡತೆಗಳನ್ನೂ ಆಕ್ಷೇಪಿಸುತ್ತಾ ತನ್ನ ಹತ್ತಿರಕ್ಕೆ ಬರತಕ್ಕವರ ನಡತೆ ಹೇಗಿದ್ದರೂ ಅವರು ವಿಭೂತಿಯಿಟ್ಟುಕೊಂಡಿದ್ದಾರೆಯೋ ಇಲ್ಲವೋ ಎಂದು ನೋಡುವುದರಲ್ಲಿಯೂ, ಮೀಸೆಗಳನ್ನು ಬೆಳೆಯಿಸಿಕೊಂಡಿದ್ದಾರೆಯೋ ಇಲ್ಲವೋ ಅದನ್ನು ಕಂಡುಹಿಡಿಯುವುದರಲ್ಲಿಯೂ, ಕಚ್ಚೇಪಾವಡೆಯನ್ನು ಹಾಕಿಕೊಂಡಿರುವರೋ ಇಲ್ಲವೋ ಎಂದು ವಿಚಾರಿಸುವುದರಲ್ಲಿಯೂ, ಕುತೂಹಲವುಳ್ಳವನಾಗಿದ್ದನು. ನಮ್ಮ ರಾಮಸ್ವಾಮಿಯು ಈಗ ಆತನ ಅನುಗ್ರಹವನ್ನು ಸಂಪಾದಿಸಿಕೊಳ್ಳುವುದಕ್ಕೆ ತಿರುಗುತ್ತಿದ್ದನಾದುದರಿಂದ ಒಳಗೆ ಭಕ್ತಿ ಇಲ್ಲದಿದ್ದರೂ ಮೇಲೆ ಬೇಕಾದಷ್ಟು ವೇಷಗಳನ್ನು ಹಾಕಿಕೊಂಡು ಅವನಲ್ಲಿಯೇ ಪುಣ್ಯವೂ ಪುರುಷಾರ್ಥವೂ ಇರುವುದೆಂದೆಣಿಸಿ ಸ್ತ್ರೀಯರು ವಿದ್ಯೆಯನ್ನು ಓದಬಾರದೆಂದೂ ಪುರುಷರು ಇಂಗ್ಲಿಷ್ ಓದಬಾರದೆಂದೂ ವಾದಿಸುವುದಕ್ಕೆ ತೊಡಗಿದನು. ಇಷ್ಟೇ ಅಲ್ಲದೆ ಸ್ನಾನವನ್ನು ಮಾಡಿ ಜುಟ್ಟನ್ನು ಒರಸಿ ಗಂಟುಹಾಕಿಕೊಂಡು ದೇವತಾರ್ಚನೆಯನ್ನು ಮಾಡಿ ರಾಮಾಯಣವನ್ನು ಪಾರಾಯಣಮಾಡಿ ಹಗಲೆಲ್ಲಾ ಭಕ್ತಾಗ್ರೇಸರನಾಗಿದ್ದು ರಾತ್ರಿಕಾಲದಲ್ಲಿ ಬೆಲೆವೆಣ್ಗಳ ಮನೆಗೆ ಹೋಗುವ ದೊಡ್ಡಮನುಷ್ಯರನ್ನು ನೋಡಿ ಅವರಂತೆ ತಾನೂ ಪ್ರವರ್ತಿಸಬೇಕೆಂದು ಯೋಚಿಸಿ ರಾಮಸ್ವಾಮಿ ರಾತ್ರಿಕಾಲದ ಸಂಚಾರಕ್ಕೆ ಆರಂಭಿಸಿದನು. ನಾರಾಯಣಮೂರ್ತಿಯೂ ಸತ್ಯವತಿಯೂ ಇದನ್ನೆಲ್ಲಾ ನೋಡಿ ರಹಸ್ಯವಾಗಿ ಆಲೋಚಿಸಿ ಆತನನ್ನು ದುರ್ಮಾರ್ಗದಿಂದ ಹಿಂದಿರುಗಿಸುವುದಕ್ಕಾಗಿ ಹಲವು ಉಪಾಯಗಳನ್ನು ಯೋಚಿಸಿ, ಮೂರುತಿಂಗಳ

ಹಿಂದೆಯೇ ಮೈನೆರೆದಿದ್ದಕಾರಣ ಗಂಡಹೆಂಡಿರನ್ನೊಂದುಗೂಡಿಸುವ ಮಹಾಲಕ್ಷ್ಮ್ಯ ದಕ್ಕೆ ನಿಶ್ಚಯಿಸಿ ಪುರೋಹಿತನು ಇಟ್ಟ ಶುಭಮುಹೂರ್ತದಲ್ಲಿ ಆತನಿಂದ ಪುನಸ್ಸಂಧಾನ ಮಾಡಿಸಿದರು. ಆ ಮರುದಿವಸ ಮೊದಲುಗೊಂಡು ಆತನು ಓದಬೇಡವೆಂದು ಹೆಂಡತಿಗೆ ಆಜ್ಞಾಪಿಸಿ ಪುಸ್ತಕವನ್ನು ಕೈಯಲ್ಲಿ ಮುಟ್ಟಿದಳೆಂದು ತನಗೆ ಅನುಮಾನ ಬಂದರೂ ಶಿಕ್ಷಿಸುತ್ತಾ ಇಲ್ಲದ ದೋಷಗಳನ್ನು ಕಲ್ಪಿಸಿ ಮಾತುಮಾತಿಗೂ ನಿಷ್ಕಾರಣವಾಗಿ ಹೊಡೆಯುತ್ತಾ ಆ ಹುಡುಗಿಗೊಬ್ಬಳಿಗೇ ಅಲ್ಲದೆ ಅಣ್ಣನಿಗೂ ಅತ್ತಿಗೆಗೂ ಸಹ ಮನೋವ್ಯಥೆಯನ್ನುಂಟುಮಾಡುತ್ತಿದ್ದನು. ಇನ್ನು ತನಗೆ ಸಮಯ ಸಿಕ್ಕಿತೆಂದು ಸಾವಿತ್ರಿ ಮೇಲೆದ್ದು ತನಗಿರುವ ಹೆಣ್ಣುಮಗಳತನವನ್ನೆಲ್ಲಾ ನಿರಪರಾಧಿಯಾದ ಆ ಅಬಲೆಯಮೇಲೆಯೇ ತೋರಿಸುತ್ತಾ ತಾನು ಹೊಡೆದು ಬಯ್ದು ಬಾಧಿಸುವುದಲ್ಲದೆ ತಮ್ಮನು ಮನೆಗೆ ಬಂದವೇಳೆ ಇಲ್ಲದ ಚಾಡಿಗಳನ್ನೆಲ್ಲಾ ಕಲ್ಪಿಸಿಕೊಂಡು ಹೇಳಿ ಆತನಿಂದಲೂ ಹಿಂಸೆಗೊಳಿಸುತ್ತಿದ್ದಳು. ನಾರಾಯಣಮೂರ್ತಿ ಅದನ್ನು ನೋಡಿ ಸಹಿಸಲಾರದೆ ಕೆಲವುದಿನ ಸಹೋದರಿಯನ್ನು ಏನೂ ಆಡುವುದಕ್ಕಿಲ್ಲದೆ ಸುಮ್ಮನಿದ್ದರೂ ಅವಳು ಪಡಿಸುವ ಹಿಂಸೆಯನ್ನು ನೋಡಿ ಒಂದುದಿನ ಕೋಪವನ್ನು ತಡೆಯಲಾರದೆ ಆಕೆಯನ್ನು ಮೆಲ್ಲಗೆ ಹೊರಗೆ ಕರೆದು ಛೀಮಾರಿಮಾಡಿದನು. ಆಗ ಆಕೆ ದೊಡ್ಡಬಾಯಿ ಮಾಡಿಕೊಂಡು ಜಗಳವಾಡಿ ಸೊರಸೊರನೆ ಅಳುತ್ತಾ ಎಷ್ಟುಮಂದಿಗಳು ಎಷ್ಟುವಿಧವಾಗಿ ಬೇಡಿಕೊಂಡರೂ ಊಟವನ್ನು ಮಾಡದೆ ಅಯ್ಯೋ ನನ್ನ ತಮ್ಮನು ನನ್ನನ್ನು ಓಡಿಸಿಬಿಟ್ಟನು. ಎಂದು ಬೀದಿಯಲ್ಲಿ ಗೋಳಾಡುತ್ತಾ ಅಮಲಾಪುರದ ಹಡಗನ್ನು ಹತ್ತಿ ಎರಡು ಜಾವದ ವೇಳೆಯಲ್ಲಿ ಅಣ್ಣನ ಹತ್ತಿರಕ್ಕೆ ಹೊರಟು ಹೋದಳು. ವೆಂಕಟೇಶನೂ ತನ್ನ ಮನೆಯಲ್ಲಿ ಕೆಲಸಮಾಡುವವರು ಒಬ್ಬರೂ ಇಲ್ಲದುದರಿಂದ ಅದುವರೆಗೆ ಎರಡು ಮೂರುಸಾರಿ ತಂಗಿಯನ್ನು ತನ್ನ ಬಳಿಗೆ ಬರಹೇಳಿ ಕಾಗದಗಳನ್ನು ಬರೆದಿದ್ದನು. ಇಲ್ಲಿ ಸಾವಿತ್ರಿ ತನಗೆ ಎಷ್ಟು ಸುಖವಾಗಿದ್ದರೂ ಅಣ್ಣನಮೇಲೆಯೂ ಅತ್ತಿಗೆಯ ಮೇಲೆಯೂ ಪ್ರೇಮವನ್ನು ಇಟ್ಟುಕೊಂಡು ಅವರ ಹತ್ತಿರವೇ ತಾನು ಇರಬೇಕೆಂದು ಆಲೋಚಿಸುತ್ತಿದ್ದಳು. ಮೂರ್ಖರಿಗೆ ಮೂರ್ಖರ ಸಂಗಡ ಇರುವುದಕ್ಕೆ ಒಗ್ಗುವಹಾಗೆ ಸಜ್ಜನರ ಸಂಗಡ ಇರುವುದಕ್ಕೆ ಎಂದಿಗೂ ಸರಿಬೀಳದು. ಕಪ್ಪೆಗೆ ಕೆಸರುನೀರು ಇಂಪಾಗುವಂತೆ ಪನ್ನೀರು ಇಂಪಾಗುವುದೇ ?

# ಹನ್ನೊಂದನೆಯ ಪ್ರಕರಣ.

ನಾರಾಯಣಮೂರ್ತಿ ಉಪಾಧ್ಯಾಯನಾಗಿದ್ದರೂ ಸುಮ್ಮನೆ ಕಾಲವನ್ನು ಕಳೆಯಲಿಲ್ಲ. ಉದಯಕಾಲದಲ್ಲಿಯೂ ರಾತ್ರಿಕಾಲದಲ್ಲಿಯೂ ಓದಿ ಆ ಸಂವತ್ಸರವೇ ಮಂಡಲನ್ಯಾಯಸಭೆಯ ಪ್ಲೀಡರ್ ಪರೀಕ್ಷೆಗೆ ಹೋದನು. ಆಗಾಗ್ಗೆ ಸೂರಮ್ಮನ ಮೂಲಕವಾಗಿಯೂ ರಾಮಸ್ವಾಮಿಯ ಮೂಲಕವಾಗಿಯೂ ಬರುವ ಗೃಹಚ್ಛಿದ್ರಗಳಿಂದಲೂ ಕೃಷ್ಣಮೂರ್ತಿ ಹೋದ ವ್ಯಸನದಿಂದಲೂ ವ್ಯಾಸಂಗವು ಸರಿಯಾಗಿ ನಡೆಯದುದರಿಂದ ಪರೀಕ್ಷೆಯಲ್ಲಿ ತಪ್ಪಿಹೋದೇನೆಂದು ಆತನು ಭಯಪಡುತ್ತಾ ಇದ್ದನೇ ಹೊರತು ಕಡೆಗೆ ಹೇಗೋ ಅದಕ್ಕೆ ಬರಬೇಕಾದ ಸಂಖ್ಯೆ ಬಂದುದರಿಂದ ಪರೀಕ್ಷೆಯಲ್ಲಿ ತೇರ್ಗಡೆಯಾದನು. ಈಗಿರುವ ಕೆಲಸವನ್ನು ಹಾಳುಮಾಡಿಕೊಂಡು ಒಳಿಕ ನ್ಯಾಯವಾದಿಯ ಉದ್ಯೋಗದಲ್ಲಿ ಪ್ರವೇಶಿಸಿದರೆ ಸಂಪಾದನೆಯಾದೀತೋ ಆಗಲಾರದೋ ಎಂದು ಸಂಶಯಪಟ್ಟು ಒಂದು ತಿಂಗಳವರೆಗೆ ಆಲೋಚಿಸಿ ಕಡೆಗೆ ಒಂದು ನಿಶ್ಚಯವನ್ನು ಮಾಡಿಕೊಂಡು ಕಷ್ಟಪಟ್ಟು ಒಂದು ತಿಂಗಳ ಸಂಬಳವನ್ನು ಮಾತ್ರ ಕೈಯಲ್ಲುಳಿಸಿಕೊಂಡು ಮಠದಲ್ಲಿ ಉಪಾಧ್ಯಾಯನ ಕೆಲಸವನ್ನು ನೋಡುತ್ತಿದ್ದ ಹದಿನಾಲ್ಕು ತಿಂಗಳಿಗೆ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಪಟ್ಟಾ ತೆಗೆದುಕೊಂಡನು. ಮೊದಲನೆಯ ತಿಂಗಳಲ್ಲಿಯೇ ಆತನಿಗೆ ಮೂವತ್ತು ರೂಪಾಯಿಗಳು ದೊರೆತುವು. ಎರಡನೆಯ ತಿಂಗಳಲ್ಲಿ ಸಂಪಾದನೆಯು ಅದಕ್ಕಿಂತ ಇಮ್ಮಡಿಯಾಯಿತು. ಮೂರನೆಯ ತಿಂಗಳಲ್ಲಿ ನೂರು ರೂಪಾಯಿಗಳವರೆಗೂ ಸಂಪಾದನೆಯಾಯಿತು. ಹೀಗೆ ತಿಂಗಳು ತಿಂಗಳಿಗೆ ಆದಾಯವು ಹೆಚ್ಚಿ ಸಂವತ್ಸರದೊಳಗಾಗಿಯೇ ಎರಡು ಸಾವಿರ ರೂಪಾಯಿಗಳ ವರೆಗೂ ಸಿಕ್ಕಿತು. ಕೆಲವರು ತಮ್ಮ ಶಕ್ತಿಯನ್ನು ಆಲೋಚಿಸಿಕೊಳ್ಳದೆ ಕೆಲಸದಲ್ಲಿ ಪ್ರವೇಶಿಸದೆ ಮುಂದೆ ನಾವು ಸಂಪಾದಿಸುವೆವೋ ಇಲ್ಲವೋ ಎಂದು ಆಧ್ಯೈರ್ಯಗೊಡುವರು. ಆದರೆ ನಿಜವಾಗಿ ಕೆಲಸದಲ್ಲಿ ಪ್ರವೇಶಿಸಿದಮೇಲೆ ವಿಶೇಷವಾಗಿ ಶಕ್ತರಲ್ಲದಿದ್ದರೂ ನ್ಯಾಯಪರರಾಗಿಯೂ ಜಾಗರೂಕರಾಗಿಯೂ ಕೆಲಸ ಮಾಡಿದರೆ ತಾವು ಯೋಚಿಸಿಕೊಂಡಿದ್ದುದಕ್ಕಿಂತಲೂ ಅಧಿಕವಾಗಿಯೇ ಸಂಪಾದಿಸುವುದಕ್ಕೆ ಶಕ್ತರಾಗುವರು. ಈಗ ನಾರಾಯಣಮೂರ್ತಿ ತುಂಬಾಗಟ್ಟಿಗನಾದ ನ್ಯಾಯವಾದಿಯೆಂದು ಪ್ರಸಿದ್ಧಿಯನ್ನು ಹೊಂದಿದನು. ಆತನು ತನ್ನ ಹತ್ತಿರಕ್ಕೆ ಬಂದ ಕಕ್ಷಿಗಾರರ ಸಂಗಡ ನೆಮ್ಮದಿಯಾಗಿ ಮಾತಾಡಿ ಹಳ್ಳಿಗಳಿಂದ ಬಂದವರು ಕೆಲವರೆಷ್ಟು ಜಿಗುಪ್ಸೆಯನ್ನುಂಟುಮಾಡಿದರೂ ಕೋಪಮಾಡಿ

ಕೊಳ್ಳದೆ ಕ್ಷಮಾಗುಣವನ್ನು ಅವಲಂಬಿಸಿ ಅವರು ಕೇಳಿದುದಕ್ಕೆಲ್ಲಾ ಸಮಾಧಾನವನ್ನು ಹೇಳಿ ತಾನು ತಿಳಿದುಕೊಳ್ಳಬೇಕಾದ ಸಂಗತಿಗಳನ್ನೆಲ್ಲಾ ತಿಳಿದುಕೊಂಡು ಅವರನ್ನು ಕಳುಹಿಸುತ್ತಿದ್ದನು. ಮೊಟ್ಟಮೊದಲೇ ಪ್ರತಿಫಲವನ್ನು ಖಂಡಿತವಾಗಿ ನಿಶ್ಚಯಿಸಿಕೊಂಡು ಅವರಿಂದ ಮುಂದಾಗಿ ಸ್ವಲ್ಪಹಣವನ್ನು ತೆಗೆದುಕೊಳ್ಳುತ್ತಿದ್ದನೇಹೊರತು ಪೂರ್ವಕಾಲದ ನ್ಯಾಯವಾದಿಗಳಂತೆ ಕಡಿಮೆಯಾದ ದುಡ್ಡಿಗೆ ಒಪ್ಪಿಕೊಂಡು ಅಕ್ರಮವಾಗಿ ಸ್ಟಾಂಪುಗಳ ಹೆಸರನ್ನು ಹೇಳುತ್ತಲೂ ಇತರರಿಗೆ ಕೊಡಬೇಕಾದ ಮಾಮೂಲು ಎಂದು ಹೇಳುತ್ತಲೂ ಒಂದು ಕುರುಡು ಕವಡೆಯನ್ನಾದರೂ ಹೆಚ್ಚಾಗಿ ತೆಗೆದುಕೊಳ್ಳನು. ಸಾಕ್ಷಿಗಳಿಗೆ ಸುಳ್ಳಾದ ಸಂಗತಿಗಳನ್ನು ಬೋಧಿಸುವುದು, ಕಳ್ಳಪತ್ರಗಳನ್ನು ಪ್ರೋತ್ಸಾಹಪಡಿಸುವುದು, ಇವೇ ಮುಂತಾದ ಕೆಲಸಗಳಲ್ಲಿ ತನಗೆ ಲಕ್ಷರೂಪಾಯಿಗಳ ಆದಾಯವಿದ್ದರೂ ಯಾವಾಗಲೂ ಪ್ರವೇಶಿಸನು. ಆದುದರಿಂದ ಜಮೀನ್ದಾರರೂ ವಿವಾದಗಳನ್ನು ಬೆಳಸಿ ನೂರಾರು ಊರುಗಳಿಗೆ ಹೋಗಿ ತಿರುಗಿಬಂದು ವ್ಯವಹಾರಗಳನ್ನು ತರತಕ್ಕ ಏಜಂಟರೂ ಈತನ ಸಮೀಪಕ್ಕೆ ಬಾರರು. ವ್ಯವಹಾರಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಚೆನ್ನಾಗಿ ಮನೆಯಲ್ಲಿಯೇ ಓದಿಕೊಂಡು ಹೋಗಿ ನ್ಯಾಯಸಭೆಗೆ ಸೇರಿದಮೇಲೆ ನ್ಯಾಯಾಧಿಪತಿಯು ಇಷ್ಟವನ್ನು ಕಂಡುಹಿಡಿದು ಭಯಪಟ್ಟು ಸುಮ್ಮನಿರದೆ ತನ್ನ ಪಕ್ಷದಲ್ಲಿರುವ ಸಾಧನಗಳನ್ನು ತೋರಿಸಿ ಚೆನ್ನಾಗಿ ವಾದಿಸುವುದರಿಂದ ಒಳ್ಳೆಯವರನೇಕರು ಈತನ ಬಳಿಗೆ ಬರುತ್ತಿದ್ದರು. ಹೀಗೆ ಒಳ್ಳೆಯ ಹೆಸರನ್ನು ಸಂಪಾದಿಸಿಕೊಂಡು ನಿಂತಮೇಲೆ ಆತನು ಒಂದು ಒಳ್ಳೆಯಮನೆಯನ್ನು ಹತ್ತು ರೂಪಾಯಿಗಳ ಬಾಡಿಗೆಗೆ ತೆಗೆದುಕೊಂಡು ಅದಕ್ಕೆ ತಕ್ಕಂತೆ ಬೆಂಚುಗಳು ಕುರ್ಚಿಗಳು ಮುಂತಾದುವುಗಳನ್ನೂ ಸಂಪಾದಿಸಿದನು. ಮನೆಯಲ್ಲಿ ಅಡಿಗೆಮಾಡುವುದಕ್ಕೆ ಒಬ್ಬ ಬ್ರಾಹ್ಮಣನನ್ನೂ ಕೆಲಸಮಾಡುವುದಕ್ಕೆ ಮನೆತಪ್ಪಿದ ಒಬ್ಬ ಬ್ರಾಹ್ಮಣಸ್ತ್ರೀಯನ್ನೂ ಗೊತ್ತುಮಾಡಿದನು. ವ್ಯವಹಾರದ ಕೆಲಸಗಳನ್ನು ನೋಡುವುದಕ್ಕೆ ಒಬ್ಬ ಗುಮಾಸ್ತನನ್ನೂ ರಾತ್ರಿ ದೀವಿಗೆ ಹಚ್ಚಿಸುವುದೇ ಮುಂತಾದ ಕೆಲಸಗಳನ್ನು ಮಾಡುವುದಕ್ಕೆ ಒಬ್ಬ ಅಗಸನನ್ನೂ ಏರ್ಪಡಿಸಿದನು. ತಾನು ಸಾಯಂಕಾಲದಲ್ಲಿ ಪ್ರತಿದಿನವೂ ಸಂಗೀತವನ್ನು ಕಲಿತುಕೊಳ್ಳುವುದಕ್ಕೆ ಸಂಬಳಕೊಟ್ಟು ಒಬ್ಬ ಸಂಗೀತಗಾರನನ್ನು ಇಟ್ಟುಕೊಂಡುದಲ್ಲದೆ ಸೀತೆಗೂ ಸತ್ಯವತಿಗೂ ವಿದ್ಯೆಕಲಿಸುವುದಕ್ಕೆ ಗಟ್ಟಿಗಳಾದ ಒಬ್ಬ ಜಾತಿಸ್ತ್ರೀಯನ್ನು ನಿಯಮಿಸಿದನು. ಹೀಗೆ ಸಕಲಸುಖಸಂಪೂರ್ಣವಾದ ಕಾಲದಲ್ಲಿಯೂ ಸತ್ಯವತಿ ಕೆಲಸಕಾರ್ಯಗಳನ್ನು ಮಾಡದೆ ಕಾಲವನ್ನು ವ್ಯರ್ಥವಾಗಿ ಕಳೆಯಲಿಲ್ಲ. ಮನೆಯ

ವೆಚ್ಚವನ್ನೂ ಪಶುಗಳ ಸಂರಕ್ಷಣೆಯನ್ನೂ ತಾನೇ ವಿಚಾರಿಸುತ್ತಾ ಒಂದು ಕಾಸನ್ನಾದರೂ ವ್ಯರ್ಥವಾಗಿ ವೆಚ್ಚಮಾಡುವುದಕ್ಕೆ ಮನಸ್ಸಿಲ್ಲದೆ ಸೇವಕರ ಸಂಬಳ ಭತ್ಯಗಳನ್ನು ತನ್ನ ಕೈಯಿಂದಲೇ ಕೊಡುತ್ತಿದ್ದಳು. ಬಿಸಿಲು ತಂಪಿದಮೇಲೆ ಹೂವಿನ ಗಿಡಗಳಿಗೆ ನೀರೆರೆಯುತ್ತಲೂ ಅಗೆಯುತ್ತಲೂ ಬೆವರು ಬರುವಂತೆ ಕೆಲಸಮಾಡುತ್ತಿದ್ದಳು. ಅವಕಾಶವಾದಾಗ ನೆರೆಹೊರೆಯ ಹೆಂಗಸರಿಗೆ ವಿದ್ಯಾಬುದ್ಧಿಗಳನ್ನು ಹೇಳುತ್ತಲೂ ಇತರ ಸಹಾಯಗಳನ್ನು ಮಾಡುತ್ತಲೂ ಕೈಯಲ್ಲಾದಮಟ್ಟಿಗೆ ಮೇಲುಮಾಡುತ್ತಾ ಇದ್ದಳು. ಅದರಿಂದ ಸುತ್ತುಮುತ್ತಲಿನ ಕುಟುಂಬಗಳಲ್ಲೆಲ್ಲಾ ಆಶ್ಚರ್ಯಕರವಾದ ಬದಲಾವಣೆಯುಂಟಾಗಿ ಎಷ್ಟೋ ಕಲಹಗಳು ಅಡಗಿ ಸುಖವು ಹೆಚ್ಚಾಗುತ್ತಾ ಬಂದಿತು, ನೋಡಿದಿರಾ? ಒಬ್ಬ ಉತ್ತಮ ಸ್ತ್ರೀಯಿಂದ ಎಷ್ಟು ಮಂದಿಗಳಿಗೆ ಎಷ್ಟು ವಿಧಗಳಾದ ಲಾಭಗಳು ಉಂಟಾಗುತ್ತಿವೆ. ಇದನ್ನು ಓದುವುದಕ್ಕೆ ಮನಸ್ಸಿಟ್ಟು ನೀವೆಲ್ಲರೂ ಸತ್ಯವತಿಯ ಹಾಗೆ ಪ್ರವರ್ತಿಸುವುದಕ್ಕೆ ಪ್ರಯತ್ನಮಾಡಿರಿ. ಆ ಬೀದಿಯಲ್ಲಿದ್ದ ಸ್ತ್ರೀಯರಿಗೆಲ್ಲಾ ಸತ್ಯವತಿಯೆಂದರೆ ಪ್ರಾಣವಾಗಿದ್ದುದರಿಂದ ಯಾರಿಗೆ ಯಾವ ಒಳ್ಳೆಯ ವಸ್ತು ಸಿಕ್ಕಿದರೂ ಅವರು ಅದನ್ನು ಸತ್ಯವತಿಗೆ ಕೊಡುತ್ತಿದ್ದರು. ಯಾರು ಯಾವ ಹೊಸ ಒಡವೆಯನ್ನು ಮಾಡಿಸಿಕೊಂಡರೂ ಸತ್ಯವತಿಗೆ ಮೊದಲು ತೋರಿಸುತ್ತಿದ್ದರು. ಅವರಿಗೆ ಯಾವ ಕಷ್ಟ ಬಂದರೂ ಓಡಿಬಂದು ಆಕೆಯೊಡನೆ ಹೇಳುತ್ತಿದ್ದರು. ಎಳೆ ಮಕ್ಕಳಿಗೆ ಸ್ವಲ್ಪ ಇರುಸುಮುರುಸಾಗಿದ್ದರೆ ಆಕೆಯ ಬಳಿಗೆ ಬಂದು ಆಲೋಚಿಸುತ್ತಿದ್ದರು. ಗಂಡನಾಗಲಿ, ಅತ್ತೆಯಾಗಲಿ, ಅತ್ತಿಗೆಯಾಗಲಿ, ಹೊಡೆದರೂ ಬಯ್ದರೂ ಬಂದು ಆಕೆಯೊಡನೆ ಹೇಳಿಕೊಂಡು ಅಳುತ್ತಿದ್ದರು. ಆಗ ಆಕೆ ಅವರನ್ನು ಒಳ್ಳೆಯ ಮಾತುಗಳಿಂದ ಸಮಾಧಾನಪಡಿಸಿ ಬುದ್ಧಿವಾದಗಳನ್ನು ಹೇಳಿ ಸಂತೋಷಪಡಿಸಿ ಪುನಃ ಕಳುಹಿಸುತ್ತಿದ್ದಳು. ನೆರೆಹೊರೆಯವರು ಜಗಳವಾಡಿಕೊಂಡು ತನ್ನೊಂದಿಗೆ ಹೇಳಿಕೊಳ್ಳುವುದಕ್ಕೆ ಬಂದಾಗ ಎಲ್ಲರಿಗೂ ಹೇಳುವಂತೆ ಅವರಿಗೂ ಹೇಳಿ ಸಮಾಧಾನಪಡಿಸಿ ನಗೆಮೊಗದಿಂದ ಅವರನ್ನು ಕಳುಹಿಸುತ್ತಿದ್ದಳು. ಯಾರಾದರೂ ದುರ್ಮಾರ್ಗದಲ್ಲಿ ಪ್ರವೇಶಿಸಿದರೆ ಸಾಧ್ಯವಾದ ಮಟ್ಟಿಗೆ ಪ್ರಯತ್ನಮಾಡಿ ನಯಭಯಗಳಿಂದ ಅವರಿಗೆ ಬುದ್ಧಿಯನ್ನು ಹೇಳಿ ಸನ್ಮಾರ್ಗಕ್ಕೆ ತರುತ್ತಿದ್ದಳು. ಬಡವರಿಗಾರಿಗಾದರೂ ರೋಗಗಳಾಗಲಿ ಇತರ ಕಷ್ಟಗಳಾಗಲಿ ಬಂದಾಗ ಅವರ ಮನೆಗಳಿಗೆ ತಾನು ಹೋಗಿ ಆದರಿಸಿ ಪಥ್ಯಪಾನಗಳನ್ನು ವಿಚಾರಿಸಿ ಅವರ ಮಕ್ಕಳನ್ನು ತನ್ನ ಮನೆಗೆ ಎತ್ತಿಕೊಂಡು ಬಂದು ಹಾಲು ಕುಡಿಸಿ ತಿಂಡಿಯನ್ನು ಇಕ್ಕಿಸುತ್ತಿದ್ದಳು. ಹೀಗೆ ಸುಖವಾಗಿರುವ ಕಾಲ

ದಲ್ಲಿಯೇ ಪುನಃ ಸತ್ಯವತಿಗೆ ಗರ್ಭನಿಂತಿತು. ಆದರೂ ಸುಖವು ಸರ್ವದಾ ಒಂದೇ ಬಗೆಯಾಗಿರದು. ಸುಖದಲ್ಲಿ ಕಷ್ಟವೂ ಕಷ್ಟದಲ್ಲಿ ಸುಖವೂ ಮಧ್ಯೆಮಧ್ಯೆ ಬರುತ್ತಲೇ ಇರುವುವು. ಸತ್ಯವತಿಯ ತಂದೆಯಾದ ರಾಘವಯ್ಯನಿಗೆ ಒಂದು ದಿನ ರಾತ್ರಿ ಗುಂಡಿಗೆಯಲ್ಲಿ ನೋವು ಒಂದು ಆಕಸ್ಮಿಕವಾಗಿ ಸ್ವರ್ಗಸ್ಥನಾದನು. ಈ ದುಃಖಸಮಾಚಾರ ಹೇಳುವುದೂ ಕೇಳುವುದೂ ಒರೆಯುವುದೂ ಕಷ್ಟವಾಗಿರುವದಾದುದರಿಂದ ಆ ಕುಟುಂಬಕ್ಕೆ ಉಂಟಾದ ವಿಚಾರವನ್ನು ವಾಠಕರೇ ಊಹಿಸಿಕೊಳ್ಳಲೆಂದು ಬಿಟ್ಟುಬಿಟ್ಟೆನು.

## ಹನ್ನೆರಡನೆಯ ಪ್ರಕರಣ.

ಸತ್ಯವತಿಯು ತಂದೆಯ ಮರಣವಾರ್ತೆಯನ್ನು ಕೇಳಿದಾಗ ಸಾಮಾನ್ಯಸ್ತ್ರೀಯರಂತೆ ಎದೆ ಬಡಿದುಕೊಳ್ಳುತ್ತಲೂ ತಲೆ ಬಿರಿಹೊಯ್ದುಕೊಳ್ಳುತ್ತಲೂ ಗಟ್ಟಿಯಾಗಿ ಅಳಲಿಲ್ಲ. ದುಃಖವನ್ನೆಲ್ಲಾ ಒಳಗೆ ನುಂಗಿ ಕೇಳಿದ ಸ್ಥಳದಲ್ಲಿಯೇ ವಿಷಾದಪಟ್ಟು ಗೋಡೆಯೊರಗಿಕೊಂಡು ಮಾತಿಲ್ಲದೆ ಕಣ್ಣೀರನ್ನು ಸುರಿಸುತ್ತಾ ಕುಳಿತಿದ್ದಳು. ಆಕೆಯು ಗಟ್ಟಿಯಾಗಿ ಅಳಲಿಲ್ಲವಾದುದರಿಂದ ಆಕೆಗೆ ದುಃಖವು ಕಡಮೆಯೆಂದು ಯಾರೂ ತಿಳಿಯಕೂಡದು. ದಹಿಸಿಕೊಂಡು ಹೋಗುವ ಆಕೆಯ ಮನಸ್ಸಿನ ಪರಿತಾಪವನ್ನು ಹೃದಯದಲ್ಲಿ ಹೊಕ್ಕು ನೋಡಬೇಕೇ ಹೊರತು ಬೇರೊಂದು ವಿಧದಿಂದ ತಿಳಿಯುವುದಕ್ಕೆ ಶಕ್ಯವಲ್ಲ. ನಾರಾಯಣಮೂರ್ತಿಯೂ ಮಾವನ ನಿಮಿತ್ತವಾಗಿ ಮನಸ್ಸಿನಲ್ಲಿ ತಂಬಾ ವ್ಯಸನಪಟ್ಟನಲ್ಲದೆ ಮೇಲೆಮಾತ್ರ ಸ್ವಲ್ಪವೂ ವ್ಯಸನವನ್ನು ತೋರಿಸಲಿಲ್ಲ. ಸತ್ಯವತಿಯು ಒಳಗೆ ತನಗೆಷ್ಟು ದುಃಖವಿದ್ದರೂ ಮೇಲೆ ಪ್ರಕಾಶ ಮಾಡದೆ ಗಂಡನಿಗೂ ಮಗನಿಗೂ ನಗೆಮೊಗವನ್ನು ತೋರಿಸುತ್ತಾ ಗುಟ್ಟಾಗಿದ್ದಳು. ಆದರೆ ಮನೋವ್ಯಾಧಿಗಳು ಮಾತ್ರ ಒಳಗೆ ತಮ್ಮ ಕೆಲಸವನ್ನು ಮಾಡದೆ ಸುಮ್ಮನಿರಲಿಲ್ಲ. ಗರ್ಭವತಿಯಾಗಿದ್ದುದರಿಂದ ಆಕೆಯ ದೇಹವು ಬಡವಾದ ಸಂಗತಿ ಯಾರಿಗೂ ಗೊತ್ತಾಗಲಿಲ್ಲ. ಆಗ ಮಗುವಿಗೆ ಎರಡನೆಯ ವರ್ಷವಾದುದರಿಂದ ಮೆಲ್ಲಮೆಲ್ಲಗೆ ನಡೆಯುತ್ತಾ ಓಡುತ್ತಾ, ನೋಡುವುದಕ್ಕೆ ಮುದ್ದುಮುದ್ದಾಗಿದ್ದನು. ಆ ಮಗುವಿನ ಆಟಗಳನ್ನು ನೋಡುತ್ತಿದ್ದಕಾರಣ ಸತ್ಯವತಿಯು ಹಾಗಿದ್ದಳೇ ಹೊರತು ಇಲ್ಲದಿದ್ದರೆ ಕೂಡಲೇ ಮಂಚವನ್ನು ಹತ್ತಿರುತ್ತಿದ್ದಳು. ಆಕೆಗೆ

ದಿನಗಳು ತುಂಬಿದಮೇಲೆ ಒಂದುದಿನ ಸುಖಪ್ರಸವವಾಯಿತು. ಈಸಾರಿ ಸ್ತ್ರೀಶಿಶು ಜನನ. ಜಾತಿ ವೈದ್ಯವನ್ನು ತಿಳಿದ ಸೂಲಗಿತ್ತಿಯು ಹತ್ತಿರವೇ ಇದ್ದಳು. ಹರಿಗೆಯ ಮನೆ ದೊಡ್ಡದಾಗಿದ್ದಿತು. ಶುದ್ಧವಾದ ಗಾಳಿ ಪ್ರವೇಶಿಸುವ ಹಾಗೆ ಆ ಮನೆಗೆ ಅನೇಕ ಮಾರ್ಗಗಳಿದ್ದುವು. ದೇಹಾರೋಗ್ಯಕ್ಕೆ ಭಂಗವನ್ನುಂಟುಮಾಡುವ ಕುಂಪಟಿಯ ಹೊಗೆ ಮುಂತಾದವುಗಳೊಂದೂ ಇರಲಿಲ್ಲ. ಹೀಗೆ ಮೇಲಣ ಸುಖಗಳು ಎಷ್ಟಿದ್ದರೂ ಒಳಗೆ ನೆಮ್ಮದಿಯಿಲ್ಲದುದರಿಂದ ನೀರಾದ ನಾಲ್ಕನೆಯ ದಿನವೇ ಜ್ವರವೂ ತಲೆನೋವೂ ಬಂದು ಸತ್ಯವತಿಗೆ ನಿಶ್ಶಕ್ತಿಯನ್ನುಂಟುಮಾಡುತ್ತಾ ಬಂದುವು. ನಾರಾಯಣಮೂರ್ತಿಯು ಎಷ್ಟು ಹಣವನ್ನು ವೆಚ್ಚಮಾಡಿ ಘನವೈದ್ಯರಿಂದ ಔಷಧಗಳನ್ನು ಕೊಡಿಸಿದರೂ ದೇಹವು ಸ್ವಸ್ಥವಾಗದೆ ದಿನಕ್ರಮದಿಂದ ಶರೀರದಲ್ಲಿ ತುಂಬಾ ನೋವು ಒಂದುದಲ್ಲದೆ ರಾತ್ರಿಕಾಲಗಳಲ್ಲಿ ಜ್ಞಾನವಿಲ್ಲದೆ ತಪ್ಪು ಮಾತುಗಳನ್ನು ಆಡುವುದಕ್ಕೆ ಪ್ರಾರಂಭಿಸಿದಳು. ಆಕೆಯು ಕೆಲವು ವೇಳೆ ದೇಹಸ್ಮರಣೆಯಿಲ್ಲದೆ ಈ ಲೋಕವನ್ನೇ ಮರೆತು ಇರುತ್ತಿದ್ದಳು. ಹೀಗೆ ಕೆಲವು ದಿನಗಳು ಕಳೆದ ಬಳಿಕ ವೈದ್ಯರೂ ಸಹ ಆಕೆ ಬದುಕುವಳೆಂಬ ಆಸೆಯನ್ನು ಬಿಟ್ಟು ದೇವರ ಮೇಲೆ ಭಾರವನ್ನು ಹಾಕಿ ಔಷಧಗಳನ್ನು ಮಾತ್ರ ಕುಡಿಸಿ ಪೋಷಣನಿಮಿತ್ತವಾಗಿ ಯವೆಯ ಗಂಜಿಯನ್ನು ಗಂಟೆಗೊಂದುಸಾರಿ ಕೊಡಿಸುತ್ತಿದ್ದರು. ಮೊಟ್ಟ ಮೊದಲು ವಮನವಾಗುತ್ತಿದ್ದುದರಿಂದ ಯವೆಯ ಗಂಜಿಯು ದಕ್ಕದಿದ್ದರೂ ಕ್ರಮವಾಗಿ ಆ ಗಂಜಿಯು ಸ್ವಲ್ಪ ಆಧಾರವಾಗಿ ಕೆಲವು ಸುಗುಣಗಳು ಕಾಣುತ್ತಾ ಬಂದುವು. ಆಗ ಸೀತೆಯೂ ಸುಬ್ರಹ್ಮಣ್ಯನೂ ಅತ್ತಿಗೆಯ ಮಂಚದ ಹತ್ತಿರವೇ ಸದಾ ಕಾದುಕೊಂಡು ಕುಳಿತಿದ್ದು ಆಕೆಗೆ ಉಪಚಾರಗಳನ್ನು ಮಾಡುತ್ತಿದ್ದರು. ರಾಮಸ್ವಾಮಿಯು ಪ್ರಾತಃಕಾಲದಲ್ಲಿ ಒಂದುಸಾರಿ ಕಿರುಮನೆಗೆ ಹೋಗಿ ನೋಡಿ ಬುಡುಬುಡಿಕೆ ರಾಗಗಳನ್ನೆಳೆದು ಹೋಗುತ್ತಾ ಬಂದರೂ ಮೈಲಿಗೆಯಾದೀತೆಂಬ ಭಯದಿಂದ ಭೋಜನವಾದ ಬಳಿಕ ತಾನು ಆ ಮನೆಗೆ ಹೊಕ್ಕು ನೋಡದೆ ಹೆಂಡತಿಯನ್ನೂ ಹೋಗಲೀಸದೆ ನಿರ್ಬಂಧಪಡಿಸುತ್ತಿದ್ದನು. ಮಹಾಲಕ್ಷ್ಮಿಯು ಸತ್ಯವತಿಯನ್ನು ನಿಜವಾಗಿ ಹೆತ್ತ ತಾಯಿಯಂತೆ ನೋಡಿಕೊಂಡು ಪ್ರೀತಿಸುತ್ತಾ ಇದ್ದಳಾದುದರಿಂದ ತಾನು ಒಳಗೆ ಹೋಗದೆ ಇರುವುದಕ್ಕೆ ಮನಸ್ಸಿಲ್ಲದೆ ಗಂಡನಿಗೆ ಹೆದರಿ ಆತನು ಮನೆಯಲ್ಲಿರುವವರೆಗೆ ಸುಮ್ಮನಿದ್ದರೂ ಗಂಡನು ಹೊಸಲು ದಾಟಿದೊಡನೆಯೇ ಓರಗಿತ್ತಿಯ ಕಿರುಮನೆಯೊಳಗೆ ಹೊಕ್ಕು ಮುಖದ ಮೇಲೆ ಮುಖವನ್ನಿಟ್ಟುಕೊಂಡು ಅಳುತ್ತಾ ಭಯಪಟ್ಟು ನಿಂತಿರುತ್ತಿದ್ದಳು. ಬಳಿಕ ನಾರಾಯಣ

ಮೂರ್ತಿಯು ತನ್ನ ಕೆಲಸವನ್ನು ಬಿಟ್ಟುಬಿಟ್ಟು ರಾತ್ರಿಯೂ ಹಗಲೂ ಹೆಂಡತಿಯ ಮಂಚದ ಹತ್ತಿರವೇ ಇದ್ದು ನಿದ್ರಾಹಾರಗಳಿಲ್ಲದೆ ರಾತ್ರಿ ಎರಡು ಜಾವದ ವೇಳೆಯಲ್ಲಾದರೂ ವೈದ್ಯನ ಮನೆಗೆ ಓಡಿಹೋಗುತ್ತಾ ವೈದ್ಯನು ಯಾವ ಪಥ್ಯದ ವಸ್ತುವು ಆಗಬೇಕೆಂದರೂ ಅವುಗಳಿಗಾಗಿ ಆಗಲೇ ಹೋಗಿ ತರುತ್ತಿದ್ದನು. ಈಗ ಸತ್ಯವತಿಯ ಹತ್ತಿರ ಕಾದಿರುವುದಕ್ಕಾಗಲಿ ಪಥ್ಯಪಾನಗಳನ್ನು ಒದಗಿಸುವುದಕ್ಕಾಗಲಿ ವೈದ್ಯನ ಹತ್ತಿರ ಔಷಧಗಳನ್ನು ತರುವುದಕ್ಕಾಗಲಿ ಪರಿಚಾರಕರಿಗೆ ಕೆಲಸವಿಲ್ಲ. ಪಟ್ಟಣದಲ್ಲಿ ಆಕೆಯ ಗುರುತನ್ನು ಕಂಡಿರುವವರೊಳಗೆ ಆಕೆಯ ಮೇಲೆ ಪ್ರೀತಿಯಿಲ್ಲದವರು ಒಬ್ಬರೂ ಇಲ್ಲವಾದುದರಿಂದ ಎಷ್ಟೋಮಂದಿ ರಾತ್ರಿಯೂ ಹಗಲೂ ಗುಂಪುಗುಂಪಾಗಿ ಬಂದು ಸತ್ಯವತಿಯ ಸ್ಥಿತಿಯನ್ನು ನೋಡಿ ಕಣ್ಣೀರು ಸುರಿಸುತ್ತಾ ಆಕೆಗೆ ಬೇಕಾದುದನ್ನು ತರುವುದಕ್ಕೆ ಸಿದ್ಧರಾಗಿದ್ದರು. ಸತ್ಯವತಿಯು ತನಗೆ ಜ್ಞಾನ ಬಂದಾಗ ಕಣ್ಣೀರನ್ನು ಒರಸಿಕೊಳ್ಳುತ್ತಾ ನಿಂತುಕೊಂಡಿದ್ದ ಗಂಡನ ಮುಖವನ್ನು ನೋಡಿ–ವ್ಯಸನವನ್ನು ಬಿಟ್ಟು ನ್ಯಾಯಸಭೆಗೆ ಹೋಗಿ ಕೆಲಸವನ್ನು ನೋಡಿಕೊಳ್ಳಬೇಕೆಂದೂ ತನಗೆ ಪ್ರಾಣಭಯವೇನೂ ಇಲ್ಲವೆಂದೂ ಸೀತೆಯನ್ನು ನೋಡಿ—ಊಟಕ್ಕೆ ಹೋಗೆಂದೂ, ಮಹಾಲಕ್ಷ್ಮಿಯನ್ನು ಅಳಬೇಡವೆಂದೂ, ಪರಿಚಾರಕರನ್ನು ನೋಡಿ–ಅಳುವುದನ್ನು ಬಿಟ್ಟು ಹೋಗಿ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಿರೆಂದೂ, ನೆರೆಹೊರೆಯವರನ್ನು ನೋಡಿ–ನನಗೋಸ್ಕರ ನಿಮಗೆಲ್ಲರಿಗೂ ಶ್ರಮವೆಂದೂ ಕೆಲವು ಸಮಯಗಳಲ್ಲಿ ಸನ್ನೆಗಳಿಂದಲೂ ಕೆಲವು ವೇಳೆ ಹೀನಸ್ವರದಿಂದಲೂ ಹೇಳುತ್ತಿದ್ದಳು. ಆಕೆಯ ಬಾಯಿಂದ ಆ ಮಾತುಗಳು ಬರುವಾಗ ಎಲ್ಲರಿಗೂ ಎದೆಯೊಡೆದುಹೋಗಿ ದುಃಖವು ಒಳಗಿನಿಂದ ಉಕ್ಕಿ ಬರಲಾಗಿ ಬಹುಪ್ರಯಾಸದಿಂದ ಕೈಕಾಲಾಡದಿರಲು ಬಿಟ್ಟು ಹೋಗುವುದಕ್ಕೆ ಬುದ್ಧಿಯುಂಟಾಗದೆ ಚಿತ್ರಪ್ರತಿಮೆಗಳಂತೆ ನಿಂತು ಕಣ್ಣೀರು ಬಿಡುತ್ತಿದ್ದರು. ಕೆಲವು ದಿನಗಳು ಹೀಗಿದ್ದ ಬಳಿಕ ದೈವಾನುಗ್ರಹದಿಂದ ರೋಗವು ಗುಣಮುಖಕ್ಕೆ ಬರಲಾಗಿ ಎಲ್ಲರಿಗೂ ಸ್ವಲ್ಪ ಆಸೆಹುಟ್ಟಿ ಮುಖದಲ್ಲಿ ಸಂತೋಷವೂ ಕಾಣಬರುತ್ತಿದ್ದಿತು. ಆದರೆ ಆಕೆ ನಡುಮನೆಗೆ ಬಂದು ಮೆಲ್ಲಗೆ ತಿರುಗಾಡುವಾಗ್ಯೆ ಮೂರುತಿಂಗಳ ಮೇಲಾಯಿತು. ಆಗ ಎಳೆಗೂಸಿಗೆ ಹಾಲೆರೆದು ಸಾಕುವುದೂ ಚೊಚ್ಚಲು ಮಗುವನ್ನು ತಾಯಿಯ ಹತ್ತಿರ ಅಳದ ಹಾಗೆ ಸಮಾಧಾನಪಡಿಸಿ ಕಂಗೆಡದಂತೆ ಮಾಡುವುದೂ ಅವಳ ರೋಗಕ್ಕಿಂತಲೂ ಹೆಚ್ಚಾಗಿದ್ದುವು. ಆದುವರೆಗೆ ವೈದ್ಯನು ಆಕೆಗೆ ನೀರನ್ನು ಎರೆಯಿಸಲಿಲ್ಲ. ಆ ಮೂರುತಿಂಗಳಲ್ಲಿಯೂ ನಾರಾ

ಯಣಮೂರ್ತಿಯು ಒಂದುದಿನವಾದರೂ ಸಭೆಗೆ ಹೋಗಿ ಕೆಲಸವನ್ನು ಮಾಡಲಿಲ್ಲ ವಾದುದರಿಂದ ಕಕ್ಷಿಗಾರರು ಮತ್ತೊಬ್ಬ ನ್ಯಾಯವಾದಿಯ ಬಳಿಗೆ ಹೋಗಬೇಕಾಯಿತು. ಸುಬ್ರಹ್ಮಣ್ಯನು ಓದುವುದನ್ನು ಬಿಟ್ಟು ಮನೆಯಲ್ಲಿಯೇ ಇದ್ದುಕೊಂಡು ತನ್ನೊಂದಿಗೆ ಓದುತ್ತಿದ್ದ ಸೋಮಸುಂದರನೂ ತಾನೂ ನಾರಾಯಣಮೂರ್ತಿಯೊಡನೆ ಸತ್ಯವತಿಗೆ ಉಪಚಾರವನ್ನು ಮಾಡುತ್ತಿದ್ದರು. ಸತ್ಯವತಿಗೆ ಸ್ನಾನವಾದಮೇಲೆ ನಾರಾಯಣಮೂರ್ತಿಯು ವೈದ್ಯನಿಗೆ ತಾನು ಸಂಪಾದಿಸಿದ್ದುದರಲ್ಲಿ ಎರಡುಸಾವಿರ ರೂಪಾಯಿಗಳನ್ನು ಕೊಟ್ಟು ಆತನ ಸಾಲವನ್ನು ತಾನೆಂದಿಗೂ ತೀರಿಸಿಕೊಳ್ಳಲಾಗಲಾರದೆಂದೂ ಬಹುವಂದನೆಗಳನ್ನು ಮಾಡಿದನು. ಅಷ್ಟು ರೋಗವು ಬಂದು ವಾಸಿಯಾದಮೇಲೆ ಉತ್ಸವಪೂರ್ವಕವಾಗಿ ನಾಮಕರಣವನ್ನು ಮಾಡುವುದಕ್ಕೆ ಮನಸ್ಸಿಲ್ಲದೆ ಸುಮ್ಮನೆ ಆ ಮಗುವನ್ನು ಮುತ್ತಜ್ಜಿಯ ಹೆಸರಿನಲ್ಲಿ ಶ್ಯಾಮಲಾಂಬೆ, ಎಂದು ಕರೆಯುವುದಕ್ಕೆ ಮೊದಲುಮಾಡಿದರು. ಸತ್ಯವತಿಗೆ ದೇಹವು ಸ್ವಸ್ಥವಾದುದರಿಂದ ಆ ಪಟ್ಟಣದ ನಿವಾಸಿಗಳೆಲ್ಲರೂ ತಮ್ಮ ಮನೆಯಲ್ಲಿ ಯಾರಿಗೋ ಪ್ರಾಣಾಪಾಯವುಂಟಾಗಿದ್ದು ಬದುಕಿದಂತೆ ಸಂತೋಷಪಟ್ಟರು. ಭೂಮಿಯಮೇಲೆ ಜನ್ಮವೆತ್ತಿದ ಒಳಿಕ ಪುರುಷರಾದರೂ ಸ್ತ್ರೀಯರಾದರೂ ಸಕಲಜನರಿಂದಲೂ ಹೀಗಲ್ಲವೆ ಹೊಗಳಿಸಿಕೊಳ್ಳಬೇಕು ?

# ಹದಿಮೂರನೆಯ ಪ್ರಕರಣ.

ಸತ್ಯವತಿಗೆ ದೇಹದಲ್ಲಿ ದಿನೇದಿನೇ ರಕ್ತವೃದ್ಧಿಯಾಗುತಾ ಬಲವೂ ಬರಲಾರಂಭಿಸಿತು. ಆದರೆ ನಾರಾಯಣಮೂರ್ತಿ ಮಾತ್ರ ಹೆಂಡತಿಗೆ ಆಲಸ್ಯವಾದ ದಿನಗಳಲ್ಲಿ ರಾತ್ರಿ ನಿದ್ರೆಯಿಲ್ಲದುದರಿಂದಲೂ ಕಾಲಕಾಲಕ್ಕೆ ಸರಿಯಾಗಿ ಊಟವಿಲ್ಲದುದರಿಂದಲೂ ಮುಖ್ಯವಾಗಿ ಮನಸ್ಸಿನೊಳಗಣ ಚಿಂತೆಗಳಿಂದಲೂ ದೇಹವು ದಿನೇ ದಿನೇ ಬಡವಾಗಿ ತಿಂದ ಅನ್ನವು ಅರಗದೆ ಕಾಲುಗಳಲ್ಲಿ ನೋವೂ ಗುಂಡಿಗೆಯಲ್ಲಿ ಶೂಲೆಯೂ ಉಂಟಾಗಿ ಶುಷ್ಕವಾಗುತ್ತಾ ಬಂದನು. ಸತ್ಯವತಿಗೆ ರೋಗವು ಎಲ್ಲಿ ಮರುಕಳಿಸೀತೋ ಎಂಬ ಭಯದಿಂದ ಆತನು ತನ್ನ ದೇಹಸ್ಥಿತಿಯನ್ನು ಹೆಂಡತಿಯೊಡನೆ ಹೇಳದೆ ಮರೆಮಾಡಿಕೊಂಡಿದ್ದನು. ಆದರೆ ಹೇಳದಿದ್ದಮಾತ್ರದಿಂದ ರೋಗವು ಅಡಗಿರಲಾರದು. ಹೇಗೂ ಸತ್ಯವತಿಯು ಅದನ್ನು ತಿಳಿದುಕೊಂಡು

ಗಂಡನ ಬಲಹೀನತೆಯನ್ನೂ, ಬಡವಾಗಿರುವಿಕೆಯನ್ನೂ ಕಂಡು ಹಿಡಿದು ಮನಸ್ಸಿ
ನಲ್ಲಿ ದುಃಖಪಟ್ಟು-ಶೀಘ್ರವಾಗಿ ವೈದ್ಯನನ್ನು ಕರೆಯಿಸಿ ಔಷಧವನ್ನು ತೆಗೆದುಕೊ
ಳ್ಳಿರಿ ಎಂದು ನಿತ್ಯವೂ ಬಲಾತ್ಕಾರಮಾಡಲಾರಂಭಿಸಿದಳು. ಆತನು ಹತ್ತುದಿನ ಆ
ಸ್ಥಿತಿಯಲ್ಲಿಯೇ ಸಭೆಗೆ ಹೋಗಿ ಕೆಲಸ ನೋಡುತ್ತಿರುವುದಕ್ಕೆ ಪ್ರಯತ್ನಿಸಿದನು.
ಆಯಾಸವು ಹೆಚ್ಚಾಗುತ್ತಬಂದಿತು. ಆದರೂ ಎಲ್ಲಿಯೂ ಕುಳಿತುಕೊಳ್ಳದೆ
ಒಂದುದಿನ ಮನೆಗೆ ಬಂದನು. ಅಂದಿನಿಂದ ಪೂರಾ ಬೀದಿಯ ಮುಖವನ್ನು ನೋ
ಡುವುದಕ್ಕೂ ಶಕ್ತಿಯಿಲ್ಲದವನಾದನು. ಆತನ ರೋಗವು ಕೆಲವು ದಿನಗಳಲ್ಲಿ ವಾ
ಸಿಯಾಗತಕ್ಕುದಲ್ಲವೆಂದೂ ವೈದ್ಯ ಮುಂತಾದವರಿಗಾಗಿ ಹಣವು ವಿಶೇಷವಾಗಿ
ಬೇಕೆಂದೂ ಸತ್ಯವತಿಯು ನೋಡಿದ್ದೇ ಯೋಚಿಸಿ ಹೇಗಾದರೂ ಮನೆಯ ವೆಚ್ಚ
ವನ್ನು ಕಡಿಮೆ ಮಾಡಬೇಕೆಂದು ನಿಶ್ಚಯಿಸಿಕೊಂಡಳು. ಔಷಧ ನಿಮಿತ್ತವಾಗಿ ತತ್
ಕ್ಷಣ ಮೂವತ್ತು ರೂಪಾಯಿಗಳು ಬೇಕಾದುವು. ನಾರಾಯಣಮೂರ್ತಿಯ
ಪೆಟ್ಟಿಗೆಯಲ್ಲಿ ನಾಲ್ಕು ರೂಪಾಯಿಗಳಿಗಿಂತ ಹೆಚ್ಚಾಗಿರಲಿಲ್ಲ. ಅದುವರೆಗೂ ಆದ
ಸಂಪಾದನೆಯಲ್ಲಿ ಉಳಿಸಿಕೊಂಡುದುದೆಲ್ಲಾ ಸತ್ಯವತಿಗೆ ರೋಗಬಂದಾಗಲೇ ವೆಚ್ಚ
ವಾಗಿ ಹೋಗಿದ್ದಿತು. ಬಡ್ಡಿಯನ್ನು ಕೊಟ್ಟು ಸಾಲವನ್ನು ಮಾಡುವುದು ಸತ್ಯ
ವತಿಗೆ ಎಷ್ಟು ಮಾತ್ರವೂ ಇಷ್ಟವಾಗುವುದಲ್ಲ. ಆದುದರಿಂದ ಸತ್ಯವತಿಯು ತನ್ನ
ತವರುಮನೆಯವರು ತನಗೆ ಕೊಟ್ಟಿದ್ದ ಒಡವೆಯೊಂದನ್ನು ಎಂಭತ್ತು ರೂಪಾಯಿ
ಗಳಿಗೆ ಮಾರಿ ಔಷಧಗಳಿಗಾಗಿ ವೈದ್ಯನಿಗೆ ಕೊಟ್ಟಳು. ಆ ರೂಪಾಯಿಗಳನ್ನು
ಎಲ್ಲಿಂದ ತಂದೆ ಎಂದು ನಾರಾಯಣಮೂರ್ತಿಯು ಹೆಂಡತಿಯನ್ನು ಕೇಳಿದನು. ಆದರೆ
ಆಕೆಯು ಹೇಳದೆ ಇಂತಹ ವಿಷಯಗಳಲ್ಲಿ ನೀವು ಈಗ ನಿಮ್ಮ ಮನಸ್ಸನ್ನು ಆಯಾ
ಸಪಡಿಸಲಾಗದೆಂದೂ ದೇಹಸ್ಥಿತಿಯು ನೆಮ್ಮದಿಯಾದ ಬಳಿಕ ಅದನ್ನೆಲ್ಲಾ ಸಾವ
ಕಾಶವಾಗಿ ಹೇಳುವೆನೆಂದೂ ತಿಳಿಸಿದಳು. ಆ ಬಳಿಕ ಒಂದುದಿನ ಸತ್ಯವತಿಯು
ಗಂಡನೊಂದಿಗೆ ಆಲೋಚಿಸಿ ಸಾಧಕ ಬಾಧಕಗಳನ್ನು ಆತನಿಗೆ ಬೋಧಿಸಿ ಆತನ
ಇಷ್ಟವನ್ನು ಕರ್ತವ್ಯವೆಂದು ನಿಶ್ಚಯಿಸಿ ಪರಿಚಾರಕರಾಗಿದ್ದ ಆ ಬ್ರಾಹ್ಮಣ ಬ್ರಾಹ್ಮಣಿ
ಯರನ್ನು ಒಂದುದಿನ ಕರೆದು ತಮ್ಮ ಸ್ಥಿತಿಯನ್ನು ಅವರಿಗೆ ತಿಳಿಸಿ ಕೆಲವು ದಿನಗಳವರೆಗೆ
ಬೇರೊಂದುಕಡೆಯಲ್ಲಿ ಕೆಲಸನೋಡಿಕೊಳ್ಳಿರೆಂದು ಅವರ ಸಂಗಡ ಹೇಳಿದಳು. ಅವ
ರು ಆಕೆಯ ಮಾತನ್ನು ಕೇಳಿದೊಡನೆಯೇ ಒಳಗಿನಿಂದ ದುಃಖವು ಉಬ್ಬಿಉಬ್ಬಿಬರಲು
ಕಣ್ಣೀರನ್ನು ಸುರಿಸಿ ಗಟ್ಟಿಯಾಗಿ ಅಳುತ್ತಾ ಯಜಮಾನರವರ ಕಾಯಿಲೆ ವಾಸಿಯಾ
ಗುವವರೆಗೂ ತಾವು ಸಂಬಳದಾಸೆಯಿಲ್ಲದೆಯೇ ಕೆಲಸಮಾಡುವೆವೆಂದೂ ಬೇಕಾಗಿ

ದ್ದರೆ ತಮ್ಮ ಹತ್ತಿರ ಇದ್ದ ರೂಪಾಯಿಗಳನ್ನೂ ಸಹ ಕೊಡುವೆನೆಂದೂ ಬಹುವಿಧವಾಗಿ ಬೇಡಿಕೊಂಡರು. ಆದರೆ ಸತ್ಯವತಿಯು ಒಳ್ಳೆಯ ಮಾತುಗಳಿಂದ ಅವರನ್ನು ಸಮಾಧಾನಪಡಿಸಿ ಕಣ್ಣುಗಳಲ್ಲಿ ನೀರು ಸುರಿಸುತ್ತಾ ಎಷ್ಟೋ ಕಷ್ಟದಿಂದ ಅವರನ್ನು ಸಂತೈಸಿ ಕೆಲವುದಿನ ಮತ್ತೊಂದು ಸ್ಥಳದಲ್ಲಿರುವುದಕ್ಕೆ ಅವರನ್ನು ಒಡಂಬಡಿಸಿದಳು. ಅವರು ತಾವೆಲ್ಲಿದ್ದರೂ ಬಂದು ನಿತ್ಯವೂ ಆ ದಂಪತಿಗಳಿಗೆ ಉಪಚಾರವನ್ನು ಮಾಡಿ ಹೋಗುವುದಕ್ಕೆ ಮಾತ್ರ ಅಪ್ಪಣೆ ಕೊಡಬೇಕೆಂದು ಆಕೆಯನ್ನು ಬೇಡಿಕೊಂಡು ಅವಳ ಅನುಮತಿಯನ್ನು ಪಡೆದು ಮನಸ್ಸನ್ನು ಸಮಾಧಾನಪಡಿಸಿಕೊಂಡು ಎಳೆಮಕ್ಕಳು ತಂದೆತಾಯಿಗಳನ್ನು ಬಿಡುವಾಗ ದುಃಖಪಡುವಂತೆ ದುಃಖಪಡುತ್ತಾ ಆಚೆಗೆ ಹೋದರು. ಆ ಬಳಿಕ ಸತ್ಯವತಿಯು ಒಬ್ಬರಾದಮೇಲೊಬ್ಬರಂತೆ ಪರಿಚಾರಕರನ್ನೆಲ್ಲಾ ತಪ್ಪಿಸಿದಳು. ಆದರೆ ಅವರೆಲ್ಲರೂ ಆಕೆಯಲ್ಲಿ ಮಾತೃಸ್ನೇಹವುಳ್ಳವರಾಗಿ ಪ್ರತಿದಿನವೂ ಎರಡುಮೂರು ಸಾರಿ ಬಂದು ಸ್ವಲ್ಪಹೊತ್ತು ಕುಳಿತಿದ್ದು ತಾವು ಮಾಡಬೇಕಾದ ಕೆಲಸವೇನಾದರೂ ಇದೆಯೆ ಎಂದು ಕೇಳಿ ಹೋಗುತ್ತಿದ್ದರು. ಆಮೇಲೆ ಸ್ಥಳವನ್ನು ಬದಲಾಯಿಸಬೇಕೆಂದು ನಿಶ್ಚಯಿಸಿ ಸತ್ಯವತಿಯು ಆ ಬೀದಿಯಲ್ಲಿಯೇ ಚಿಕ್ಕದಾಗಿದ್ದರೂ ಒಳ್ಳೆಯ ಗಾಳಿ ಬರುವುದಕ್ಕೆ ಅನುಕೂಲವಾಗಿದ್ದ ಬೇರೊಂದು ಮನೆಯನ್ನು ಎರಡು ರೂಪಾಯಿಗಳ ಬಾಡಿಗೆಗೆ ತೆಗೆದುಕೊಂಡು ಅಲ್ಲಿಗೆ ಕುಟುಂಬ ಸಮೇತವಾಗಿ ಹೊರಟುಹೋದಳು. ಈ ಹೊಸಮನೆಯಲ್ಲಿ ಈಗ ಆ ಮನೆಯಲ್ಲಿರುವ ಬೆಂಚುಗಳನ್ನೂ ಕುರ್ಚಿಗಳನ್ನೂ ಇಟ್ಟುಕೊಳ್ಳುವುದಕ್ಕೆ ಸ್ಥಳವಿಲ್ಲವಾದುದರಿಂದ ಮುಖ್ಯವಾಗಿ ಬೇಕಾದುವುಗಳನ್ನು ಇಟ್ಟುಕೊಂಡು ಮಿಕ್ಕವುಗಳನ್ನೆಲ್ಲಾ ನೂರುರೂಪಾಯಿಗಳಿಗೆ ಮಾರಿಬಿಟ್ಟಳು. ಅದೇ ಸಮಯದಲ್ಲಿ ಸೂರಮ್ಮನು ಮುಟ್ಟಾದಳು. ಸತ್ಯವತಿಯು ಏನೂ ಲೋಪವಿಲ್ಲದೆ ನಡೆಸಬೇಕಾದ ಕಾರ್ಯಗಳನ್ನು ನಡೆಸಿದರೂ ಸೂರಮ್ಮನ ತಾಯಿಯು ತನ್ನ ಮಗಳಿಗೆ ಯಾವ ಭಾಗದಲ್ಲಿಯೂ ಸರಿಯಾಗಿ ನಡೆಯಲಿಲ್ಲವೆಂದೂ ಅಷ್ಟೆ ಅಕ್ಕರೆ ವಿನೋದಗಳು ಒಂದೂ ಇಲ್ಲವೆಂದೂ ಬೀದಿಬೀದಿಯಲ್ಲಿ ಎಲ್ಲರ ಸಂಗಡಲೂ ಹೇಳಲಾರಂಭಿಸಿದಳು. ಮೂಢರು ತಮ್ಮ ವಿನೋದಗಳನ್ನೂ ತಮ್ಮ ಕಾರ್ಯಗಳನ್ನೂ ನೋಡಿಕೊಳ್ಳುವರೇ ಹೊರತು ಹೆರರ ಅನುಕೂಲವನ್ನೂ ಸಾಧಕಬಾಧಕಗಳನ್ನೂ ಸ್ವಲ್ಪವಾದರೂ ವಿಚಾರಿಸರು. ಅಂತಹ ಕಷ್ಟಕಾಲದಲ್ಲಿಯೂ ಆ ದಂಪತಿಗಳು ತಮ್ಮ ಕಷ್ಟವನ್ನು ಒಂದು ಮೂಲೆಯಲ್ಲಿಟ್ಟು ಸೂರಮ್ಮನ ತಾಯಿಯ ನಿರ್ಬಂಧದಿಂದಲೂ ಅದು ಕರ್ತವ್ಯವಾದುದರಿಂದಲೂ ಸುಬ್ರಹ್ಮಣ್ಯನ ಗರ್ಭಾಧಾನಮಹೋತ್ಸವವನ್ನೂ ನೆರವೇರಿಸಿ

ದರು. ಎಷ್ಟು ಮಾಡಿದರೂ ಕೃತಜ್ಞತೆಯಿಲ್ಲದೆ ಆಗಿನ ಸ್ಥಿತಿಯನ್ನೂ ವಿಚಾರಿಸದೆ ಆ ಗಯ್ಯಾಳಿಯು ಎರಡು ಭಕ್ಷ್ಯಗಳನ್ನು ಮಾಡಲಿಲ್ಲವೆಂದೂ ತನ್ನ ಮಗಳಿಗಿಟ್ಟ ಮಧುರೆಯ ಸೀರೆ ಒಳ್ಳೆಯದಲ್ಲವೆಂದೂ ಸೆರಗಿಗೆ ಎರಡು ರೂಪಾಯಿಗಳನ್ನೇ ಕಟ್ಟಿದರೆಂದೂ ಅತೃಪ್ತಿಕರವಾದ ಮಾತುಗಳನ್ನಾಡಿ ಆ ವಧೂವರರ ಮನಸ್ಸುಗಳಿಗೆ ಖೇದವನ್ನುಂಟುಮಾಡಿದಳು. ಎಲೆ ದಡ್ಡತನವೇ ! ನಿನ್ನ ಮಹಿಮೆ ಎಷ್ಟು ಅನಿವಾರ್ಯವಾದುದು? ನೀನಿದ್ದ ಕಡೆ ವಿವೇಕ ಮುಂತಾದುವುಗಳೊಂದೂ ತಲೆಯನ್ನಾದರೂ ತೋರಿಸುವುದಿಲ್ಲವಲ್ಲವೇ ? ಈಗ ಘನವೈದ್ಯನು ಔಷಧವನ್ನು ಕೊಡುತ್ತಿದ್ದರೂ ನಾರಾಯಣಮೂರ್ತಿಗೆ ಸ್ವಲ್ಪವೂ ಗುಣವಾಗಲಿಲ್ಲ, ವಮನಕ್ಕೂ ಪ್ರಾರಂಭವಾಯಿತು. ಅಲ್ಲದೆ ಬಾಯಿಗೆ ಅನ್ನ ರುಚಿಸದೆಯೂ ಹಸಿವಿನ ಹೆಸರೇ ಇಲ್ಲದೆಯೂ ಇದ್ದಿತು; ವೈದ್ಯನು ಒಂದು ರೋಗಕ್ಕೆ ಔಷಧವನ್ನು ಕೊಟ್ಟರೆ ಮತ್ತೊಂದು ರೋಗವು ಪ್ರಬಲವಾಗುತ್ತಿದ್ದಿತು. ಇಂತಹ ಸಮಯದಲ್ಲಿ ಸತ್ಯವತಿಯ ಮನಸ್ಥಿತಿಯನ್ನು ವರ್ಣಿಸುವುದಕ್ಕೆ ಯಾರಿಗೂ ಶಕ್ಯವಲ್ಲ. ಬೆಂಕಿಯಲ್ಲಿ ಹಾಕಿ ಹೊರಳಿಸಿದರೂ ಆಕೆಯ ಮನಸ್ಸಿಗೆ ಅಷ್ಟು ಪರಿತಾಪವುಂಟಾಗುತ್ತಿರಲಿಲ್ಲ. ಅಷ್ಟು ದುಃಖವಿದ್ದರೂ ಅದನ್ನೆಲ್ಲಾ ಒಳಗೆ ನುಂಗಿ ಮೇಲೆ ಧೈರ್ಯವನ್ನವಲಂಬಿಸಿ ಸಂತೋಷವಾಗಿದ್ದಂತೆಯೇ ಗಂಡನಿಗೆ ಕಾಣಿಸಿಕೊಳ್ಳುತ್ತಿದ್ದಳು. ಆದರೂ ಹೊಸಹೊಸದಾಗಿ ರಕ್ತ ಹುಟ್ಟುತ್ತಿದ್ದ ಆಕೆಯ ದೇಹವು ಪುನಃ ದಿನೇದಿನೇ ಒಡವಾಗಲು, ಗಂಡನು ಅಧೈರ್ಯಪಡದೆ ಇರುವುದಕ್ಕಾಗಿ ಇಲ್ಲದ ನಗೆಯನ್ನು ಮೇಲೆತೋರಿಸುತ್ತಾ ಇದ್ದರೂ ಮನಸ್ಸಿನಲ್ಲಿ ವ್ಯಸನದ ಗುರುತುಗಳು ಸ್ಪಷ್ಟವಾಗಿ ಕಾಣಬರುತ್ತಿದ್ದುವು ಸತ್ಯವತಿಯು ತನ್ನನ್ನು ನೋಡಿದಾಗ ನಾರಾಯಣಮೂರ್ತಿಯು ತನಗೆಷ್ಟು ಚಿಂತೆಯುಂಟಾದರೂ ಮುಖವನ್ನು ಹಿಂದಿರುಗಿಸಿಕೊಂಡು ಕಣ್ಣೀರನ್ನು ಕರೆಯುತ್ತಿದ್ದನೇ ಹೊರತು ಆಕೆಗೆ ಕಾಣುವಂತೆ ಇದಿರಾಗಿ ಯಾವಾಗಲೂ ದುಃಖಪಡುತ್ತಿರಲಿಲ್ಲ. ಒಂದೊಂದುವೇಳೆ ಸತ್ಯವತಿಯು ತನಗೆ ದುಃಖವು ದುಸ್ಸಹವಾದರೆ ಯಾವುದೋ ಕೆಲಸದ ನೆವವನ್ನು ಕಲ್ಪಿಸಿಕೊಂಡು ದೊಡ್ಡಿಯೊಳಗೆ ದೂರವಾಗಿ ಹೋಗಿ ಯಾರೂ ನೋಡದಂತೆ ಸ್ವಲ್ಪಹೊತ್ತು ದುಃಖಪಟ್ಟು ಕಣ್ಣೀರನ್ನು ಒರಸಿಕೊಂಡು ಪತಿಸೇವೆಯನ್ನು ಮಾಡುವುದಕ್ಕಾಗಿ ಪುನಃ ಬರುತ್ತಿದ್ದಳು. ಈ ಸಮಯದಲ್ಲಿ ಸೂರಮ್ಮನ ತಾಯಿಯು ಸುಬ್ರಹ್ಮಣ್ಯನು ತನ್ನನ್ನು ಏನೋ ಎಂದನೆಂದು ಕೋಪಿಸಿಕೊಂಡು ಯಾರಿಗೂ ಹೇಳದೆ ಮಗಳನ್ನು ಅಲ್ಲಿಯೇ ಬಿಟ್ಟುಬಿಟ್ಟು ತನ್ನ ತವರುಮನೆಗೆ ಓಡಿಹೋದಳು. ಆದುದರಿಂದ ಸೂರಮ್ಮನು ಉದಯಾಸ್ತಮಾನಗಳಲ್ಲಿಯೂ ತಾಯಿಗಾಗಿ ಶೋಕ

ಪಡುವುದಕ್ಕೆ ಪ್ರಾರಂಭಿಸಿ ರೋಗಿಗೆ ನಿದ್ರೆಯೂ ಇಲ್ಲದಂತೆ ಮಾಡಿದಳು. ಸತ್ಯವತಿಯು ತನ್ನ ಮಕ್ಕಳನ್ನು ಸಮಾಧಾನಪಡಿಸಿಕೊಳ್ಳಬೇಕಾಗಿದ್ದುದರಿಂದಲೂ ಯಾವಾಗಲೂ ಗಂಡನ ಸಮೀಪದಲ್ಲಿದ್ದು ಆತನಿಗೆ ಉಪಚಾರಗಳನ್ನು ಮಾಡಬೇಕಾಗಿದ್ದುದರಿಂದಲೂ ಮಹಾಲಕ್ಷ್ಮಿಯು ಗಂಡನ ಬಾಧೆಯಿಂದ ಯಾವ ಕೆಲಸವನ್ನೂ ಮಾಡುವುದಕ್ಕೆ ಬರುತ್ತಿರಲಿಲ್ಲವಾದುದರಿಂದಲೂ ಗಂಡನು ಮನೆಯಲ್ಲಿಲ್ಲದಾಗ ಬಂದರೂ ಕೆಲಸಮಾಡಿ ಕೊಡುವುದಕ್ಕೆ ಶಕ್ತಳಾಗದವಳಾಗಿದ್ದುದರಿಂದಲೂ ಗಯ್ಯಾಳಿಯಾದ ಸೂರಮ್ಮನು ಇದ್ದರೂ ಇಲ್ಲದವಳಂತೆಯೇ ಆಗಿದ್ದುದರಿಂದಲೂ ಮನೆಯ ಕೆಲಸವೆಲ್ಲಾ ಸೀತೆಯ ಮೇಲೆಯೇ ಬಿದ್ದಿತು. ಪ್ರಾಣಕ್ಕೆ ಸಮಾನಳಾದ ಆ ಮೋಹದ ನಾದಿನಿ ಹಾಗೆ ಕಷ್ಟಪಡುವುದು ಸತ್ಯವತಿಗೆ ಎಳ್ಳಷ್ಟುಮಾತ್ರವೂ ಇಷ್ಟವಲ್ಲದಿದ್ದರೂ ಮಾಡುವವರಿಲ್ಲದೆ ನಾದಿನಿಗೆ ಕಷ್ಟ ಬಂದಿತಲ್ಲ ಎಂದು ಒಳಗೆ ಸ್ವಲ್ಪ ವ್ಯಸನಪಡುತ್ತಾ ಪಥ್ಯಪಾನಗಳನ್ನು ಮಾಡುವ ಕೆಲಸದಲ್ಲಿ ತನಗೆ ಅವಕಾಶವಾದಾಗಲೆಲ್ಲಾ ಸೀತೆಗೆ ಸ್ವಲ್ಪ ಸಹಾಯವನ್ನು ಮಾಡುತ್ತಿದ್ದಳು. ಸುಬ್ರಹ್ಮಣ್ಯನು ಬೇಕಾದಾಗಲೆಲ್ಲಾ ವೈದ್ಯನ ಮನೆಗೆ ಹೋಗಿ ಔಷಧಗಳನ್ನು ತಂದು ಕೊಡುತ್ತಾ ಪಥ್ಯಪಾನಗಳಿಗೆ ಬೇಕಾದ ಹಾಲು ಮುಂತಾದುವುಗಳನ್ನು ತಂದುಕೊಡುತ್ತಾ ಬಾಹ್ಯಾದಿಗಳಿಗಾಗಿ ಹೋಗಬೇಕಾದಾಗ ಅಣ್ಣನನ್ನು ಎಬ್ಬಿಸಿ ಮಲಗಿಸುತ್ತಾ ಕಷ್ಟಪಡುತ್ತಿದ್ದನು ಆ ಕಷ್ಟಕಾಲದಲ್ಲಿ ಆತನ ಸಹಪಾಠಿಯಾದ ಸೋಮಸುಂದರನೂ ಸಹ ಆಪದ್ಬಂಧುವಾಗಿ ಸುಬ್ರಹ್ಮಣ್ಯನಂತೆಯೇ ಕಷ್ಟಪಟ್ಟು ಸಹಾಯ ಮಾಡುತ್ತಿದ್ದನು. ಅದುವರೆಗೆ ಬಂಧುತ್ವವನ್ನು ವಿಚಾರಿಸಿ ತಿಳಿದುಕೊಂಡು ತಿಂದು ಉಂಡು ತೇಗಿ ಹೋಗುತ್ತಿದ್ದ ನೆಂಟರೊಬ್ಬರೂ ಆಗ ಮುಖವನ್ನೇ ತೋರಿಸಲಿಲ್ಲ. ಪರಮಮಿತ್ರರಂತೆ ಕಾಣಬರುತ್ತಿದ್ದ ಹಣವಂತರೂ ಸಹ ತಾನೇನಾದರೂ ಕೊಡಬೇಕಾದೀತೋ ಏನೋ ಎಂಬ ಭಯದಿಂದ ಮನೆಗೆ ಬರುವುದನ್ನೇ ಬಿಟ್ಟುಬಿಟ್ಟರು. ಸತ್ಯವತಿಯ ಒಡವೆಗಳೆಲ್ಲಾ ಒಂದೊಂದಾಗಿ ವರ್ತಕರ ಪಾಲಾದುವು. ಮನೆಯಲ್ಲಿ ಅಣ್ಣನು ಅಷ್ಟು ರೋಗದಲ್ಲಿ ನರಳುತ್ತಾ ಬಿದ್ದಿದ್ದರೂ ರಾಮಸ್ವಾಮಿ ಸ್ವಲ್ಪವಾದರೂ ವ್ಯಸನಪಡದೆ ಅವು ಇಲ್ಲವೆಂದೂ ಅವು ಇಲ್ಲವೆಂದೂ ದೋಷಗಳನ್ನು ಹೇಳಿ ಹೇಗೋ ಊಟಮಾಡಿ ಒಂದು ಕುರುಡುಕವಡೆಯನ್ನಾದರೂ ಸಂಪಾದಿಸದಿದ್ದರೂ ಕಾಲಕ್ಕೆ ಸರಿಯಾಗಿ ಹೋಗದಿದ್ದರೆ ಶಿರಸ್ತೇದಾರರು ಕೋಪಮಾಡುವರೆಂದು ಹೆಂಡತಿಯ ಮೇಲೆ ನಾಲ್ಕುಸಾರಿ ಕೂಗಾಡಿ ಮನೆಗೆ ಬಾರದೆ ನಿಶ್ಚಿಂತನಾಗಿ ತನ್ನ ಸ್ನೇಹಿತರೊಂದಿಗೆ ತಿರುಗಾಡುತ್ತಿದ್ದನು. ತಮ್ಮನನ್ನು ತುಂಬ ಕಷ್ಟಪಡಿಸುವರೆಂಬ ಸುದ್ದಿಯನ್ನು

ಕೇಳಿ ಸಾವಿತ್ರಿಯು ಪುನಃ ಹಿಂದಿರುಗಿ ಬಂದಳು. ಆದುದರಿಂದ ಸೀತೆಗೆ ಸ್ವಲ್ಪ ವಿಶ್ರಾಂತಿ ದೊರೆಯಲು ಅತ್ತಿಗೆಯೊಂದಿಗೆ ಅಣ್ಣನ ಹತ್ತಿರವೇ ಕಾದುಕೊಂಡಿರುವುದಕ್ಕೆ ಅವಕಾಶವಾಯಿತು. ಆಗ ಕೈಯ್ಯಲ್ಲಿದ್ದ ಹಣವೆಲ್ಲಾ ವೆಚ್ಚವಾಗಿ ಹೋದುದರಿಂದಲೂ ಮಾರುವುದಕ್ಕೆ ಸತ್ಯವತಿಯ ಮೈಮೇಲೆ ಏನೂ ಇಲ್ಲದಿದ್ದುದರಿಂದಲೂ ತಿಂಡಿಗೆ ಬೇಕಾದಷ್ಟು ಮಂದಿಗಳಿದ್ದರೂ ಸಂಪಾದಿಸಿ ತರತಕ್ಕ ಪ್ರಯೋಜಕರೊಬ್ಬರೂ ಇರಲಿಲ್ಲವಾದುದರಿಂದಲೂ ಮುಂದೆ ಹೇಗೆ ನಡೆಯುವುದೆಂಬುದು ತೋರದೆ ಸತ್ಯವತಿಯು ಸೀತೆಯೊಡನೆಯೂ ಸುಬ್ರಹ್ಮಣ್ಯನೊಡನೆಯೂ ರಹಸ್ಯವಾಗಿ ಹೇಳಿ ವ್ಯಸನಪಟ್ಟಳು. ಸುಬ್ರಹ್ಮಣ್ಯನು ಆದಿನವೇ ಹೋಗಿ ತಾನು ಪ್ರತಿದಿನವೂ ರಾತ್ರಿ ಕಾಲದಲ್ಲಿ ಒಂದು ಘಂಟೆಯ ಹೊತ್ತು ಒಬ್ಬ ಧನಿಕನ ಮಗನಿಗೆ ಪಾಠ ಹೇಳುವಂತೆಯೂ ಅವರು ತನಗೆ ತಿಂಗಳಿಗೆ ನಾಲ್ಕು ರೂಪಾಯಿಗಳನ್ನು ಕೊಡುವಂತೆಯೂ ನಿಷ್ಕರ್ಷೆ ಮಾಡಿಕೊಂಡನು. ಸೀತೆಯೂ ಸಹ ತಾನು ಸ್ವಲ್ಪ ಓದು ಕಲಿತವಳಾಗಿದ್ದುದರಿಂದಲೂ ಕಸೂತಿ ಕೆಲಸದಲ್ಲಿ ಸ್ವಲ್ಪ ಪ್ರವೀಣೆಯಾದುದರಿಂದಲೂ ಆಗತಾನೆ ಹೊಸದಾಗಿ ಇಸ್ಲೀನು ಸ್ಥಾಪಿಸಲ್ಪಟ್ಟ ಬಾಲಿಕಾಪಾಠಶಾಲೆಯಲ್ಲಿ ಉಪಾಧ್ಯಾಯಿನಿಯಾಗಿರಲು ನಿಶ್ಚಯಿಸಿಕೊಂಡು ಅಣ್ಣನಿಗೂ ಅತ್ತಿಗೆಗೂ ತನ್ನ ಅಭಿಪ್ರಾಯವನ್ನು ತಿಳಿಸಿ ಅವರ ಅನುಮತಿಯನ್ನು ಪಡೆದು, ತಿಳಿಯದವರು ತನ್ನನ್ನು ಒಂದುವೇಳೆ ನೋಡಿ ನಕ್ಕು ದೂಷಿಸಿದರೂ ಅವರ ಮಾತುಗಳನ್ನು ತಾನು ಕಿವಿಯಲ್ಲಿ ಕೇಳಬಾರದೆಂದು ಮನಸ್ಸನ್ನು ದೃಢಪಡಿಸಿಕೊಂಡು ಒಂದು ಪತ್ರಿಕೆಯನ್ನು ಬರೆದು ಪಾಠಶಾಲಾಕಾರ್ಯನಿರ್ವಾಹಕರ ಕೈಗೆ ಕೊಡುವುದೆಂದು ಸುಬ್ರಹ್ಮಣ್ಯನ ಕೈಗೆ ಕೊಟ್ಟಳು. ಅಷ್ಟರಲ್ಲಿ ನಾರಾಯಣಮೂರ್ತಿಗೆ ದೇಹಾರೋಗ್ಯವಿಲ್ಲವೆಂಬ ವರ್ತಮಾನವನ್ನು ಕೇಳಿ ನೋಡುವುದಕ್ಕೆ ಬಂದ ಕಕ್ಷಿಗಾರನೊಬ್ಬನು ಆತನ ಸ್ಥಿತಿಯನ್ನು ನೋಡಿ ಬಹುವ್ಯಸನಪಟ್ಟು ಹಿಂದೆ ಯಾವುದೋ ಒಂದು ವ್ಯವಹಾರದಲ್ಲಿ ತಾನು ಕೊಡಬೇಕಾಗಿದ್ದ ನೂರು ರೂಪಾಯಿಗಳನ್ನು ಸತ್ಯವತಿಯ ಕೈಗೆ ಕೊಟ್ಟನು. ದೇವರು ಸಜ್ಜನರಿಗೆ ಯಾವಾಗಲೂ ಯಾವುದೋ ಒಂದು ವಿಧದಲ್ಲಿ ಸಹಾಯವನ್ನು ಮಾಡುತ್ತಿರುವನು. ಆಪತ್ಕಾಲದಲ್ಲಿ ಎಲ್ಲರೂ ಕೃತಘ್ನರಾಗಿಯೇ ಇದ್ದರೆಂದು ಇದನ್ನು ಓದುವವರು ತಿಳಿದುಕೊಳ್ಳಬೇಡಿರಿ. ಅಡಿಗೆಯ ಬ್ರಾಹ್ಮಣ ಮುಂತಾದ ಸೇವಕರು ಒಂದು ಯಾವ ಕೆಲಸವನ್ನು ಹೇಳಿದರೂ ಅದನ್ನು ಮಾಡುವುದಕ್ಕೆ ಸಿದ್ಧವಾಗಿದ್ದು ತಮ್ಮ ಯಜಮಾನನ ನಿಮಿತ್ತವಾಗಿ ಕಣ್ಣೀರನ್ನು ಕರೆಯದಿದ್ದ ದಿನವೇ ಇರಲಿಲ್ಲ. ನೆರೆಹೊರೆಯುವರೂ ಅವರಿಂದ ಉಪಕಾರವನ್ನು ಹೊಂದಿದ

ಇತರರೂ ಸಹ ಕೃತಜ್ಞತೆಯಿಂದ ಪ್ರತಿದಿನವೂ ತಪ್ಪದೆ ಬಂದು ನೋಡಿಹೋಗು ತ್ತಲೇ ಇದ್ದರು. ಕೆಲವುದಿನಗಳವರೆಗೆ ನಾರಾಯಣಮೂರ್ತಿಯ ರೋಗವು ಗುಣ ವಾದೀತೋ ಆಗಲಾರದೋ ಎಂದು ವೈದ್ಯನಿಗೂ ಸಂಶಯವುಂಟಾಗಿದ್ದಿತು. ಆದರೂ ಸತ್ಯವತಿ ಮುಂತಾದವರ ಪ್ರಯಾಸವು ವ್ಯರ್ಥವಾಗಲಿಲ್ಲ. ಆರುತಿಂಗಳಿಗೆ ರೋಗವು ಗುಣವಾದ ಚಿಹ್ನೆಗಳು ಕಾಣುತ್ತಾ ಬಂದುವು. ಕಳೆಗುಂದಿದ್ದ ಸತ್ಯವತಿಯ ಮುಖವು ಪುನಃ ಸ್ವಲ್ಪ ಪ್ರಕಾಶಿಸಿತು. ನಾರಾಯಣಮೂರ್ತಿಯು ಮಂಚದಿಂ ದಿಳಿದು ಮೆಲ್ಲನೆ ತಿರುಗಾಡುವುದಕ್ಕೆ ಮೊದಲುಮಾಡುವಾಗ್ಗೆ ಎಂಟುತಿಂಗಳು ಹಿಡಿ ಯಿತು. ಬಳಿಕ ಒಂದೆರಡು ತಿಂಗಳಲ್ಲಿ ಆತನು ತಿರುಗಿ ಸಭೆಗೆ ಹೋಗಿ ಕೆಲಸವನ್ನು ನೋಡುವುದಕ್ಕೆ ಶಕ್ತನಾದುದರಿಂದ ಕಕ್ಷಿಗಾರರು ಎಂದಿನಂತೆ ಬರಲಾರಂಭಿಸಿದರು. ಸಂವತ್ಸರವಾಗುವಾಗ್ಗೆ ಕೈಯಲ್ಲಿ ಸ್ವಲ್ಪ ಹಣ ಸೇರಿದುದರಿಂದ ನಾರಾಯಣಮೂ ರ್ತಿಯು ಪುನಃ ಪೂರ್ವದ ಮನೆಗೆ ಹೋದನು. ಕುಮಾರನೂ ಕುಮಾರಿಯೂ ಸುಖವಾಗಿ ಬೆಳೆಯುತ್ತಿದ್ದರು.

# ಹದಿನಾಲ್ಕನೆಯ ಪ್ರಕರಣ.

ನಾರಾಯಣಮೂರ್ತಿಯು ಸತ್ಯವತಿ ಮುಂತಾದವರನ್ನು ಬಹುಸುಖವಾಗಿ ರಿಸಿ ಕೊಂಡಿದ್ದಾನೆಂದು ಮೇಲೆ ನೋಡುವವರೆಲ್ಲರೂ ತಿಳಿದುಕೊಂಡಿದ್ದರೇ ಹೊರತು ಮೇಲಣವರು ತಿಳಿದುಕೊಂಡಿದ್ದಂತೆ ಅವರಿಗೆ ಮಾತ್ರ ಸುಖವಿರಲಿಲ್ಲ. ಒಂದೊಂದು ವೇಳೆ ದಂಪತಿಗಳು ತಮ್ಮಲ್ಲಿ ತಾವು ಎಷ್ಟು ಐಕಮತ್ಯದಿಂದ ಎಷ್ಟು ನೆಮ್ಮದಿಯಾಗಿ ಸಂಸಾರಚಕ್ರವನ್ನು ನಡೆಸುತ್ತಿದ್ದರೂ ನಮ್ಮವರ ಅವಿಭಕ್ತಕುಟುಂಬಸ್ಥಿತಿಯಿಂದ ಅನೇಕ ಬಾಧೆಗಳೂ ಮನಸ್ತಾಪಗಳೂ ಉಂಟಾಗುವುದಲ್ಲದೆ ಅದರಿಂದ ಅವರ ಸು ಖಕ್ಕೆ ಶುದ್ಧಾಂಗವಾಗಿ ಭಂಗವೇ ಉಂಟಾಗುವುದು. ಮನೆಯಲ್ಲಿರುವವರು ತಮ್ಮ ಜೀವನಾರ್ಥವಾಗಿ ಏನೂ ಕೆಲಸಮಾಡದೆ ಕುಟುಂಬದಲ್ಲಿ ಸ್ವಲ್ಪ ಪ್ರಯೋ ಜಕನಾಗಿ ಸಂಪಾದಿಸಿ ತರತಕ್ಕವನನ್ನೊಬ್ಬನನ್ನೇ ಎಲ್ಲಕ್ಕೂ ನಂಬಿಕೊಂಡಿದ್ದು ಕೆಲಸಕಾರ್ಯಗಳಿಲ್ಲದೆ ಸುಮ್ಮನೆ ತಿಂದು ಕುಳಿತಿರುವುದರಿಂದ ಹೊತ್ತು ಹೋಗದ್ದೆ ಪ್ರತಿ ಸ್ವಲ್ಪ ವಿಷಯಗಳಲ್ಲಿಯೂ ನಿಷ್ಕಾರಣವಾಗಿ ಜಗಳವಾಡುತ್ತಾ ಸಂಪಾದಿಸಿ ತಂದುಹಾಕಿ ಕುಟುಂಬಸಂರಕ್ಷಣೆಯನ್ನು ಮಾಡುವವನ ಕಷ್ಟಗಳನ್ನು ಲೇಶವಾದ ರೂ ವಿಚಾರಿಸದೆ ತಮಗೆ ಇದು ಸಾಲದೆಂದೂ ಅದುಸಾಲದೆಂದು ಕೂಗಾಡುತ್ತಾ

ಮನೆಯ ಯಜಮಾನನಿಗೆ ಯಾವುದೋ ಒಂದು ವಿಧವಾದ ಶ್ರಮವನ್ನು ಉಂಟಾಗಿಸುತ್ತಿರುವರು. ಮನೆಯಲ್ಲಿ ಸೋಮಾರಿಗಳಾಗಿ ತಿಂದುಹಾಕುವವರ ಸಂಖ್ಯೆ ಎಷ್ಟು ಹೆಚ್ಚಾದರೆ ಜಗಳಗಳೂ ಅಷ್ಟು ಹೆಚ್ಚಾಗುತ್ತಿರುವವು. ಭಗವಂತನು ತನಗೆ ದಯವಿಟ್ಟು ಕೊಟ್ಟ ಕೈಕಾಲು ಮುಂತಾದ ಅವಯವಗಳೆಲ್ಲಾ ಸರಿಯಾಗಿದ್ದು ತಾವು ದೃಢಾಂಗರಾಗಿದ್ದರೂ ಅವುಗಳನ್ನು ಉಪಯೋಗಿಸಿಕೊಳ್ಳದೆ ಹೋಗುದಕ್ಕಾಗಿ ನಾಚಿಕೆಪಡದೆ ತಮ್ಮನ್ನು ಇತರರು ಪೋಷಿಸಬೇಕೆಂದೂ ಅವರಿಗೆ ತೀರದೆಂದೂ ಗರ್ವಪಡುತ್ತಾ ನಾನಾ ವಿಧಗಳಲ್ಲಿ ಗಳಿಸಿ ತಂದುಹಾಕುವವರ ಮನಸ್ಸುಗಳಿಗೆ ಬಾಧೆಯನ್ನು ಉಂಟುಮಾಡುತ್ತಿರುವರು. ಇದರಿಂದ ಹಿಂದೂ ಕುಟುಂಬಗಳಲ್ಲಿ ಸಾಧಾರಣವಾಗಿ ತಂದುಹಾಕುವವರಿಗಾಗಲಿ ತಿಂದುದನ್ನು ಅನುಭವಿಸುವವರಿಗಾಗಲಿ ತೃಪ್ತಿಯೂ ಸಂತೋಷವೂ ಉಂಟಾಗದೆ ಒಬ್ಬರಮೇಲೆ ಒಬ್ಬರ ಮನಸ್ಸಿನಲ್ಲಿ ಅಸೂಯೆಯೂ ದ್ವೇಷವೂ ವೃದ್ಧಿಯಾಗುತ್ತಿರುವುವು. ಈ ಕಾರಣದಿಂದಲೇ ಅತ್ಯಂತೈಕಮತ್ಯವೂ ದೃಢಾನುರಾಗವೂ ಇರಬೇಕಾದ ಸಹೋದರರಲ್ಲಿಯೂ ಸೋದರವಾತ್ಸಲ್ಯವು ಅಸ್ಥಿರಗೆ ದ್ವೇಷವು ಅಧಿಕವಾಗಿದ್ದು ಲೋಕದಲ್ಲಿ ಅಣ್ಣತಮ್ಮಂದಿರ ಶತ್ರುತ್ವವೆಂಬ ಸಾಮೆತಿ ಹುಟ್ಟಬೇಕಾಯಿತು. ಆದುದರಿಂದ ನಮ್ಮವರೆಲ್ಲರೂ ಒಂದು ಕಡೆಯಲ್ಲಿ ಒಟ್ಟಾಗಿರದೆ ಎಷ್ಟು ದೂರದಲ್ಲಿದ್ದರೆ ಅಷ್ಟು ಅನುರಾಗವುಳ್ಳವರಾಗುವರೆಂದು ನನ್ನ ಮನಸ್ಸಿಗೆ ತೋರುತ್ತಿದೆ.

ನಾರಾಯಣಮೂರ್ತಿಯು ದುರ್ಮಾರ್ಗನಾದ ರಾಮಸ್ವಾಮಿಯನ್ನು ರಹಸ್ಯವಾಗಿ ಕರೆದು ಎಷ್ಟುಸಾರಿ ಬುದ್ಧಿವಾದಗಳನ್ನು ಹೇಳಿದರೂ ರಾಮಸ್ವಾಮಿಯು ಮನಸ್ಸಿನಲ್ಲಿ ಯಾವುದೋ ಒಂದು ದುರಭಿಪ್ರಾಯವನ್ನಿಟ್ಟುಕೊಂಡು ಉದ್ದೇಶಗಳನ್ನು ಎಣಿಸಿ ಹೇಳಿದುದಕ್ಕೆಲ್ಲಾ ವಿಪರೀತಾರ್ಥಗಳನ್ನು ಕಲ್ಪಿಸಿ ತನ್ನನ್ನೂ ತನ್ನ ಹೆಂಡತಿಯನ್ನೂ ಪೋಷಿಸಬೇಕಾಗಿಬಂದಿತಲ್ಲ ಎಂದು ಕೆಟ್ಟಮಾತುಗಳನ್ನಾಡಿ ಅಣ್ಣನು ತನ್ನನ್ನು ಹೇಗಾದರೂ ಮನೆಬಿಟ್ಟು ಓಡಿಸುವುದಕ್ಕೆ ಯೋಚಿಸುತ್ತಾನೆಂದು ಪರಿಚಿತರಾದವರಸಂಗಡ ಹೇಳತೊಡಗಿದನು. ಅಂದಿನಿಂದ ನಾರಾಯಣಮೂರ್ತಿಯು ತಮ್ಮನಿಗೆ ಏನೂ ಹೇಳದೆ ಅವನು ಯಾವ ದಾರಿಯಲ್ಲಿ ಹೋದರೂ ನೋಡದವನಂತೆ ಸುಮ್ಮನಿರುತ್ತಾ ಬಂದನು. ಅದರಿಂದಲೂ ಅವನ ದುರ್ನಯವು ಅಡಗದೆ ಮತ್ತಷ್ಟು ಮೀರಿಹೋಗಿ ದುಷ್ಟರೊಂದಿಗೆ ಮನಸ್ಸು ಬಂದಹಾಗೆ ತಿರುಗುತ್ತಾ ರಾತ್ರಿ ದೀವಿಗೆ ಹಚ್ಚಿದಮೇಲೆಯೂ ಸಹ ಜೂಜಾಡಿ ಸೋತ ಹಣಕ್ಕಾಗಿ ಹೆಂಡತಿಯನ್ನು ಹೆದರಿಸಿ ಯಾವುದಾದರೂ ಒಂದೊಡವೆಯನ್ನು ತೆಗೆದುಕೊಂಡು ಹೋಗಿ

ಹಾಳುಮಾಡುತ್ತಾ ಒಂದೊಂದುವೇಳೆ ಮನೆಯಲ್ಲಿ ಕೈಗೆ ಯಾವ ವಸ್ತು ಸಿಕ್ಕಿದರೂ ಅದನ್ನು ಎತ್ತಿಕೊಂಡುಹೋಗಿ ಜೂಜುಗಾರರಿಗೆ ಕೊಡುತ್ತಾ ಸೋತುಹೋದ ದಿನದಲ್ಲಿ ಹುಚ್ಚನಹಾಗೆ ಇರುತ್ತಾ ಸರಿಯಾಗಿ ಅನ್ನವನ್ನು ತಿನ್ನದೆ ಎದ್ದು ಓಡಿಹೋಗಿ ಹೆಂಡತಿಯನ್ನು ಹೊಡೆದು ಬಯ್ಯುತ್ತಾ ಅಣ್ಣನ ಹೆಸರನ್ನು ಹೇಳಿ ಅಂಗಡಿಗಳಲ್ಲಿ ಪದಾರ್ಥಗಳನ್ನು ತಂದು ತಾನು ಉಪಯೋಗಿಸಿಕೊಳ್ಳುತ್ತಾ ಕಂಟರೊಂದಿಗೆ ರಾತ್ರಿವೇಳೆ ತಿರುಗಿ ತನ್ನ ಶತ್ರುಗಳಸಂಗಡ ಹೊಡೆದಾಡಿ ಮಾತು ತರುತ್ತಾ ನಾನಾವಿಧದಲ್ಲಿ ಅಣ್ಣನಿಗೆ ಅವಮಾನವನ್ನುಂಟುಮಾಡುತ್ತಿದ್ದನು. ಆತನು ಆಗಾಗ್ಗೆ ಸಾರಾಯಿಯನ್ನು ಕುಡಿಯುತ್ತಿದ್ದನೆಂದು ಜನಗಳು ಆಡುವರೇ ಹೊರತು ಕುಡಿದು ದೇಹದಮೇಲೆ ಪ್ರಜ್ಞೆಯಿಲ್ಲದವನಾಗಿ ಬಿದ್ದುಹೋದಂತೆ ಯಾವಾಗಲೂ ಕಾಣಬಂದಿಲ್ಲ. ವೇಶ್ಯಾಲಂಪಟರೂ ಜೂಜುಗಾರರೂ ಕುಡಿಯುವರೆಂಬುದು ಅಷ್ಟು ಆಶ್ಚರ್ಯಕರವಾದುದಲ್ಲ. ಮಹಾಲಕ್ಷ್ಮಿಯು ಈ ನಡತೆಯನ್ನು ಕಂಡು ಹಿಡಿದು ಮನಸ್ಸಿನಲ್ಲಿ ವ್ಯಸನಪಟ್ಟು ಗಂಡನಿಗೆ ಅನೇಕವೇಳೆ ಉಪಾಯದಿಂದಲೂ ನಯದಿಂದಲೂ ಹಿತವಾಕ್ಯವನ್ನು ಹೇಳಿನೋಡಿದಳೇ ಹೊರತು ಆ ಹಿತೋಪದೇಶದಿಂದ ಏನೂ ಪ್ರಯೋಜನವಾಗಲಿಲ್ಲ. ಆದರೆ ಆತನು ಆಕೆಯನ್ನು ಹೊಡೆಯುವುದು ಮೊದಲಿಗಿಂತ ಹೆಚ್ಚಾಯಿತು. ಗಂಡನ ವಿಷಯವಾದ ಈ ವ್ಯಸನವೇ ಆಕೆಯ ದೇಹದಲ್ಲಿ ಎಷ್ಟೋ ಬಲವನ್ನು ಕುಂದಿಸಿ ಪ್ರಸವವಾದಾಗ ಬದುಕಲಾರಳೆಂಬಷ್ಟು ದುಸ್ಥಿತಿಗೆ ತಂದಿತು. ಬದುಕುವುದೇ ಸಂಶಯವೆಂದು ತೋರಿದ ಆ ದಿನಗಳಲ್ಲಿ ಒಂದುಸಾರಿ ಮಹಾಲಕ್ಷ್ಮಿಯು ಒಂಟಿಯಾಗಿದ್ದಾಗ ತನ್ನ ಮಂಚದ ಹತ್ತಿರ ಕಣ್ಣೀರನ್ನು ಸುರಿಸುತ್ತಾ ನಿಂತಿದ್ದ ಗಂಡನನ್ನು ಮಂಚದಮೇಲಕ್ಕೆ ಬಾರೆಂದು ಕರೆದು ಆತನಮೇಲೆ ತನ್ನ ಕೈಯನ್ನು ಇಟ್ಟುಕೊಂಡು ಹೀನಸ್ವರದಿಂದ ತನ್ನ ವ್ಯಾಧಿಗೆ ಆತನ ನಡತೆಯಿಂದುಂಟಾದ ಮನೋವ್ಯಥೆಯೇ ಕಾರಣವೆಂದು ಹೇಳಿ ತಾನು ಸತ್ತು ಹೋದಮೇಲೆಯಾದರೂ ನಡತೆಯನ್ನು ಸರಿಮಾಡಿ ಕೊಂಡು ಅಣ್ಣನೂ ಅತ್ತಿಗೆಯೂ ಹೇಳುವಂತೆ ಕೇಳಿ ಮುಂದೆ ಬರುವ ಹೆಂಡತಿಯನ್ನು ಸುಖಪಡಿಸಿ ನೀವೂ ಸುಖಪಡುವೆನೆಂದು ಕೈಮೇಲೆ ಕೈಹಾಕಿದರೆ ನಿರ್ವಿಚಾರವಾಗಿ ಪ್ರಾಣಬಿಡುವೆನೆಂದು ಗಳಿಗೆಗೆ ಒಂದು ಮಾತಿನಂತೆ ಹೇಳಿ ಕಣ್ಣುಗಳನ್ನು ಮುಚ್ಚಿಕೊಂಡಳು. ಆತನಿಗೆ ಆ ಮಾತು ಶೂಲದಂತೆ ನಾಟಿಕೊಂಡುದರಿಂದ ತನ್ನ ಹಿಂದಣ ನಡತೆಗಾಗಿ ನಿಜವಾಗಿ ಪಶ್ಚಾತ್ತಾಪಪಡುತ್ತಾ ಇನ್ನು ಮುಂದೆ ಎಂದಿಗೂ ಹಿಂದಣ ದುಸ್ಸಹವಾಸದಲ್ಲಿ ತಿರುಗದೆ ಬುದ್ಧಿವಂತನಾಗಿ ಒಳ್ಳೆಯ ನಡತೆಯಲ್ಲಿ ನಡೆ

ಯಬೇಕೆಂದು ನಿಶ್ಚಯಿಸಿಕೊಂಡು ಹೆಂಡತಿಗೆ ತನ್ನ ಮೇಲಿರುವ ಪ್ರೀತಿಗೂ ತನ್ನ ಕೆಟ್ಟ ನಡತೆಯ ವಿಷಯವಾಗಿ ಆಕೆಯ ಮನಸ್ಸಿನಲ್ಲಿರುವ ಕೊರಗಿಗೂ ದುಃಖವನ್ನು ತಡೆಯಲಾರದೆ ಗಟ್ಟಿಯಾಗಿ ಗೋಳಿಡುತ್ತಾ ಹೆಂಡತಿಯ ಕೈಯನ್ನು ಹಿಡಿದುಕೊಂಡು ಭಗವದನುಗ್ರಹದಿಂದ ನೀನು ಬದುಕಿ ನಾನು ಸುಖಪಡಬೇಕಾದ ಭಾಗ್ಯವು ನಷ್ಟವಾಗದಿದ್ದರೆ ನನ್ನ ಮುಂದಣ ನಡತೆ ಹೇಗಿದ್ದೀತೋ ನೀನೇ ನೋಡೀಯೆ! ಎಂದು ಹೇಳಿ ಅಲ್ಲಿಂದ ಮುಂದಕ್ಕೆ ಮಾತನಾಡುವುದಕ್ಕೆ ಬಾಯಿ ಬಾರದೆ ಕಣ್ಣೀರಿಂದ ಕಾಲುವೆಗಳನ್ನು ಕಟ್ಟಿಸುತ್ತಾ ಸುಮ್ಮನಿದ್ದನು. ಆ ಮಾತುಗಳಿಂದ ಮಹಾಲಕ್ಷ್ಮಿಯು ಧೈರ್ಯವುಳ್ಳವಳಾಗಲು ಅಂದಿನಿಂದ ಆಕೆಯ ದೇಹಸ್ಥಿತಿಯು ಸೇರ್ಪಟ್ಟುದಲ್ಲದೆ ದಿನಕ್ರಮದಿಂದ ದೇಹಕ್ಕೂ ಆರೋಗ್ಯವಾಗಿ ಮಂಚದಿಂದಿಳಿದು ಒಂದು ತಿಂಗಳೊಳಗಾಗಿ ಮನೆಯಲ್ಲೆಲ್ಲಾ ಓಡಾಡುವಷ್ಟು ಶಕ್ತೆಯಾದಳು. ಸ್ತ್ರೀಶಿಶುವೂ ಸುಖವಾಗಿ ಬೆಳೆಯುತ್ತಿದ್ದಳು. ಓರಗಿತ್ತಿಗೆ ವ್ಯಾಧಿ ಬಂದಿದ್ದಾಗ ಸತ್ಯವತಿಯು ಪಟ್ಟ ಪ್ರಯಾಸವನ್ನೂ ಜಾಗರಣವನ್ನೂ ಮಾಡಿದ ಉಪಚಾರವನ್ನೂ ನೋಡಿ ತೀರಬೇಕೇಹೊರತು ಹೇಳತೀರದು. ಸ್ವಪ್ರಯೋಜನಪರತೆಯೆಂಬ ಮಾತು ಯಾವ ಲೋಕದಲ್ಲಿಯೂ ಇರದೆ ತನ್ನ ಜೀವನವನ್ನೂ ದೇಹವನ್ನೂ ಪರಾರ್ಥವಾಗಿಯೇ ಧಾರೆಯೆರೆಯುವ ಇಂತಹ ಪತಿವ್ರತಾಶಿರೋಮಣಿಯಿರುವುದರಿಂದ ದುಃಖಬಹುಳವಾದ ಈ ಲೋಕದಲ್ಲಿಯೂ ಅನೇಕ ಗೃಹಗಳು ಭೂತಲಸ್ವರ್ಗಗಳಾಗುತ್ತಿರುವುವು. ಹೆಂಡತಿಯು ಮಾಡಿದ ಹಿತೋಪದೇಶದ ಮಹಿಮೆಯಿಂದ ರಾಮಸ್ವಾಮಿಯ ನಡತೆಯು ಮಂತ್ರಿಸಿದಂತೆ ಆಕಸ್ಮಿಕವಾಗಿ ಬದಲಾಯಿಸಿತು. ಆತನು ಅಂದಿನಿಂದ ಮೊದಲುಗೊಂಡು ಪುನಃ ಯಾವಾಗಲೂ ರಾತ್ರಿಕಾಲಗಳಲ್ಲಿ ಮನೆಬಿಟ್ಟು ಬೀದಿಯಲ್ಲಿ ಕಾಲಿಡಲಿಲ್ಲ. ಜೂಜಾಡಲಿಲ್ಲ. ಮೊದಲಿನ ಸ್ನೇಹಿತರ ಸಹವಾಸವನ್ನು ಮಾಡಲಿಲ್ಲ. ಮತ್ತೆ ಯಾವ ದುಷ್ಕಾರ್ಯವನ್ನೂ ಮಾಡಲಿಲ್ಲ. ಪೂರ್ವದ ಮಿತ್ರರು ಆತನ ನಿಮಿತ್ತವಾಗಿ ಮನೆಗೆ ಬಂದು ಕರೆಯುತ್ತಲೂ ಹಾಸ್ಯ ಮಾಡುತ್ತಲೂ ಕೋಪವನ್ನು ಬರಿಸುತ್ತಲೂ ತಮ್ಮ ಮಾರ್ಗಕ್ಕೆ ಪುನಃ ಎಳೆದುಕೊಳ್ಳಬೇಕೆಂದು ಪ್ರಯತ್ನಿಸಿದರು. ಆದರೆ ಅವರು ತಮ್ಮ ಶ್ರಮವು ವಿಫಲವಾದುದರಿಂದ ಆತನು ಕೆಟ್ಟುಹೋದನೆಂದು ಬಿಟ್ಟುಬಿಟ್ಟು ಅವನ ಸ್ನೇಹವನ್ನು ತೊರೆದರು. ಮೊದಲು ಅಣ್ಣನ ಮಾತೆಂದರೆ ತಿರಸ್ಕಾರಬುದ್ಧಿಯಿಂದ ನೋಡುತ್ತಿದ್ದ ರಾಮಸ್ವಾಮಿಯು ಈಗ ಅಣ್ಣನಿಗೂ ಅತ್ತಿಗೆಗೂ ದಾಸಾನುದಾಸನಾಗಿ ಅವರ ಆಜ್ಞೆಯನ್ನು ಸ್ವಲ್ಪವಾದರೂ ಮೀರಿ ನಡೆಯದೆ ಮೇಲಾಗುತ್ತಾ ಬಂದನು. ಈಗ ತಾನು

ಹೇಗಾದರೂ ವಿದ್ಯೆಯನ್ನು ಕಲಿತು ಪರೀಕ್ಷೆಗಳನ್ನು ಕೊಟ್ಟು ದೊಡ್ಡತನವನ್ನು ಸಂಪಾದಿಸಿಕೊಳ್ಳಬೇಕೆಂಬ ಚಿಂತೆಯೊಂದಲ್ಲದೆ ಆತನಿಗೆ ಬೇರೆ ಯಾವಚಿಂತೆಯೂ ಇಲ್ಲ. ಆದುದರಿಂದ ಈಗ ಆತನು ರಾತ್ರಿಯೂ ಹಗಲೂ ಪುಸ್ತಕಗಳನ್ನು ಕೈಯಲ್ಲಿಟ್ಟುಕೊಂಡು ಓದುತ್ತಾ ತನಗೆ ತಿಳಿಯದುದನ್ನು ಅಣ್ಣನ ಹತ್ತಿರವೂ ಇತರರ ಹತ್ತಿರವೂ ಕಲಿತುಕೊಳ್ಳುತ್ತಾ ಕಾಲಕ್ಷೇಪವನ್ನು ಮಾಡುತ್ತಿರುವನು. ನಾರಾಯಣಮೂರ್ತಿಗೂ ಸತ್ಯವತಿಗೂ ಮನಸ್ಸುಗಳನ್ನು ನೋಯಿಸಿ ವ್ಯಾಕುಲ ಪಡಿಸುವ ಎರಡನೆಯ ಕಾರಣವು ಸೂರಮ್ಮನ ನಡತೆ. ಸೂರಮ್ಮನೂ ಅವಳ ತಾಯಿಯೂ ಚಿಕ್ಕಂದಿನಿಂದ ಹಳ್ಳಿಗಳಲ್ಲಿ ಬೆಳೆದವರಾದುದರಿಂದಲೂ ಓದಿಕೊಂಡಿರುವ ನಾಗರಿಕರೊಂದಿಗೆ ಎಂದೂ ಸ್ನೇಹಿಸಿದವರಲ್ಲವಾದುದರಿಂದಲೂ ಅವರ ಆಚಾರ ವ್ಯವಹಾರಾದಿಗಳು ಬಹು ಭಿನ್ನವಾದುವುಗಳಾದುದರಿಂದಲೂ ಅವರ ಸೌಜನ್ಯ ದೌರ್ಜನ್ಯಗಳೂ ಗೌರವ ಲಾಘವಗಳೂ ಬೇರೆಬೇರೆಯಾಗಿರುವುದರಿಂದಲೂ ಅವರಿಗೆ ಸತ್ಯವತಿ ಮುಂತಾದ ಮನೆಯವರ ನಡತೆಯು ಯಾರದೂ ಸರಿಬೀಳದೆ ಇದ್ದಿತು. ಸೂರಮ್ಮನು ಪ್ರತಿದಿನವೂ ಒಂದು ನಿಯಮದ ಹೆಸರನ್ನು ಹೇಳುತ್ತಾ ಲೋಕದಲ್ಲಿಲ್ಲದ ನಿಯಮಗಳನ್ನೆಲ್ಲಾ ತಾನು ಕೈಕೊಳ್ಳಬೇಕೆಂದು ಕೋರುತ್ತಿರುವಳು. ಸುಬ್ರಹ್ಮಣ್ಯನು ತನಗೆ ಅದು ಇಷ್ಟವಿಲ್ಲದುದರಿಂದ ತನ್ನ ಕೈಯಲ್ಲಾದಮಟ್ಟಿಗೂ ಅದನ್ನು ತಪ್ಪಿಸಬೇಕೆಂದು ಪ್ರಯತ್ನಿಸುತ್ತಿರುವನು. ಸೂರಮ್ಮನು ಸೆಗಣಿಯು ಶುಚಿಯಾದುದೆಂದೆಣಿಸಿ ನಾಲ ಹೊಡೆಯುವಂತೆ ಎಲ್ಲಾ ಕಡೆಯೂ ಮುದ್ದೆಮುದ್ದೆ ಬೀಳುವಂತೆ ಪದೇ ಪದೇ ಸಗಣಿ ನೀರನ್ನು ಚಿಮುಕಿಸುತ್ತಿರುವಳು. ಸುಬ್ರಹ್ಮಣ್ಯನು ಸೆಗಣಿಯು ಅಪರಿಶುದ್ಧವಾದುದೆಂದು ಭಾವಿಸಿ ಅದನ್ನು ನೋಡಿದಾಗ ಜುಗುಪ್ಸೆಪಡುತ್ತಾ ಬರವುದಲ್ಲದೆ ಸೆಗಣಿನೀರು ಬಿದ್ದರೆ ಪಾಗರಕ್ಷೆಗಳೂ ಚೆಂಬುಗಳೂ ಕೆಲವು ವೇಳೆ ಬಟ್ಟೆಗಳೂ ಹಾಳಾಗಿ ಹೋಗುವುವೆಂದು ಸಿಡುಗುಟ್ಟುತ್ತಿರುವನು. ಸೂರಮ್ಮನು ಯಾರೋ ಹತ್ತಿರ ಬಂದರೆಂದೂ ಯಾವುದೋ ಒಂದುಬಟ್ಟೆ ಕಾಲಿಗೆ ತಗುಲಿದಂತೆ ಅನುಮಾನವಾಗಿದೆಯೆಂದೂ ಹೇಳಬಾರದವನ ಮಾತು ಕಿವಿಗೆ ಬಿತ್ತೆಂದೂ ಕಾರಣಗಳನ್ನು ಹೇಳಿ ಮೈಲಿಗೆಯಾಯಿತೆಂದು ದಿವಸಕ್ಕೆ ಐದಾರು ಸ್ನಾನಗಳನ್ನು ಮಾಡಿ ಒದ್ದೆಬಟ್ಟೆಗಳನ್ನುಟ್ಟುಕೊಂಡು ತಲೆನೋವಿನಿಂದಲೂ ನೆಗಡಿಯಿಂದಲೂ ನರಳಾಡುತ್ತಿರುವಳು. ಸುಬ್ರಹ್ಮಣ್ಯನು ಅವೆಲ್ಲಾ ಹುಚ್ಚೆಂದು ಹೇಳಿ ತಪ್ಪಿಸುವುದಕ್ಕೆ ಪ್ರಯತ್ನಿಸುತ್ತಿರುವನು. ಸೂರಮ್ಮನು ರೋಗಬಂದಾಗ ಔಷಧಗಳನ್ನು ತೆಗೆದುಕೊಳ್ಳದೆ ರೋಗವನ್ನು ಬೆಳೆಸುತ್ತಾ ಕಣಿಕೇಳುವುದಕ್ಕಾಗಿಯೂ ಶಕುನವನ್ನು ವಿಚಾರಿಸುವು

ದಕ್ಕಾಗಿಯೂ ದೆವ್ವಗಳನ್ನು ಉಚ್ಚಾಟನೆಮಾಡಿಸುವುದಕ್ಕಾಗಿಯೂ ಪ್ರಯತ್ನಿಸಿ ಹಣವನ್ನು ವ್ಯರ್ಥವಾಗಿ ಕಳೆಯಲು ಉದ್ಯೋಗಿಸುತ್ತಿರುವಳು. ಸುಬ್ರಹ್ಮಣ್ಯನು ರೋಗಕ್ಕೆ ಔಷಧವೊಂದು ಹೊರತು ಬೇರೆ ಯಾವುದೂ ಪ್ರತಿಕ್ರಿಯೆಯಿಲ್ಲವೆಂದೂ ರೋಗಬರುವುದಕ್ಕೆ ದೇವತೆಗಳೂ ದೆವ್ವಗಳೂ ಕಾರಣವಲ್ಲವೆಂದೂ ಬೋಧಿಸಿ ಆ ಅಜ್ಞಾನದ ಕೆಲಸಗಳನ್ನು ನಿಲ್ಲಿಸುವುದಕ್ಕೆ ಯತ್ನಿಸುವನು. ಸೂರ ವ್ಯಾಸ ಶನಿವಾರಗಳೆಂದೂ ಭಾನುವಾರಗಳೆಂದೂ ಮಂಗಳವಾರಗಳೆಂದೂ ಶುಕ್ರವಾರಗಳೆಂದೂ ಏಕಾದಶಿಗಳೆಂದೂ ಅಮಾವಾಸ್ಯೆಗಳೆಂದೂ ಶಿವರಾತ್ರಿಗಳೆಂದೂ ಕೃಷ್ಣಾಷ್ಟಮಿಗಳೆಂದೂ ಗ್ರಹಣಗಳೆಂದೂ ಪರ್ವಗಳೆಂದೂ ನಿರಂತರವಾಗಿ ಉತ್ಸವಗಳನ್ನೂ ಜಾಗರಣೆಗಳನ್ನೂ ಭಜನೆ [illegible] ಉಪವಾಸಗಳನ್ನೂ ಮಾಡಿ ದೇಹವನ್ನು ಕೆಡಿಸಿಕೊಳ್ಳುತ್ತಿದ್ದಳು. ಸುಬ್ರಹ್ಮಣ್ಯನು ಆವ [illegible] ಗ್ರಂಥಗಳೆಂದು ಕೊಂಡಾಡಿಕೊಂಡು ಅತ್ಯಂತ ಕೋಪವನ್ನು ಹೊಂದುತ್ತಾ ಆಗ್ರಹಕ್ಕೆ ಪಾತ್ರನಾಗುತ್ತಿರುವನು. ಹೆಂಡತಿಯು ತನ್ನ ಧರ್ಮದಂತೆ ನಡೆಸಿಕೊಳ್ಳಬೇಕೆಂದೆಣಿಸಿ ತನ್ನ ಸ್ತ್ರೀಗಳ ಬಟ್ಟೆಗಳನ್ನು ಒಡವೆಗಳನ್ನೂ ತಂದುಕೊಡದೆ ಬಾಧಿಸುತ್ತಾ [illegible] ದೇವತೆಗಳನ್ನೆಲ್ಲಾ ಬೇಡುತ್ತಾ ಕಷ್ಟದಿಂದ ಮನೆಯಲ್ಲಿದ್ದ [illegible] ಅಗಲು ಇತರರಿಗೆ ಕೊಡುತ್ತಾ ಸ್ವಲ್ಪ ದಿವಸಗಳಿಗಾಗಿ ನೆರೆ ಹೊರೆಯವರೊಂದಿಗೆ ಜಗಳವಾಡುತ್ತಾ ಯಾವ್ವನೆ ಕುಳಿತಿದ್ದ ಕಾಲದಲ್ಲಿ ಹೆರರ ಮೇಲೆ ದೂರುಗಳನ್ನು ಹೇಳುತ್ತಾ ಇರುವಳು. ಸುಬ್ರಹ್ಮಣ್ಯನು ಇವೆಲ್ಲಾ ಕೆಲಸಕ್ಕೆ ಬಾರದವುಗಳೆಂದು ತಿಳಿದವನಾಗಿ ಹೊಸ [illegible] ಗಳನ್ನು ತರಿಸಿ ಓದಿ ಹೊಂದತಕ್ಕ ಶಿಷ್ಯರಿಗೆ ಸೋದರರನ್ನು [illegible] ಮಾಡುತ್ತಿರುವನು. ಹೀಗೆ ಆ ದಂಪತಿಗಳು ಅನೇಕ ವಿಷಯಗಳಲ್ಲಿ ಭಿನ್ನಭಿನ್ನಾಭಿಪ್ರಾಯವುಳ್ಳವರಾಗಿರುವುದರಿಂದಲೂ ಈ ಕಾಲದಲ್ಲಿ ಸತ್ಯವತಿ ಪುಂತನವಾಗಿ ಸುಬ್ರಹ್ಮಣ್ಯನ ಪಕ್ಷವನ್ನೇ ಅವಲಂಬಿಸಿದಂತೆ ಕಾಣುವುದರಿಂದಲೂ ಸೂರಮ್ಮನೂ ಆವಳ ತಾಯಿಯೂ ಅವರೆಲ್ಲರ ಮೇಲೆಯೂ ತುಂಬಾ ದ್ವೇಷಿಸಿ ಪಕ್ಷಸಿ ಇಲ್ಲದನ್ನೂ ನಿವಾರಾಡಿಕೊಂಡು ನಾರಾಯಣಮೂರ್ತಿಯನ್ನೂ ಸತ್ಯವತಿಯನ್ನೂ ಅವರ ಮಕ್ಕಳನ್ನೂ ಬಾಯಿಗೆ ಬಂದಂತೆ ಬಯ್ಯುತ್ತಲೂ ನೆರೆಹೊರೆಯವರಲ್ಲಿ ಅವರಮೇಲೆ ದೋಷಾರೋಪಣೆ ಮಾಡಿ ತನಗೆ ಅನ್ನವನ್ನೂ ಬಟ್ಟೆಯನ್ನೂ ಕೊಡದೆ ಬಾಧಿಸುತ್ತಿದ್ದಾರೆಂದು ಸೋಂಸೋರನೆ ಅಳುತ್ತಲೂ ಆ ದಂಪತಿಗಳಿಗೆ ಮನೋವ್ಯಥೆಯನ್ನುಂಟುಮಾಡುತ್ತಿದ್ದರು. ನೋಡಿದಿರಾ ? ಮೂರ್ಖರಿಂದ ಸಜ್ಜನರಾದವರಿಗೆ ಲೋಕದಲ್ಲಿ

ಎಂತಹ ಮನೋವ್ಯಥೆಯೂ ಆಯಾಸವೂ ಸಂಭವಿಸುತ್ತಿರುವುದು! ಈ ಕಲಹದಿಂದ ಸೂರಮ್ಮನೂ ಅವಳತಾಯಿಯೂ ಒಟ್ಟಾಗಿ ತಲೆನೋವಿದ್ದಾಗಲೂ ಇಲ್ಲದಾಗಲೂ ಬಟ್ಟೆಯನ್ನು ಬಿಗಿಯಾಗಿ ಕಟ್ಟಿಕೊಂಡು ಮುಖಕ್ಕೆ ಪಟ್ಟುಹಾಕಿಕೊಂಡು ಕೊಟ್ಟ ಔಷಧಗಳನ್ನು ತೆಗೆದುಕೊಳ್ಳದೆ ತಮ್ಮನ್ನು ನೋಡಿಕೊಳ್ಳುವುದಕ್ಕೆ ಯಾರೂ ದಿಕ್ಕಿಲ್ಲವೆಂದು ಗಟ್ಟಿಯಾಗಿ ಅಳುತ್ತಾ ನೆರೆಹೊರೆಯವರನ್ನೆಲ್ಲಾ ಬರಮಾಡುತ್ತಿರುವರು. ಮತ್ತೆ ಕೆಲವುವೇಳೆ ಸೂರಮ್ಮನು ದೆವ್ವ ಹಿಡಿದಂತೆ ಅಭಿನಯಿಸಿ ಗಟ್ಟಿಯಾಗಿ ಅರಚಿಕೊಳ್ಳುತ್ತಾ ಹಾವಳಿಮಾಡಿ ರಾತ್ರಿಕಾಲಗಳಲ್ಲಿ ಎಲ್ಲರನ್ನೂ ಊರುಗಳಮೇಲೆ ಓಡಿಸುತ್ತಾ ದೇಹದಮೇಲೆ ಸ್ಮೃತಿಯಿಲ್ಲದಂತೆ ನಟಿಸಿ ಬಾಯಿತೀಟೆ ತೀರುವವರೆಗೆ ತನಗೆ ಕೋಪವಿದ್ದವರನ್ನೆಲ್ಲಾ ಬಯ್ಯುತ್ತಾ ದೆವ್ವದ ಹೆಸರನ್ನು ಹೇಳಿ ಬಟ್ಟೆಗಳನ್ನು ಸುಡುತ್ತಲೂ ಗಾಜಿನಬಟ್ಟಲು ಮುಂತಾದುವುಗಳನ್ನು ಒಡೆದು ಹಾಕುತ್ತಲೂ ವಿಶೇಷವಾಗಿ ನಷ್ಟವನ್ನುಂಟುಮಾಡುತ್ತಿರುವಳು. ಅದರಿಂದ ಸುಬ್ರಹ್ಮಣ್ಯನು ತನಗೆ ಓದಿಗೆ ವಿಘ್ನವಾಗುತ್ತಿರುವುದಕ್ಕೂ ಅಂತಹ ಗಯ್ಯಾಳಿ ಹೆಂಡತಿಯಾದುದಕ್ಕೂ, ತನಗಾಗಿ ನಿಷ್ಕಾರಣವಾಗಿ ಅಣ್ಣನಿಗೂ ಅತ್ತಿಗೆಗೂ ಶ್ರಮವುಂಟಾಗುತ್ತಿರುವುದಕ್ಕೂ, ಬಹು ವ್ಯಸನಪಟ್ಟು, ಜುಗುಪ್ಸೆಯಾದಾಗ ಕೆಲವುವೇಳೆ ಮನೆಬಿಟ್ಟು ದೇಶಾಂತರಕ್ಕೆ ಹೋಗಬೇಕೆಂದೂ ಕೆಲವು ಸಮಯಗಳಲ್ಲಿ ಆತ್ಮಹತ್ಯಮಾಡಿಕೊಳ್ಳಬೇಕೆಂದೂ ಪ್ರಯತ್ನಿಸುತ್ತಾಬಂದನು. ಆದರೆ ಇಂದಿನವರೆಗೆ ಅಂತಹ ವ್ಯಪರೀತ್ಯವು ಯಾವುದೂ ನಡೆಯಲಿಲ್ಲ. ಮುಂದೆ ಏನಾಗುವುದೋ ಅದು ಈಶ್ವರನಿಗೇ ತಿಳಿಯಬೇಕು. ಸತ್ಯವತಿಗೂ ನಾರಾಯಣಮೂರ್ತಿಗೂ ಇರುವ ಮೂರನೆಯ ಚಿಂತೆ ಯಾವುದೆಂದರೆ- ಸೀತೆಗೆ ಬಂದ ದುರವಸ್ಥೆಯ ವಿಷಯ. ಅವರು ಆಕೆಯ ದುರ್ಗತಿಯನ್ನು ಪರಿಹರಿಸಿ ಹೇಗಾದರೂ ಪುನರ್ವಿವಾಹ ಮಾಡಿ ಆಕೆಯನ್ನು ಸುಖಸ್ಥಿತಿಗೆ ತರಬೇಕೆಂದು ತಮ್ಮ ಮನಸ್ಸುಗಳಲ್ಲಿ ದೃಢವಾಗಿ ನಿಶ್ಚಯಿಸಿಕೊಂಡಿದ್ದರೇ ಹೊರತು ಬಹುಕಾಲದಿಂದಲೂ ಪುನರ್ವಿವಾಹವೆಂಬುದು ವಾಡಿಕೆಯಲ್ಲಿಲ್ಲವಾದುದರಿಂದ ಜನಗಳಲ್ಲಿರುವ ದ್ವೇಷವನ್ನೂ ಹೊಸದಾಗಿ ಮದುವೆಯನ್ನು ಮಾಡಿಕೊಂಡವರ ವಿಷಯದಲ್ಲಿ ಮಠಾಧಿಪತಿಗಳು ಬಹಿಷ್ಕಾರ ಪತ್ರಿಕೆಗಳನ್ನು ಕಳುಹಿಸಿ ಪಡಿಸಿದ ಬಾಧೆಯನ್ನೂ ನೆನೆನೆನೆದುಕೊಂಡು ತಮ್ಮ ಅಭಿಪ್ರಾಯವನ್ನು ಕೆಲಮಂದಿ ಆಪ್ತರೊಂದಿಗಲ್ಲದೆ ಇತರರ ಸಂಗಡ ಹೇಳಲಿಲ್ಲ. ಸೋಮಸುಂದರನಿಗೆ ಸೀತೆಯನ್ನು ಕೊಟ್ಟು ಮದುವೆಮಾಡಬೇಕೆಂದು ಅವರಿಗೆ ಅಭಿಪ್ರಾಯವುಂಟು. ಸೋಮಸುಂದರನೂ ಸೀತೆಯೂ ಒಬ್ಬರ ಮೇಲೊಬ್ಬರು ಪ್ರೀತಿಯುಳ್ಳವರಾಗಿ ತಾವು ಒಬ್ಬರನ್ನೊಬ್ಬರು ಮದುವೆಮಾಡಿ

ಕೊಳ್ಳಬೇಕೆಂದು ಅಪೇಕ್ಷಿಸುತ್ತಿದ್ದರು. ಇರಲಿ, ಈ ಮದುವೆಯು ಆಗುವುದೋ ಆಗಲಾರದೋ ಈಗಲೇ ನಿಜವಾಗಿ ಹೇಳುವುದಕ್ಕೆ ಪಾತ್ರ ಆಗುವುದಿಲ್ಲ. ಇಂತಹ ವಿಷಯಗಳಲ್ಲಿ ಸರಿಯಾಗಿ ಕಾರ್ಯವೆಲ್ಲಾ ನೆರವೇರುವವರೆಗೂ ಹೀಗೆಯೇ ಆಗುವುದೆಂದು ಧಾರಾಳವಾಗಿ ಯಾರೂ ನಂಬಕೂಡದು. ಮದುವೆಯಾದರೆ ನಿಮಗೆಲ್ಲರಿಗೂ ತಿಳಿಯದಿರಲಾರದು. ಆದುದರಿಂದ ಇದನ್ನು ಓದುವವರೆಲ್ಲರೂ ಆ ಕಾರ್ಯ ನಿಮಿತ್ತವಾಗಿ ಇದಿರುನೋಡಲವಶ್ಯಕವಿಲ್ಲ. ಉಳಿದ ವಿಷಯಗಳಲ್ಲಿ ನಾರಾಯಣಮೂರ್ತಿಯೂ ಸತ್ಯವತಿಯೂ ಬಹು ಸುಖಿಗಳಾಗಿರುವರು. ಆ ದಂಪತಿಗಳಲ್ಲಿರುವ ಅನುಕೂಲದಾಂಪತ್ಯವು ಮತ್ತೆಲ್ಲಿಯೂ ಕಾಣದು. ಅನ್ನವಸ್ತ್ರಾದಿಗಳಿಗೂ ದಾನ ಧರ್ಮಗಳಿಗೂ ಕೊರತೆಯಿಲ್ಲದೆ ಬೇಕಾದಷ್ಟು ದ್ರವ್ಯವು ದೊರೆಯುತ್ತಿದೆ ಮಗನೂ ಮಗಳೂ ಚೆನ್ನಾಗಿ ಬೆಳೆಯುತ್ತಾ ಕಣ್ಣುಹಬ್ಬವನ್ನು ಮಾಡುತ್ತಿರುವರು. ಲೋಕದಲ್ಲಿ ಇದಕ್ಕಿಂತ ಹೆಚ್ಚಾದ ಸುಖವೇನು ಬೇಕು ?

## ಹದಿನೈದನೆಯ ಪ್ರಕರಣ.

ಎಲೌ ನಾರೀಮಣಿಯರಿರಾ! ಸತ್ಯವತಿ ಆಕೆಯ ಗಂಡ ಆಕೆಯ ಕುಟುಂಬ ಇವರ ವಿಷಯಗಳನ್ನು ಇಂದಿವರೆಗೆ ನನಗೆ ತಿಳಿದಮಟ್ಟಿಗೆ ನಿಮಗೆ ತಿಳಿಸಿದೆನು. ಕೆಲವು ದಿನಗಳ ಹಿಂದೆ ಮನೆಯಲ್ಲಿ ಯಾರಸಂಗಡಲೂ ಹೇಳದೆ ಓಡಿಹೋಗಿದ್ದ ಲಕ್ಷ್ಮೀನಾರಾಯಣಯ್ಯನು ಈಗತಾನೆ ಯಾತ್ರೆಮಾಡಿಕೊಂಡು ಕಾವಡಿಯೊಂದಿಗೆ ಬಂದು ಮಕ್ಕಳೊಡನೆಯೂ ಸೊಸೆಯರೊಡನೆಯೂ ಕಾಶೀಕಾಪುರವು ಅರ್ಧ ಹರಿದಾರಿಯ ಅಗಲವೂ ಅರ್ಧಹರಿದಾರಿಯ ಉದ್ದವೂ ಉಳ್ಳದಾಗಿ ಗಂಗಾನದಿಯ ಉತ್ತರತೀರದಲ್ಲಿದೆಯೆಂದೂ, ಈಗಿರುವ ವಿಶ್ವೇಶ್ವರ ದೇವಾಲಯಕ್ಕಿಂತ ಪುರಾತನವಾಗಿ ಮಹಿಮೆಯುಳ್ಳದಾಗಿದ್ದ ಶಿವಾಲಯವನ್ನು ಕೆಡವಿಸಿ ಔರಂಗಜೇಬನೆಂಬ ಮಹಮ್ಮದೀಯನು ಕಟ್ಟಿಸಿದ ಮಸೀತಿಯನ್ನು ತಾನು ನೋಡಿದೆನೆಂದೂ, ಗಂಗಾನದಿಯಿರುವಷ್ಟು ಉದ್ದವೂ ಕಲ್ಲುಗಳಿಂದ ಘಟ್ಟಗಳು ಕಟ್ಟಿರುವುದಲ್ಲದೆ ಬ್ರಾಹ್ಮಣರು ಜಪಮಾಡಿಕೊಳ್ಳುವುದಕ್ಕೆ ಉನ್ನತಾಸನಗಳನ್ನು ಕಟ್ಟಿರುವರೆಂದೂ, ಆ ಪಟ್ಟಣವೂ ಪಂಚಕ್ರೋಶದಲ್ಲಿ ಸುತ್ತಲಿರುವ ಪ್ರದೇಶವೂ ಬಹುಪರಿಶುದ್ಧವಾದುವೆಂದೂ, ಅಲ್ಲಿ ನಾಲ್ಕೈದು ಲಕ್ಷಜನರಿದ್ದಾರೆಂದೂ ಹೇಳಿದ ವೃತ್ತಾಂತ

ವೊಂದನ್ನುಳಿದು ನಿಮಗೆ ಹೇಳಬೇಕಾದ ಬೇರೆ ಸಂಗತಿಗಳೇನೂ ನನಗೆ ತೋರಲಿಲ್ಲ. ಇದರಲ್ಲಿ ಮುಂದೇನು ವಿಚಿತ್ರಕಥೆ ಬರುವುದೋ ಎಂಬ ಅಭಿಲಾಷೆಯಿಂದಾದರೂ ನಿಮ್ಮಲ್ಲಿ ಹಲವುಮಂದಿ ಸಾವಧಾನಚಿತ್ತರಾಗಿ ಇದನ್ನು ಓದಿರಬಹುದು. ಪುರಾಣೇತಿಹಾಸಗಳಂತೆ ಹೃದಯಾಹ್ಲಾದಕರಗಳಾದ ವಿಷಯಗಳು ನಿಮಗಿದರಲ್ಲಿ ಕಂಡು ಬಂದಿರಲಾರವು. ಲೋಕಚರಿತ್ರೆಗಳಲ್ಲಿ ಕಥೆಗಳ ವಿನೋದಗಳು ಎಂದಿಗೂ ಕಾಣವು. ಇರಲಿ ; ಸತ್ಯವತಿಯಲ್ಲಿ ಪ್ರೀತಿಯುಳ್ಳವರಿಗೆ ಚರಿತ್ರೆಗಳ ಸತ್ಯವೇ ಸಂತೋಷ ಜನಕವಾಗಿದ್ದು ಸುಖಸಾಧನವಾಗುವುದು. ಸಮರ್ಥರಾದವರು ಬರೆಯದುದರಿಂದ ಕೆಲವು ಸಮಯಗಳಲ್ಲಿ ಸತ್ಯವೂ ಮನೋಹರವಾಗದೆ ಹೋಗಬಹುದು. ಹೇಳಬೇಕಾದ ಕೆಲವು ಅಂಶಗಳನ್ನು ಹೇಳದಿರುವುದರಿಂದಾಗಲಿ, ಹೇಳಬಾರದ ಕೆಲವು ಅಂಶಗಳನ್ನು ಹೇಳಿರುವುದರಿಂದಾಗಲಿ ಹೇಳಿದ ಕೆಲವು ವಿಷಯಗಳನ್ನು ಮೃದುಮಧುರ ಶೈಲಿಯಲ್ಲಿ ಬರೆಯದೆ ಹೋಗಿರುವುದರಿಂದಾಗಲಿ ಇದು ನಿಮಗೆ ಮನೋಹರವಾಗಿ ಕಾಣಬರದೆಹೋದರೆ ನನ್ನ ಕೊರತೆಯನ್ನು ಮನ್ನಿಸಿ ಪತಿವ್ರತಾಶಿರೋಮಣಿಯಾದ ಸತ್ಯವತಿಯಲ್ಲಿ ಇಡಬೇಕಾದ ಗೌರವದಿಂದಾದರೂ ಇದನ್ನು ನೀವು ಹಲವುಸಾರಿ ಓದಿ ಆಕೆಯಂತೆ ನಡೆಯುವುದಕ್ಕೆ ಪ್ರಯತ್ನಪಡಿರಿ. ಈ ಚರಿತ್ರೆಯನ್ನು ಓದುವುದರಿಂದ ನಿಮ್ಮಲ್ಲಿ ಒಬ್ಬರು ಒಳ್ಳೆಯ ದಾರಿಗೆ ಬಂದರೂ ನನ್ನ ಪ್ರಯಾಸಕ್ಕೆಲ್ಲಾ ಅದೇಪ್ರತಿಫಲವೆಂದು ನಾನು ಸಂತೋಷಪಡುವೆನು. ಇದರಲ್ಲಿ ಪುರಾಣಗಳಂತೆ ಚಿತ್ರಕಥೆಗಳೊಂದೂ ಇಲ್ಲದಿದ್ದರೂ ನೀತಿಬೋಧೆಯ ವಿಷಯದಲ್ಲಿ ಮಾತ್ರ ಇದು ಯಾವ ಪುರಾಣಕ್ಕೂ ಕಡಿಮೆಯಾಗುದಲ್ಲವೆಂದು ನಂಬುವೆನು. ಇದನ್ನು ಓದಿದವರೆಲ್ಲರಿಗೂ ಅನೇಕ ವಿಷಯಗಳು ಮನಸ್ಸುಗಳಲ್ಲಿ ನಾಟುವುದಲ್ಲದೆ ಗುಣದೋಷಗಳು ಸ್ಪಷ್ಟವಾಗಿ ತಿಳಿದುಬರುವುವು. ವೆಂಕಟೇಶ ಮತ್ತು ಸುಂದರಮ್ಮ ಇವರಿಬ್ಬರ ಸ್ಥಿತಿಯನ್ನೂ ವಿಚಾರಿಸಿದರೆ ದಂಪತಿಗಳಿಬ್ಬರೂ ಓದುಬರಹಗಳನ್ನು ಕಲಿಯದೆ ಮೂಢರಾಗಿದ್ದಪಕ್ಷದಲ್ಲಿ ಅವರಿಗೆ ಅಗಾಗ್ಯೆ ನಿಷ್ಕಾರಣವಾಗಿ ಕಲಹಗಳುಉಂಟಾಗಿ ಸಂಪೂರ್ಣ ಸುಖವುಂಟಾಗದಿದ್ದರೂ ಪರಸ್ಪರ ಒಂದುರೀತಿಯಾಗಿ ಬೆರೆದು ಅವರು ಒಂದು ಬಗೆಯ ಸುಖಜೀವನವನ್ನೇ ಮಾಡುತ್ತಿರುವರೆಂದು ತಿಳಿಯಬರುತ್ತದೆ. ನಾರಾಯಣಮೂರ್ತಿ ಮತ್ತು ಸತ್ಯವತಿ ಇವರಿಬ್ಬರ ಸ್ಥಿತಿಯನ್ನೂ ವಿಚಾರಿಸಿದರೆ ಗಂಡಹೆಂಡಿರಿಬ್ಬರೂ ವಿದ್ಯಾವಂತರಾಗಿ ಯುಕ್ತಾಯುಕ್ತ ವಿವೇಕಶಾಲಿಗಳಾಗಿದ್ದರೆ ಅವಿವೇಕಿಗಳಾದ ನಂಟರು ಮುಂತಾದವರಿಂದ ನಿಷ್ಕಾರಣವಾಗಿ ಮನಸ್ತಾಪ ಬಂದಾಗ ಹೊರತು ಸಾಧಾರಣವಾಗಿ ಗೃಹವು ಭೂತಲಸ್ವರ್ಗದಂತೆ ಇದ್ದು

ಸಂಪೂರ್ಣಸುಖವು ದೊರೆತು ಅವರಿಬ್ಬರಿಗೆ ಮಾತ್ರವಲ್ಲದೆ ಲೋಕಕ್ಕೆಲ್ಲಾ ಮೇಲುಂಟಾಗುವುದೆಂದು ಸ್ಪಷ್ಟವಾಗುತ್ತಿದೆ. ರಾಮಸ್ವಾಮಿ ಮತ್ತು ಮಹಾಲಕ್ಷ್ಮಿ ಇವರಿಬ್ಬರ ಸ್ಥಿತಿಯನ್ನೂ ವಿಚಾರಿಸಿದರೆ ಗಂಡನು ಓದುಬಾರದ ಮೂಢನಾಗಿ ಹೆಂಡತಿ ವಿದ್ಯಾವತಿಯಾಗಿಯೂ ಗುಣವತಿಯಾಗಿಯೂ ಇದ್ದರೆ ಗಂಡನಿಂದ ಎಷ್ಟು ಮನಸ್ಸಂಕಟವುಂಟಾಗುತ್ತಾ ಇದ್ದರೂ ಮೃದುಮನಸ್ಕಳಾದ ಸ್ತ್ರೀಯು ಆತನ ಸ್ವಭಾವವನ್ನು ಕಂಡುಹಿಡಿದು ಸಮಯನೋಡಿ ಮಾಡಿದ ಹಿತೋಪದೇಶದಿಂದ ಪುರುಷನು ಒಂದಾನೊಂದುವೇಳೆ ಬುದ್ಧಿವಂತನಾಗಿ ಸಂಸಾರವು ಚೆನ್ನಾದೀತೆಂದು ತಿಳಿಯಬರುವುದು. ಸುಬ್ರಹ್ಮಣ್ಯ ಮತ್ತು ಸೂರಮ್ಮ ಇವರಿಬ್ಬರ ಸ್ಥಿತಿಯನ್ನೂ ವಿಚಾರಿಸಿದರೆ ಗಂಡನು ವಿದ್ಯಾವಂತನಾದ ಯೋಗ್ಯನಾಗಿದ್ದು ಹೆಂಡತಿಯು ಓದು ಬರಹಗಳನ್ನರಿಯದ ಗಯ್ಯಾಳಿಯಾಗಿದ್ದರೆ ಸ್ವಪ್ನಾವಸ್ಥೆಯಲ್ಲಿಯೂ ಸುಖವುಂಟಾಗದೆ ಮನೆಯು ಒಂದು ಮಹಾಶ್ಮಶಾನದಂತೆ ಇದ್ದು ಆ ದಂಪತಿಗಳಿಗೆ ಮಾತ್ರವಲ್ಲದೆ ನೆರೆಹೊರೆಯವರಿಗೆ ಸಹ ಆಯಾಸವುಂಟಾಗುತ್ತಿರುವುದೆಂದು ಚೆನ್ನಾಗಿ ಕಾಣಬರುವುದು. ಆದುದರಿಂದ ತಮ್ಮ ಮಕ್ಕಳಿಗೆ ಮದುವೆ ಮಾಡಬೇಕೆಂದಿರುವವರು ಇದನ್ನು ಓದಿ ಅವರ ಮುಂದಣ ಸುಖವನ್ನು ಚೆನ್ನಾಗಿ ಆಲೋಚಿಸಿ ಹಣವೇ ಮುಖ್ಯವಾದುದೆಂದೆಣಿಸದೆ ವಿದ್ಯೆಯಲ್ಲಿಯೂ ಬುದ್ಧಿಯಲ್ಲಿಯೂ ವಯಸ್ಸಿನಲ್ಲಿಯೂ ಯಾರಿಗೆ ಯಾರು ತಕ್ಕವರೋ ಅವರನ್ನು ಅವರಿಗೆ ಕೊಟ್ಟು ಮದುವೆಮಾಡಿ ಕೈಯಲ್ಲಾದ ಮಟ್ಟಿಗೂ ಅನುಕೂಲದಾಂಪತ್ಯವುಂಟಾಗುವಂತೆ ಪ್ರಯತ್ನಿಸುವರೆಂದು ನಂಬಿ ಈ ಪುಸ್ತಕವನ್ನು ಇಲ್ಲಿಗೆ ಮುಗಿಸಿರುವೆನು.

ಸಂಪೂರ್ಣಂ.

|| ಶ್ರೀ ||

# ನವೀನ ಗ್ರಂಥಗಳು

## ಕಾದಂಬರಿಗಳು.

| | | | |
|---|---|---|---|
| ಸೆಕ್ಸ್ಪಿಯರ್ ರಾಜನ ಪೂರ್ವದೇಶಯಾತ್ರೆ—ಹಾಸ್ಯರಸಪ್ರಧಾನವಾದದ್ದು | | | ೧-೦-೦ |
| ಅನಂಗಸುಂದರಿ—ನೀತಿಬೋಧಕವಾದ ಕಾದಂಬರಿ | | ... | ೦-೮-೦ |
| ತಾರಾಸುಂದರಿ—ಇದು ಅನಂಗಸುಂದರಿಗೆ ಉಪಸಂಹಾರ | | ... | ೦-೮-೦ |
| ರಾಧಾಮಾಧವಿ—ಸರಸವೂ ಮನೋಹರವೂ ಆದ ಕಾದಂಬರಿ | | ... | ೧-೮-೦ |
| ಸರಳಬಾಲೆ—ಇದು ರಾಧಾಮಾಧವಿಯ ಉಪಸಂಹಾರ | | ... | ೦-೮-೦ |
| ಮಾಧವಚಂದ್ರ—ನೀತಿಯುಕ್ತವೂ ಚಮತ್ಕಾರಿಕವೂ ಆದುದು | | ... | ೦-೬-೦ |
| ಸಂತಾಪಕ—ಮನೋಹರವಾದ ಸಂವಿಧಾನದಿಂದ ಕೂಡಿದ್ದು | | ... | ೦-೪-೦ |
| ಕುಮುದಿನಿ—ಇದೊಂದು ಬಂಗಾಳಿ ನಾವೆಲ್ಲಿನ ಭಾಷಾಂತರ | | ... | ೦-೬-೦ |
| ಚಂದ್ರಮತಿ—ನೀತಿಪ್ರದವಾದ ಕಥೆ | ... | ... | ೦-೬-೦ |
| ಭಾನುಮತಿ—ಇಂಗ್ಲೀಷ್ ನಾಟಕ ಕಥೆಯ ಭಾಷಾಂತರ | | ... | ೦-೩-೦ |
| ಸತ್ಯವತೀಚರಿತ್ರೆ—ಮನೋಹರವಾದ ಸಂಸಾರಚಿತ್ರ | | ,, | ೦-೬-೦ |
| ಕಳಾವತಿ | ,, | ,, | ೦-೩-೦ |
| ಪದ್ಮಿನಿ | ,, | ,, | ೦-೩-೦ |
| ವಸುಮತಿ | ,, | ,, | ೦-೩-೦ |
| ಚಾರುಮತಿ | ,, | ,, | ೦-೩-೦ |
| ಚಾತುರ್ಯವತಿ | ,, | ,, | ೦-೩-೦ |
| ವಿಲಕ್ಷಣಶಿಕ್ಷಣ | ,, | ,, | ೦-೩-೦ |
| ದಾನಕೇಸರಿವಿಲಾಸ | ,, | ,, | ೦-೩-೦ |
| ಸತೀಮಣಿ | ,, | ,, | ೦-೩-೦ |
| ಪ್ರಭಾವತಿ | ,, | ,, | ೦-೩-೦ |
| ಚಿತ್ರಕಳಾವತಿ | ,, | ,, | ೦-೩-೦ |
| ಸತೀರೋಹಣಿ—ಮನೋಹರವಾದ ಕಲ್ಪಿತಕಥೆ | | ... | ೦-೩-೦ |
| ಕಲಿಯುಗಸುಧನ್ವ | ... | ... | ೦-೩-೦ |
| ಕೌಶಲ | ... | ... | ೦-೩-೦ |

## (ಹಾಸ್ಯರಸಗರ್ಭಿತವಾದ ನಕಲಿಗಳು.)

| | | | |
|---|---|---|---|
| ಪ್ರಹಸನತರಂಗ | ... | ... | ೦–೩–೦ |
| ಹಾಸ್ಯಾರ್ಣವ | ... | ... | ೦–೬–೦ |
| ಮರುಳಾಟದ ಮದುವೆ | ... | ... | ೦–೬–೦ |
| ಪುನರ್ವಿವಾಹ ಪ್ರಹಸನ | ... | ... | ೦–೫–೦ |
| ಯೋಗನಿದ್ರಾಪ್ರಹಸನ | ... | ... | ೦–೨–೦ |
| ಪಶುಲೋಕರಹಸ್ಯ | ... | ... | ೧–೨–೦ |
| ಮೂಷಕಾಸುರವಿಜಯ | ... | ... | ೦–೧–೦ |
| ಮಹಾರಣ್ಯಾಪುರಾಧಿಪತ್ಯ | ... | ... | ೧–೪–೦ |

## ನಾಟಕಗಳು

ರಾಮಾಯಣ ನಾಟಕ ನಾಲ್ಕು ಭಾಗಗಳು ಬೇರೆಬೇರೆ

| | | | |
|---|---|---|---|
| ೧ ಸೀತಾಪರಿಣಯ | ... | ... | ೦–೪–೦ |
| ೨ ಸೀತಾಸುವರ್ಣಾಮೃಗ | ... | ... | ೦–೧೨–೦ |
| ೩ ಅಭಿಜ್ಞಾನಪ್ರದಾನ | ... | ... | ೦–೮–೦ |
| ೪ ರಾಘವಾಭ್ಯುದಯ | .. | ... | ೦–೮–೦ |
| ವಿಜಯಾಭ್ಯುದಯ (ಭಾರತನಾಟಕ ಆದಿಪರ್ವದಿಂದ ವಿರಾಟಪರ್ವ ಪೂರ್ತಿ) | | | ೦–೮–೦ |
| ಧ್ರುವವಿಜಯನಾಟಕ | ... | ... | ೦–೪–೦ |
| ಕೃಷ್ಣವಿಜಯವ್ಯಾಯೋಗ | ... | ... | ೦–೬–೦ |

## (ನವೀನನಾಟಕಗಳು)

| | | | |
|---|---|---|---|
| ನಿರುಪಮಾ—ಚಮತ್ಕಾರವಾದ ಹೊಸನಾಟಕ | | ... | ೦–೧೨–೦ |
| ಕನಕಲತಾಪರಿಣಯ | ... | ... | ೦–೧೦–೦ |
| ಉತ್ಪಲಕುಮಾರಿ | ... | ... | ೦–೮–೦ |
| ಕರ್ಪೂರಮಂಜರಿ | ... | ... | ೦–೬–೦ |
| ನಾಗಾನಂದ | ... | ... | ೦–೧೦–೦ |

## (ನೀತಿಬೋಧಕವಾದ ವಚನಗ್ರಂಥಗಳು)

| | | | |
|---|---|---|---|
| ಸುಭಾಷಿತಲಹರಿ | ... | ... | ೦–೬–೦ |
| ಸತೀಹಿತಬೋಧಿನಿ ಭಾಗ II. | ... | ... | ೦–೪–೦ |
| ,, III. | ... | ... | ೦–೨–೦ |
| ಸಂಗೀತ ಪಾರಿಜಾತ (ಹಾಡಿನಪುಸ್ತಕ) | ... | ... | ೦–೪–೦ |

**ಪುಸ್ತಕಗಳು ದೊರೆಯುವ ಸ್ಥಳ:—**

**೧. ಚಂದ್ರಿಕಾ ಬುಕ್‌ಸ್ಟಾಲ್, ಮೈಸೂರು.**